# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ – 591156

(ನ್ಯಾಕ್ ಮಾನ್ಯತೆ B+ ಗ್ರೇಡ್– 2021) **PM-USHA (MERU)**

## 97ನೇ ಸಾಮಾನ್ಯ ಸಿಂಡಿಕೇಟ್ ಸಭೆ ಹಾಗೂ 2026ನೇ ಸಾಲಿನ 1ನೇ ಸಭೆಯ ನಡಾವಳಿಗಳು

ದಿನಾಂಕ : ಸೋಮವಾರ, 09-02-2026

ಸಮಯ : ಪೂರ್ವಾಹ್ನ 11 : 00 ಘಂಟೆ

ಸ್ಥಳ : ಸಿಂಡಿಕೇಟ್ ಸಭಾಂಗಣ
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ಬೆಳಗಾವಿ.

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ – 591156

**(ನ್ಯಾಕ್ ಮಾನ್ಯತೆ B+ ಗ್ರೇಡ್– 2021) PM-USHA (MERU)**

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ **97ನೇ ಸಾಮಾನ್ಯ ಸಿಂಡಿಕೇಟ್** ಹಾಗೂ **2026ನೇ ಸಾಲಿನ 1ನೇ ಸಭೆಯನ್ನು** ದಿನಾಂಕ 09 ಫೆಬ್ರುವರಿ 2026 ರಂದು ಪೂರ್ವಾಹ್ನ 11.00 ಘಂಟೆಗೆ ಜರುಗಿದ ಸಭೆಗೆ ಹಾಜರಿದ್ದ/ಹಾಜರಿರದ ಸದಸ್ಯರುಗಳ ವಿವರ.

## I. ಹಾಜರಿದ್ದ ಸದಸ್ಯರು

| | |
|---|---|
| 1. **ಪ್ರೊ. ಸಿ. ಎಂ. ತ್ಯಾಗರಾಜ** | **ಕುಲಪತಿಗಳು ಹಾಗೂ ಅಧ್ಯಕ್ಷರು** |
| 2. ಡಾ. ಸುಷ್ಮಾ.ಆರ್. | ಸದಸ್ಯರು |
| 3. ಶ್ರೀ ವಿನೀತ್ ವ. ಜೋಶಿ | ಸದಸ್ಯರು |
| 4. ಶ್ರೀ ಈರಣ್ಣ ಬ. ಹಪ್ಪಲಿ | ಸದಸ್ಯರು |
| 5. ಶ್ರೀ ಆರ್. ಎಂ. ದೇವರಡ್ಡಿ | ಸದಸ್ಯರು |
| 6. ಶ್ರೀ ಜಗದೀಶ ಜೋಡಂಗಿ | ಸದಸ್ಯರು |
| 7. ಶ್ರೀ ಎಸ್. ಎ. ದೇಶಮುಖ್ | ಸದಸ್ಯರು |
| 8. ಶ್ರೀಮತಿ ಎಸ್. ಬಿ.ಢಂಗ | ಸದಸ್ಯರು |
| 9. ಡಾ. ಕಾವೇರಿ ಎಚ್.ಎಂ. | ಸದಸ್ಯರು |
| 10. ರಫೀ ಭಂಡಾರಿ | ಸದಸ್ಯರು |
| 11. ಶ್ರೀ. ರವೀಂದ್ರ ಎಂ. ನಾಯ್ಕರ್ | ಸದಸ್ಯರು |
| 12. ಡಾ. ಮಾರುತಿ ಎಚ್. ಮುಂಡರಗಿ | ಸದಸ್ಯರು |
| 13. ಡಾ. ಮಹಾಂತೇಶ ಕಂಬಾರ | ಸದಸ್ಯರು |
| 14. ಡಾ. ಎಸ್.ಎಸ್. ಅಂಗಡಿ | ಸದಸ್ಯರು |
| 15. ಪ್ರೊ.(ಶ್ರೀಮತಿ) ವ್ಹಿ ಎಸ್. ಶಿಗೇಹಳ್ಳಿ | ಸದಸ್ಯರು |
| 16. ಪ್ರೊ. ಡಿ. ಎನ್. ಪಾಟೀಲ್ ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 17. ಶ್ರೀ. ಸಂತೋಷ ಕಾಮಗೌಡ ಕೆ.ಎ.ಎಸ್. | **ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು** |

## II. ಹಾಜರಾಗದ ಸದಸ್ಯರು:

| | |
|---|---|
| 1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ | ಸದಸ್ಯರು |
| 2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ | ಸದಸ್ಯರು |
| 3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ | ಸದಸ್ಯರು |
| 4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ | ಸದಸ್ಯರು |
| 5. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ | ಸದಸ್ಯರು |

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ – 591156

(ನ್ಯಾಕ್ ಮಾನ್ಯತೆ B+ ಗ್ರೇಡ್– 2021) PM-USHA (MERU)

## ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡುವಳಿಗಳು

**ವಿಷಯ:** ದಿನಾಂಕ 09 ಫೆಬ್ರವರಿ 2026 ರಂದು ಸಿಂಡಿಕೇಟ್ ಸಭಾಂಗಣದಲ್ಲಿ ಜರುಗಿದ ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡುವಳಿಗಳು.

**ಉಲ್ಲೇಖ:**
1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (27) (28) (2)
2. ಮಾನ್ಯ ಕುಲಪತಿಗಳು ಸಭೆ ನಡೆಸಲು ನೀಡಿದ ಅನುಮೋದನೆ ದಿ: 20.01.2026.
3. ಸಿಂಡಿಕೇಟ್ ಪ್ರಾಧಿಕಾರ ಸಭೆ ನೋಟಿಸ್ ದಿನಾಂಕ: 20.01.2026.

**ಪ್ರಸ್ತಾವನೆ:**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (28)(2) ರ ಅನುಗುಣವಾಗಿ ಸಿಂಡಿಕೇಟ್ ಪ್ರಾಧಿಕಾರದ 97 ನೇ ಸಾಮಾನ್ಯ ಹಾಗೂ 2026 ನೇ ಸಾಲಿನ 01 ನೇ ಸಿಂಡಿಕೇಟ್ ಸಭೆಯನ್ನು ದಿನಾಂಕ: 09.02.2026 ರಂದು ಪೂರ್ವಾಹ್ನ 11.00 ಗಂಟೆಗೆ ಸಿಂಡಿಕೇಟ್ ಸಭಾಂಗಣ, ರಾಚವಿ, ಬೆಳಗಾವಿ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ಕುಲಸಚಿವರು ಸ್ವಾಗತಿಸಿದರು. ತದನಂತರ, ವಿಶ್ವವಿದ್ಯಾಲಯದ 13 ನೇ ಘಟಿಕೋತ್ಸವದ ಪೋಟೋವನ್ನು ಎಲ್ಲ ಸದಸ್ಯರಿಗೆ ವಿತರಿಸಲಾಯಿತು.

ಪ್ರಾಸ್ತಾವಿಕವಾಗಿ ಮಾತನಾಡಿದ ಮಾನ್ಯ ಕುಲಪತಿಗಳು, ಜಪಾನ ದೇಶದ ಪ್ರವಾಸ ಕೈಗೊಳ್ಳಲು ಅನುಮತಿ ನೀಡಿದ ಸಿಂಡಿಕೇಟ್ ಸಭೆಗೆ ಕೃತಜ್ಞತೆ ಸಲ್ಲಿಸಿ, ಸದರಿ ದೇಶದ 6 ವಿಶ್ವವಿದ್ಯಾಲಯಗಳು ಮತ್ತು 03 ಸರ್ಕಾರಿ ಸಂಸ್ಥೆಗಳನ್ನು ಭೇಟಿ ಮಾಡಿದ್ದು ಅಲ್ಲಿಯ ಶೈಕ್ಷಣಿಕ ವ್ಯವಸ್ಥೆ ಮೂಲ ಸೌಕರ್ಯ, ಸಂಶೋಧನೆ, ಪ್ರಯೋಗಾಲಯಗಳು, ವಿಶ್ವವಿದ್ಯಾಲಯಗಳಲ್ಲಿ ನೀಡಲಾಗುವ ಗುಣಾತ್ಮಕ ಶಿಕ್ಷಣ ಕುರಿತಾಗಿ ಅಧ್ಯಯನ ನಡೆಸಲಾಗಿದೆ. ಜಪಾನ ದೇಶದಲ್ಲಿ ಸಂಸ್ಕೃತಿ ಮತ್ತು ಭಾಷೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿದ್ದು ಕನಿಷ್ಠ ಪ್ರಮಾಣದಲ್ಲಿ ಕೃಷಿ ಮತ್ತು ಗರಿಷ್ಠ ಪ್ರಮಾಣದಲ್ಲಿ ಕೈಗಾರಿಕೆಯನ್ನು ಕೈಗೊಳ್ಳಲಾಗುತ್ತಿದೆ ಹಾಗೂ ಭಾರತದ ವಿಶ್ವವಿದ್ಯಾಲಯಗಳ ರಸಾಯನಶಾಸ್ತ್ರ ಭೌತಶಾಸ್ತ್ರ ಶಿಕ್ಷಣಶಾಸ್ತ್ರ ಮತ್ತು ಇಂಗ್ಲೀಷ ವಿಭಾಗಗಳೊಂದಿಗೆ ಒಡಂಬಡಿಕೆ (MoU) ಮಾಡಿಕೊಳ್ಳುವ ಚರ್ಚೆ ಉನ್ನತ ಮಟ್ಟದಲ್ಲಿ ಪ್ರಕ್ರಿಯೆಯಲ್ಲಿದ್ದು ಇದಕ್ಕೆ ಸಂಬಂಧಿಸಿದಂತೆ, ಇಲ್ಲಿನ ಅಧ್ಯಾಪಕರುಗಳಿಗೆ ಜಪಾನ ಭಾಷೆ ಕಲಿಕೆ, ತರಬೇತಿ, Fellowship ಕೂಡ ನೀಡಲಾಗುವುದು ಎಂಬ ಮಾಹಿತಿಯನ್ನು ಸಭೆಯೊಂದಿಗೆ ಹಂಚಿಕೊಂಡರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು Deshpande Foundation ಇವರ ಸಹಯೋಗದೊಂದಿಗೆ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವ ಮಹಾವಿದ್ಯಾಲಯಗಳಲ್ಲಿ ಕೌಶಲ್ಯ ಅಭಿವೃದ್ಧಿ ತರಬೇತಿಗಳನ್ನು ನೀಡುತ್ತಿದ್ದು ಈ ಕುರಿತಂತೆ India University Association General Secretary ಯಾದ ಶ್ರೀ ಪಂಕಜ ಮಿತ್ತಲ್ ಇವರು ಮೆಚ್ಚುಗೆ ವ್ಯಕ್ತಪಡಿಸಿರುವ ಮಾಹಿತಿಯನ್ನು ನೀಡಿದರು. ಇತ್ತೀಚೆಗೆ ಕೇಂದ್ರ ಸರ್ಕಾರದ ಪ್ರತಿಷ್ಠಿತ ಪದ್ಮಶ್ರೀ ಪ್ರಶಸ್ತಿ ಪುರಸ್ಕಾರಕ್ಕೆ ಆಯ್ಕೆ ಆಗಿರುವ ಕರ್ನಾಟಕದ ಪ್ರಮುಖ ರಾಜಕೀಯ ನಾಯಕರು, ಶಿಕ್ಷಣತಜ್ಞರು ಮತ್ತು ಉತ್ತರ ಕರ್ನಾಟಕದಲ್ಲಿ ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಗಳ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿರುವ ಮಾನ್ಯ ಡಾ. ಪ್ರಭಾಕರ ಕೋರೆ ಇವರಿಗೆ ವಿಶ್ವವಿದ್ಯಾಲಯದ ಪರವಾಗಿ ಅಭಿನಂದನೆ ಸಲ್ಲಿಸಿದರು.

| ಶೂನ್ಯ ಅವಧಿ ಚರ್ಚೆಗಳು |
|---|
| **ಡಾ. ಕಾವೇರಿ ಎಚ್. ಎಂ.,:-** |
| ಸಿಂಡಿಕೇಟ್ ಸಭೆಯ ಕಾರ್ಯವಿವರಣೆಗಳನ್ನು ದಾಖಲಿಸುವಾಗ ಆಗುತ್ತಿರುವ ಲೋಪದೋಷಗಳ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿ ಪತ್ರವನ್ನು ಸಲ್ಲಿಸಿದರು. ಸದರಿ ಪತ್ರದಲ್ಲಿನ ಪ್ರಮುಖ ಅಂಶಗಳು ಈ ಕೆಳಗಿನಂತಿವೆ. |

1. ದಿನಾಂಕ 04.12.2025 ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ವಿಶ್ವವಿದ್ಯಾಲಯದ ಅಧಿನಿಯಮ ಹಾಗೂ ನಿಯಮಾವಳಿಗಳ ಪ್ರಕಾರ ಆಹ್ವಾನಿತ ಸದಸ್ಯರು ಮಾತ್ರ ಸಿಂಡಿಕೇಟ್ ಸಭೆಯಲ್ಲಿ ಭಾಗವಹಿಸಬೇಕೆಂಬ ವಿಧಿಗೆ ವಿರುದ್ಧವಾಗಿ, ಆಹ್ವಾನವಿಲ್ಲದೆ ಸಿಂಡಿಕೇಟ್ ಸಭೆಗೆ ನಿರಂತರವಾಗಿ ಹಾಜರಾಗುತ್ತಿದ್ದ ಹಣಕಾಸು ಅಧಿಕಾರಿಯ ಉಪಸ್ಥಿತಿಗೆ ಸಭೆಯಲ್ಲಿ ಸ್ಪಷ್ಟವಾಗಿ ಲಿಖಿತವಾಗಿ ಆಕ್ಷೇಪ ವ್ಯಕ್ತಪಡಿಸಿದ್ದರೂ ಸಭೆಯ ನಡಾವಳಿಯಲ್ಲಿ ದಾಖಲಿಸಿರುವುದಿಲ್ಲ, ಈ ಕುರಿತು ಆಕ್ಷೇಪಣೆಗಳಿಗೆ ಲಿಖಿತವಾಗಿ ಮಾಹಿತಿ ಒದಗಿಸಲು ಕೋರಿದರು.

**ಸದರಿ ಆಕ್ಷೇಪಣೆಗೆ ಅಧ್ಯಕ್ಷರ ಮತ್ತು ಸದಸ್ಯ ಕಾರ್ಯದರ್ಶಿಯವರ ದಾಖಲೆಗಳು/ನಡಾವಳಿ ಆಧಾರದ ಮಾಹಿತಿ:**

ಕಳೆದ ಒಂದು ವರ್ಷದಿಂದ ಹಣಕಾಸು ಅಧಿಕಾರಿಗಳನ್ನು ಸಿಂಡಿಕೇಟ್ ಸಭೆಗೆ ವಿಶೇಷ ಆಹ್ವಾನಿತರಾಗಿ ಆಡಳಿತಾತ್ಮಕ ಪ್ರಾಧಿಕಾರಿಯಾದ ಮಾನ್ಯ ಕುಲಪತಿಗಳ ಅನುಮತಿ ದಿನಾಂಕ: 20.08.2024 ರ ಅನ್ವಯ ಹಣಕಾಸು ಅಧಿಕಾರಿಗಳಿಗೂ ಆಹ್ವಾನವನ್ನು ನೀಡಲಾಗಿರುತ್ತದೆ. ಅದರನ್ವಯ ಸಭೆಗೆ ಹಾಜರಾಗಿರುತ್ತಾರೆ. ಕರ್ನಾಟಕ ವಿಶ್ವವಿದ್ಯಾಲಯದ ಅಧಿನಿಯಮ-2000 ದನ್ವಯ ಯಾವುದೇ ಅಧಿಕಾರಿಗಳಿಗೆ ಪ್ರಯಾಣ ಭತ್ಯೆ ಮತ್ತು ಆಸನ ಭತ್ಯೆಯನ್ನು ನೀಡಲು ಅವಕಾಶವಿರುವುದಿಲ್ಲ ಮತ್ತು ಶಾಸನವು ರಚನೆಯಾಗಿರುವುದಿಲ್ಲ, ಹಾಗಾಗಿ, ಪ್ರಯಾಣ ಭತ್ಯೆ ಮತ್ತು ಆಸನ ಭತ್ಯೆಯನ್ನು ಹಣಕಾಸು ಅಧಿಕಾರಿಗಳಿಗೆ ನೀಡುತ್ತಿರುವುದಾಗಿ ಪ್ರಸ್ತಾಪಿಸಿರುವುದು ತಪ್ಪಾದ ಆಪಾದನೆಯಾಗಿರುತ್ತದೆ ಮತ್ತು ಕಳೆದ ಒಂದು ವರ್ಷದಿಂದ ಹಣಕಾಸು ವಿಷಯಗಳಿಗೆ ಸಂಬಂಧಿಸಿದಂತೆ ಆರ್ಥಿಕ ಶಿಸ್ತನ್ನು ಉಳಿಸಿಕೊಳ್ಳಲು ಅಂತಹ ಸಂದರ್ಭದಲ್ಲಿ ಅವರ ಸಲಹೆಯನ್ನು ಮಾತ್ರ ಪಡೆಯಲಾಗಿದೆ. ಯಾವುದೇ ಶಾಸನಾತ್ಮಕ ನಿರ್ಣಯದಲ್ಲಿ ಭಾಗಿಯಾಗಿರುವುದಿಲ್ಲ ಮತ್ತು ಪ್ರಯಾಣ ಭತ್ಯೆ ಮತ್ತು ಆಸನ ಭತ್ಯೆಯನ್ನು ನೀಡಿರುವುದಿಲ್ಲ. ಕಳೆದ ಒಂದು ವರ್ಷದ ಎಲ್ಲ ಸಿಂಡಿಕೇಟ್ ಸಭೆಗಳಲ್ಲಿ ಹಣಕಾಸು ಅಧಿಕಾರಿಗಳು ಭಾಗವಹಿಸುತ್ತಿರುವುದು ಮಾಹಿತಿ ಎಲ್ಲ ಸದಸ್ಯರ ಗಮನದಲ್ಲಿದೆ ಮತ್ತು ಆಕ್ಷೇಪಣೆ ನಂತರ ಹಣಕಾಸು ಅಧಿಕಾರಿಗಳನ್ನು ವಿಶೇಷ ಆಹ್ವಾನಿತರಾಗಿ ಆಹ್ವಾನಿಸುವುದನ್ನು ಕೈಬಿಡಲಾಗಿದೆ.

2. ಪರಿಣಿತರ/ತಜ್ಞರನ್ನು ಆಮಂತ್ರಿಸುವ ಟೀಂ ಅನ್ನು ನಿಯೋಜಿಸುವ ಪ್ರಸ್ತಾಪ ಬಂದ ಸಂದರ್ಭದಲ್ಲಿ ಅಧಿನಿಯಮ ಮತ್ತು ನಿಯಮಾವಳಿಗಳಲ್ಲಿನ ಶೈಕ್ಷಣಿಕ ವಿಷಯಗಳು ಮೊದಲು ಬೋರ್ಡ್ ಆಫ್ ಸ್ಟಡೀಸ್ (BOS) ನಲ್ಲಿ ಚರ್ಚಿಸಬೇಕೆಂಬ ವಿಧಿಯನ್ವಯ, ಮೊದಲು ಈ ವಿಚಾರವನ್ನು BOS ನಲ್ಲಿ ಚರ್ಚಿಸುವಂತೆ ಅಭಿಪ್ರಾಯವನ್ನು ವ್ಯಕ್ತಪಡಿಸಿದರೂ ಕೂಡ ಅದನ್ನು ದಾಖಲಿಸದೆ ಇರುವುದು.

**ಸದರಿ ಆಕ್ಷೇಪಣೆಗೆ ಅಧ್ಯಕ್ಷರ ಮತ್ತು ಸದಸ್ಯ ಕಾರ್ಯದರ್ಶಿಯವರ ದಾಖಲೆಗಳು/ನಡಾವಳಿ ಆಧಾರದ ಮಾಹಿತಿ:**

ಪ್ರತಿ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಎಲ್ಲ ಸದಸ್ಯರುಗಳಿಗೆ ಕಳುಹಿಸಲಾಗುತ್ತದೆ. ಸದರಿ ನಡಾವಳಿಗಳಲ್ಲಿ ಆಕ್ಷೇಪಣೆಗಳಿದ್ದಲ್ಲಿ ಅಥವಾ ಸದಸ್ಯರುಗಳ ವೈಯಕ್ತಿಕ ಅಭಿಪ್ರಾಯಗಳು/ಹೇಳಿಕೆಗಳು ದಾಖಲಾಗದಿದ್ದಲ್ಲಿ ಲಿಖಿತ ರೂಪದಲ್ಲಿ ತಿಳಿಸಲು ಎಲ್ಲ ಸದಸ್ಯರುಗಳಿಗೆ ಸಭೆಯ ನಡಾವಳಿಗಳೊಂದಿಗೆ ಪತ್ರವನ್ನು ಕೂಡ ಕಡ್ಡಾಯವಾಗಿ ಕಳುಹಿಸಲಾಗುತ್ತದೆ. ಆದರೆ, ಸದಸ್ಯರಾದ ಡಾ. ಕಾವೇರಿ.ಎಚ್.ಎಂ. ಇವರು ತಮ್ಮ ಆಕ್ಷೇಪಣೆಗಳ ಕುರಿತಾಗಿ ಯಾವುದೇ ಪತ್ರ ವ್ಯವಹಾರ ಮಾಡಿರುವುದಿಲ್ಲ, ಇವತ್ತೇ ಸಭೆಯ ಗಮನಕ್ಕೆ ತಂದಿರುತ್ತಾರೆ. ಆದಾಗ್ಯೂ ನಡವಳಿ ಕಳುಹಿಸಿದ ನಂತರ ನೀಡಿದ ಅವಕಾಶದಲ್ಲಿ ಅಗತ್ಯ ಬದಲಾವಣೆಗೆ ಸಕಾಲದಲ್ಲಿ ಪತ್ರ ಬರೆಯಲು ಸಾಧ್ಯವಾಗದೇ ಇದ್ದಲ್ಲಿ ಅನುಪಾಲನಾ ವರದಿಯನ್ನು ಮುಂದಿನ ಸಿಂಡಿಕೇಟ್ ಸಭೆಗಳಲ್ಲಿ ಸಭೆಯ ಅನುಮೋದನೆಗೆ ಕಡ್ಡಾಯವಾಗಿ ಮಂಡಿಸುತ್ತಿದ್ದು ಸದರಿ ಅನುಪಾಲನೆ ಹಂತದಲ್ಲಿಯೂ ಕೂಡ ಅಗತ್ಯ ಬದಲಾವಣೆಗೆ ಅವಕಾಶವಿದ್ದು ಈಗ ಪ್ರಸ್ತಾವಿಸಿರುವ ವಿಷಯಗಳ ಅನುಪಾಲನೆ ಇದೇ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿದ್ದು ಅದರಲ್ಲಿ ತಮ್ಮ ಆಕ್ಷೇಪಣೆ ಮತ್ತು ಸಲಹೆಯನ್ನು ಪರಿಗಣಿಸಲು ಸಭೆ ತೀರ್ಮಾನಿಸಿರುತ್ತದೆ.

ಸದರಿ ಪರಿಣಿತರ/ತಜ್ಞರನ್ನು ಆಮಂತ್ರಿಸುವ ಟೀಂ ನ್ನು ಪಠ್ಯಕ್ರಮದಲ್ಲಿ ನಾವಿನ್ಯತೆ ತರುವ ಉದ್ದೇಶದಿಂದ ರಾಷ್ಟೀಯ ಸಂಸ್ಥೆಗಳು ಮತ್ತು ದೇಶದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸಿದ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಹೆಸರು ಮಾಡಿರುವ ಗಣ್ಯರನ್ನು "Mentor" ಆಗಿ ಆಹ್ವಾನಿಸಲು ನಿರ್ಧರಿಸಲಾಗಿದೆ. ಸದರಿ ಪರಿಣಿತರು(Mentor)ನ್ನು "Special

Invitee" ಆಗಿ "ಅಭ್ಯಾಸ ಮಂಡಳಿ" ಸಭೆಗೆ ಆಹ್ವಾನಿಸಲಾಗುತ್ತದೆ ಹಾಗೂ ಸದರಿ ವಿಷಯ ಪರಿಣಿತರ ಹೆಸರುಗಳನ್ನು ಅಭ್ಯಾಸ ಮಂಡಳಿಯ ಅಧ್ಯಕ್ಷರ ಶಿಫಾರಸ್ಸಿನ ಮೇರೆಗೆ ಆಹ್ವಾನಿಸಲಾಗುತ್ತದೆ. ಸದರಿ ಪರಿಣಿತರು ಅಭ್ಯಾಸ ಮಂಡಳಿಯ ಅಧ್ಯಕ್ಷರಾಗಿರುವುದಿಲ್ಲ, ಸದರಿ ಮೆಂಟರ್‌ಗಳನ್ನು ಆಯಾ ವಿಭಾಗಗಳ ಮುಖ್ಯಸ್ಥರು ಸಂಬಂಧಿಸಿದ ಸಭೆಗಳಲ್ಲಿ ಚರ್ಚಿಸಿ ಅವರು ಸಲ್ಲಿಸುವ ಅರ್ಹ ವಿಷಯ ತಜ್ಞರನ್ನು ಅವರ ಶಿಫಾರಸ್ಸಿನ ನಂತರವೇ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದ್ದು ಅಭ್ಯಾಸ ಮಂಡಳಿ(ಬಿ.ಓ.ಎಸ್) ಸಮಕಾಲೀನ ಸ್ಪರ್ಧಾತ್ಮಕತೆಗೆ ತಕ್ಕಂತೆ ಸಮರ್ಥವಾಗಿ ಕಾರ್ಯನಿರ್ವಹಿಸಲು ಆಯಾ ವಿಭಾಗಗಳ ಆಯಾ ವಿಷಯಗಳಲ್ಲಿ ಸೇವೆ ಸಲ್ಲಿಸಿದ ಪರಿಣಿತರ ಸೇವೆಯನ್ನು ವಿಶ್ವವಿದ್ಯಾಲಯ ಬಳಸಿಕೊಳ್ಳಲು ನೆರವಾಗುವುದು ಎಂದು ಮಾನ್ಯ ಕುಲಪತಿಗಳು ಸ್ಪಷ್ಟಪಡಿಸಿದರು.

3. ಇ-ವಿದ್ಯಾ ಆ್ಯಪ್ ಹಾಗೂ ವರ್ಕ್‌ಬುಕ್ ಜಾರಿಗೆ ಸಂಬಂಧಿಸಿದಂತೆ ಚರ್ಚಿಸುವ ಸಂದರ್ಭದಲ್ಲಿ ಈ ಎರಡೂ ಕಾರ್ಯಕ್ರಮಗಳಿಗೆ ನಿಗದಿಪಡಿಸಿರುವ ಶುಲ್ಕವು ವಿದ್ಯಾರ್ಥಿಗಳಿಗೆ ಹೊರೆಯಾಗಲಿದೆ ಎಂದು ಸಭೆಯಲ್ಲಿ ಕೆಲ ಸದಸ್ಯರಿಂದ ಗಂಭೀರ ವಿರೋಧ ವ್ಯಕ್ತಪಡಿಸಲಾಗಿತ್ತು. ಈ ವಿಚಾರವನ್ನು ಕೂಡ ದಾಖಲು ಮಾಡಿರುವುದಿಲ್ಲ, ಇ-ವಿದ್ಯಾ ಆ್ಯಪ್ ಬಗ್ಗೆ ಈ ಹಿಂದಿನ ಸಭೆಯಲ್ಲಿ ಡೆಮೋ ಕೂಡ ಪ್ರಸ್ತುತಪಡಿಸಲಾಗಿತ್ತು. ಸದರಿ ಡೆಮೋ ಬಗ್ಗೆ ಅಸಮಾಧಾನ ವ್ಯಕ್ತಪಡಿಸಲಾಗಿದ್ದರೂ ನಡಾವಳಿಯಲ್ಲಿ ದಾಖಲಾಗಿರುವುದಿಲ್ಲ, ಇ-ವಿದ್ಯಾ ಆ್ಯಪ್ ನ್ನು ವಿಶ್ವವಿದ್ಯಾಲಯದಲ್ಲಿ ಜಾರಿಗೆ ತರಲಾಗಿದೆ.

**ಸದರಿ ಆಕ್ಷೇಪಣೆಗೆ ಅಧ್ಯಕ್ಷರ ಮತ್ತು ಸದಸ್ಯ ಕಾರ್ಯದರ್ಶಿಯವರ ದಾಖಲೆಗಳು/ನಡಾವಳಿ ಆಧಾರದ ಮಾಹಿತಿ:**

ಇ-ವಿದ್ಯಾ ಆ್ಯಪ್ ಕುರಿತು ಹಿಂದಿನ ಸಭೆಯಲ್ಲಿ ಡೆಮೊ ತರಗತಿಗಳನ್ನು ದಿನಾಂಕ: 12.08.2025 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಪ್ರಸ್ತುತಪಡಿಸಲಾಗಿತ್ತು. ಸದರಿ ಸಭೆಯಲ್ಲಿ ಅಧ್ಯಕ್ಷರೇ ಅಸಮಾಧಾನ ವ್ಯಕ್ತಪಡಿಸಿ ಗುಣಮಟ್ಟವನ್ನು ಸುಧಾರಿಸಿ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ಸೂಚಿಸಿದ್ದರು. ಇದಕ್ಕೆ ಸದಸ್ಯರು ಸಹಮತಿ ವ್ಯಕ್ತಪಡಿಸಿದ್ದರು. ಸದರಿ ಸೂಚನೆಯನ್ವಯ ದಿನಾಂಕ: 12.08.2025 ರ ಸಭೆಯ ನಡಾವಳಿಯಲ್ಲಿ(ಕ್ರಮ ಸಂಖ್ಯೆ 38, ನಡಾವಳಿ ಸಂಖ್ಯೆ 2025/08/XII) ಲಿಖಿತವಾಗಿ ದಾಖಲಾಗಿರುತ್ತದೆ. ಮುಂದುವರೆದು, ದಿನಾಂಕ: 30.09.2025 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಇ-ವಿದ್ಯಾ ಆ್ಯಪ್ ಕುರಿತಾಗಿ ಅಂದಾಜು 4000 ವಿಡಿಯೋ ಪಾಠಗಳಲ್ಲಿ ಯಾದೃಚ್ಛಿಕವಾಗಿ ಸಭೆ ಅವಲೋಕಿಸಿ ಸಂಬಂಧಿಸಿದ ಲಿಂಕನ್ನು ಸದಸ್ಯರಿಗೆ ಸಲ್ಲಿಸಲು ಮತ್ತು ಪರಿಶೀಲಿಸಿದ ನಂತರ ಯಾವುದೇ ಅಗತ್ಯ ಬದಲಾವಣೆ ಇದ್ದರೇ ಅದರನ್ವಯ ಗುಣಮಟ್ಟವನ್ನು ಯಾವಾಗಲೂ ಉತ್ಕೃಷ್ಟವಾಗಿರುವಂತೆ ನೋಡಿಕೊಳ್ಳಲು ಸಭೆಯು ಸೂಚಿಸಿರುತ್ತದೆ.

**ವರ್ಕ್‌ಬುಕ್ ಜಾರಿಗೆ** ಸಂಬಂಧಿಸಿದಂತೆ ಸದಸ್ಯರ ಆಕ್ಷೇಪಣೆಗಳನ್ನು ಒಪ್ಪಿದ ಸಭೆಯು ದಿನಾಂಕ : 12.08.2025 ರಂದು ನಡೆದ ಸಭೆಯ ನಡವಳಿಯಲ್ಲಿ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಅಭ್ಯಾಸ ಮಂಡಳಿ ತಯಾರಿಸಿದ ವರ್ಕ್‌ಬುಕ್ ಗಳನ್ನು ಮುದ್ರಿಸಿ ವಿತರಿಸುವ ಬದಲಾಗಿ ವಿಶ್ವವಿದ್ಯಾಲಯದ ವೆಬಸೈಟ್‌ನಲ್ಲಿ Soft Copy ನ್ನು ಅಳವಡಿಸಲು ನಿರ್ಧರಿಸಲಾಗಿದೆ. ಅದರಂತೆ ಕ್ರಮ ಕೈಗೊಳ್ಳಲಾಗಿದ್ದು ಸಭೆಯ ನಡಾವಳಿಗಳಲ್ಲಿಯೂ ಕೂಡ ದಾಖಲಾಗಿರುತ್ತದೆ. ಈ ಕುರಿತಂತೆ ವಿಶ್ವವಿದ್ಯಾಲಯವು ಭಾಷಾ ವಿಷಯಗಳನ್ನು ಹೊರತುಪಡಿಸಿ ಉಳಿದೆಲ್ಲ ವಿಷಯಗಳಿಗೆ ಉಚಿತವಾಗಿ ವೆಬಸೈಟ್‌ನಲ್ಲಿರುವ Soft Copy ನ್ನು ಬಳಸಿಕೊಳ್ಳಲು ಅವಕಾಶ ಕಲ್ಪಿಸಿದ್ದು ವಿದ್ಯಾರ್ಥಿಗಳಿಂದ ಹೆಚ್ಚುವರಿ ಶುಲ್ಕವನ್ನು ಆಕರಿಸಿರುವುದಿಲ್ಲ, ಸದಸ್ಯರ ಆಕ್ಷೇಪಣೆಗಳು ಮತ್ತು ಸಹಮತಿಗಳು ನಡವಳಿಯಲ್ಲಿ ದಾಖಲಾಗಿರುತ್ತವೆ. ಕನ್ನಡ ಮತ್ತು ಇಂಗ್ಲೀಷ ವಿಷಯಗಳಲ್ಲಿ ವರ್ಕಬುಕ್‌ಗಳನ್ನು ಪಠ್ಯಪುಸ್ತಕದಲ್ಲಿಯೇ ಅಳವಡಿಸಿ ಪ್ರಸಾರಾಂಗದಿಂದ ಒಪ್ಪಂದ ಮಾಡಿಕೊಂಡಿರುವ ಮುದ್ರಕರಿಗೆ ಮುದ್ರಿಸಲು ಅವಕಾಶ ಕಲ್ಪಿಸಿದೆ. ಇವರಿಂದ ವಿಶ್ವವಿದ್ಯಾಲಯಕ್ಕೆ ಯಾವುದೇ ಆರ್ಥಿಕ ಹೊರೆ ಇರದೇ ಒಪ್ಪಂದದ ಅನ್ವಯ ವಿಶ್ವವಿದ್ಯಾಲಯಕ್ಕೆ ರಾಯಧನ ಜಮೆಯಾಗಿರುತ್ತದೆ. ಇಲ್ಲಿಯವರೆಗೆ ಒಟ್ಟು ರೂ. 8, 97,354/-ಗಳು ರಾಯಧನ ವಿಶ್ವವಿದ್ಯಾಲಯಕ್ಕೆ ಜಮೆಯಾಗಿದೆ.

4. ಸೆಕ್ಷನ್ 8 FESMA ಕಂಪೆನಿಗೆ ಸಂಬಂಧಿಸಿದಂತೆ ಬೈಲಾದೊಂದಿಗೆ ಮರುಮಂಡಿಸುವಂತೆ ಕೋರಿದ್ದರೂ "ಮರುಮಂಡನೆ" ಎಂಬ ಪದವನ್ನು ಉದ್ದೇಶಪೂರ್ವಕವಾಗಿ ಕೈಬಿಡಲಾಗಿದೆ.

**ಸದರಿ ಆಕ್ಷೇಪಣೆಗೆ ಅಧ್ಯಕ್ಷರ ಮತ್ತು ಸದಸ್ಯ ಕಾರ್ಯದರ್ಶಿಯವರ ದಾಖಲೆಗಳು/ನಡಾವಳಿ ಆಧಾರದ ಮಾಹಿತಿ:**

ಸೆಕ್ಷನ 8 FESMA ಕಂಪನಿಗೆ ಸಂಬಂಧಿಸಿದ ವಿಷಯಸೂಚಿಯನ್ನು ಇವತ್ತಿನ ಸಭೆಗೆ ವಿವರವಾಗಿ ಮರು ಮಂಡಿಸಲಾಗಿದೆ. ಸದರಿ ಸೆಕ್ಷನ 8 ಕಂಪನಿಗೆ ವಿದ್ಯಾವಿಷಯಕ್ ಪರಿಷತ್ ಮತ್ತು ಸಿಂಡಿಕೇಟ್ ಈಗಾಗಲೇ ಅನುಮೋದನೆ ಮತ್ತು ಅನುಸಮರ್ಥನೆ ನೀಡಿರುವುದರಿಂದ ಸದಸ್ಯರ ಕೋರಿಕೆಯನ್ವಯ ಸದರಿ ಮಾಹಿತಿಯೊಂದಿಗೆ ಮರು ಮಂಡಿಸಲಾಗಿದೆ.

5. ದಿನಾಂಕ: 18/2/2025 ರಂದು ಇಂಗ್ಲೀಷ್ ವಿಭಾಗಕ್ಕೆ ವರ್ಕ್ ಬುಕ್ ಕಡ್ಡಾಯಗೊಳಿಸಿ, ದಿನಾಂಕ: 11/9/2025 ರಂದು ವರ್ಕ್ ಬುಕ್ ಕಡ್ಡಾಯಗೊಳಿಸುವುದರೊಂದಿಗೆ ವರ್ಕ್ ಬುಕ್ ಗಳನ್ನು ಶೇ 20% ಆಂತರಿಕ ಅಂಕಗಳಲ್ಲಿ ಅಳವಡಿಸುವಂತೆ ಸುತ್ತೋಲೆ ಕೂಡ ಹೊರಡಿಸಲಾಗಿದೆ.

**ಸದರಿ ಆಕ್ಷೇಪಣೆಗೆ ಅಧ್ಯಕ್ಷರ ಮತ್ತು ಸದಸ್ಯ ಕಾರ್ಯದರ್ಶಿಯವರ ದಾಖಲೆಗಳು/ನಡಾವಳಿ ಆಧಾರದ ಮಾಹಿತಿ:**

ವರ್ಕ್ ಬುಕ್‌ಗೆ ಮಾತ್ರ ಶೇ 20% ಆಂತರಿಕ ಅಂಕಗಳನ್ನು ನಿಗದಿಪಡಿಸಿರುವುದಿಲ್ಲ. ಇದು ಹಾಜರಾತಿ, Assignment, ವರ್ಕ್ ಬುಕ್ ಮತ್ತು ಟೆಸ್ಟ್‌ಗಳನ್ನು ಒಳಗೊಂಡು ಒಟ್ಟಾರೆಯಾಗಿ 20 ಅಂಕಗಳನ್ನು ನಿಗದಿಪಡಿಸಲಾಗಿದೆ. ದಿನಾಂಕ: 06.06.2025 ರ ವಿದ್ಯಾವಿಷಯಕ ಪರಿಷತ್ತಿನ ಅನುಮೋದನೆಯನ್ನು ಪಡೆಯಲಾಗಿದೆ

6. ಸಹಾಯಕ ಕುಲಸಚಿವರುಗಳಾದ ಶ್ರೀ ಮುರಗೇಶ್ ಮತ್ತು ಶ್ರೀ ಶ್ರೀನಿವಾಸ್ ಇವರುಗಳ ಕರ್ತವ್ಯದ ಬಗ್ಗೆ ಅಸಮಾಧಾನ ಇದೆ ಎಂದು ಸಿಂಡಿಕೇಟ್ ಸಭೆಗಳಲ್ಲಿ ಹಲವು ಬಾರಿ ಪ್ರಸ್ತಾಪಿಸಲಾಗಿದೆ. ಸದರಿ ಸಿಬ್ಬಂದಿಗಳ ಕುರಿತಾಗಿ ಒಂದು ಬಾರಿಯೂ ನಡಾವಳಿಯಲ್ಲಿ ದಾಖಲಾಗಿರುವುದಿಲ್ಲ ಮತ್ತು ಸಿಂಡಿಕೇಟ್ ಸಭೆಗೆ ಹಾಜರಾಗುವಂತೆ ತಿಳಿಸಲಾಗಿತ್ತು. ಆದರೆ ಅವರುಗಳು ಹಾಜರಾಗಿರುವುದಿಲ್ಲ.

**ಸದರಿ ಆಕ್ಷೇಪಣೆಗೆ ಅಧ್ಯಕ್ಷರ ಮತ್ತು ಸದಸ್ಯ ಕಾರ್ಯದರ್ಶಿಯವರ ದಾಖಲೆಗಳು/ನಡಾವಳಿ ಆಧಾರದ ಮಾಹಿತಿ:**

ಸಹಾಯಕ ಕುಲಸಚಿವರಾದ ಶ್ರೀ ಮುರುಗೇಶ ಇವರನ್ನು ಸಭೆಗೆ ಹಾಜರಾಗಲು ಸೂಚಿಸುವಂತೆ ಯಾವುದೇ ಚರ್ಚೆಯಾಗಿರುವುದಿಲ್ಲ. ಸಿಂಡಿಕೇಟ್ ಸಭೆಗೆ ಅಸಮರ್ಪಕ ಮಾಹಿತಿ ನೀಡಿರುವುದಕ್ಕೆ ಸಹಾಯಕ ಕುಲಸಚಿವರಾದ ಶ್ರೀ ಶ್ರೀನಿವಾಸ್ ಹಡಾಡಿ ಇವರ ಕುರಿತು ನಡಾವಳಿಯಲ್ಲಿ ದಾಖಲಾಗಿರುತ್ತದೆ. ಅದರನ್ವಯ ಇವರಿಗೆ ನೋಟಿಸ್ ಕೂಡ ಜಾರಿ ಮಾಡಿ ವಿವರಣೆ ಪಡೆಯಲಾಗಿದೆ ಮತ್ತು ಸಿಂಡಿಕೇಟ್ ಸೂಚನೆಯಂತೆ ಸಭೆಗೆ ಕೂಡ ಹಾಜರಾಗಿರುತ್ತಾರೆ.

7. ಅಧ್ಯಯನ ಪೀಠಗಳಿಗೆ ಸಂಬಂಧಿಸಿದ ಪರಿನಿಯಮಗಳನ್ನು ಪುನರ್ ಪರಿಶೀಲಿಸುವುದು.

**ಸದರಿ ಆಕ್ಷೇಪಣೆಗೆ ಅಧ್ಯಕ್ಷರ ಮತ್ತು ಸದಸ್ಯ ಕಾರ್ಯದರ್ಶಿಯವರ ದಾಖಲೆಗಳು/ನಡಾವಳಿ ಆಧಾರದ ಮಾಹಿತಿ:**

**ಕ್ರಮವಹಿಸಲಾಗುವುದು.**

III. ಡಾ. ಬಿ. ಆರ್. ಅಂಬೇಡ್ಕರ ಅಧ್ಯಯನ ಪೀಠದ ಸಲಹೆ ಸಮಿತಿಯಿಂದ ತಮ್ಮನ್ನು ಕೈಬಿಡಲಾಗಿರುವ ವಿಷಯವನ್ನು ಸದಸ್ಯರಾದ ಡಾ. ಕಾವೇರಿ. ಎಚ್. ಎಂ. ಇವರು ಸಭೆಯ ಗಮನಕ್ಕೆ ತಂದರು ಮತ್ತು ವಿವರವಾದ ಲಿಖಿತ ಆಕ್ಷೇಪಣೆಯನ್ನು ಕುಲಸಚಿವರಿಗೆ ಸಲ್ಲಿಸಿದರು ಹಾಗೂ ಕರ್ನಾಟಕ

ವಿಶ್ವವಿದ್ಯಾಲಯದ ಅಧಿನಿಯಮ-2010 ರ ಸಂಖ್ಯೆ 29 ರ (i) (t) ಮೂಲಕ ಪ್ರದತ್ತವಾದ ಅಧಿಕಾರವನ್ನು ಬಳಸಿ ಆದೇಶವನ್ನು ಅಮಾನ್ಯಗೊಳಿಸಬೇಕೆಂದು ಕೋರಿದರು.

**ಸದರಿ ಆಕ್ಷೇಪಣೆಗೆ ಅಧ್ಯಕ್ಷರ ಮತ್ತು ಸದಸ್ಯ ಕಾರ್ಯದರ್ಶಿಯವರ ದಾಖಲೆಗಳು/ನಡಾವಳಿ ಆಧಾರದ ಮಾಹಿತಿ:**

ಹಣಕಾಸು ಸಮಿತಿ ನಿರ್ಣಯ 2022/1/5, ದಿನಾಂಕ: 26.08.2022, ವಿಶ್ವವಿದ್ಯಾಲಯದ ವಿದ್ಯಾವಿಷಯಕ್ ಪರಿಷತ್ ಸಭೆಯ ನಡಾವಳಿ ಸಂ: 2012/12/02, ದಿನಾಂಕ: 28.10.2022 ಮತ್ತು ಸಿಂಡಿಕೇಟ್ ಸಭೆಯ ನಡಾವಳಿ ಸಂ: 2022/12/VI, ದಿನಾಂಕ: 07.12.2022 ರಲ್ಲಿ "ಡಾ. ಬಿ. ಆರ್. ಅಂಬೇಡ್ಕರ ಪೀಠ ಸಲಹಾ ಸಮಿತಿ" ಕರಡು ಪರಿನಿಯಮವು ಅನುಮೋದನೆಗೊಂಡಿರುತ್ತದೆ. ಸದರಿ ಪರಿನಿಯಮವನ್ನು ಘನತೆವತ್ತ ರಾಜ್ಯಪಾಲರ ಅನುಮೋದನೆಗಾಗಿ ದಿನಾಂಕ: 23.12.2022 ರಂದು ಸಲ್ಲಿಸಲಾಗಿದೆ. ಸದರಿ ಪರಿನಿಯಮದಲ್ಲಿ ಓರ್ವ ಸಿಂಡಿಕೇಟ್ ಸದಸ್ಯರು ಮಾತ್ರ ಸಲಹಾ ಸಮಿತಿಯಲ್ಲಿ ಸೇರ್ಪಡಿಸಬೇಕೆಂದು ನಿಯಮವಿರುತ್ತದೆ. ಈಗಾಗಲೇ ಸಿಂಡಿಕೇಟ್ ಸದಸ್ಯರಾದ ಶ್ರೀ ರವೀಂದ್ರ ನಾಯ್ಕರ ಇವರು ಸದರಿ ಸಲಹಾ ಸಮಿತಿಯಲ್ಲಿ ಸದಸ್ಯರಿರುವ ಮಾಹಿತಿಯನ್ನು ಸಭೆಗೆ ನೀಡಲಾಯಿತು ಹಾಗೂ ಪರಿನಿಯಮದನ್ವಯ ಕ್ರಮ ಕೈಗೊಳ್ಳಲಾಗಿದೆ ಎಂದು ಸ್ಪಷ್ಟೀಕರಣ ನೀಡಲಾಯಿತು.

ಸದಸ್ಯರಾದ ಡಾ. ಮಹಾಂತೇಶ ಕಂಬಾರ ಇವರು "ಡಾ. ಬಿ. ಆರ್. ಅಂಬೇಡ್ಕರ ಪೀಠದ" ದ ಸಲಹಾ ಸಮಿತಿಗೆ ಡಾ. ಕಾವೇರಿ.ಎಚ್.ಎಮ್. ಇವರನ್ನು ಸದಸ್ಯರಾಗಿ ನೇಮಕ ಮಾಡಲಾಗಿತ್ತು. ಇದಕ್ಕೆ ಸಂಬಂಧಿಸಿದಂತೆ ಸದರಿ ಸದಸ್ಯರು ಪೀಠದ ಶ್ರೇಯೋಭಿವೃದ್ಧಿಗೆ ಈಗಾಗಲೇ ಯೋಜನೆಯನ್ನು ರೂಪಿಸಿಕೊಂಡಿರುತ್ತಾರೆ. ಕಾರಣ, ಡಾ. ಕಾವೇರಿ.ಎಚ್.ಎಂ. ಇವರನ್ನು ಸಲಹಾ ಸಮಿತಿಯಲ್ಲಿ ಸದಸ್ಯರಾಗಿ ಮುಂದುವರೆಸಲು ಸಲಹೆ ನೀಡಿದರು ಹಾಗೂ ಇತರೇ ಸದಸ್ಯರುಗಳು ಸಹಮತಿ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ, "ಡಾ. ಬಿ. ಆರ್. ಅಂಬೇಡ್ಕರ ಪೀಠದ" ದ ಸಲಹಾ ಸಮಿತಿಗೆ ಡಾ. ಕಾವೇರಿ.ಎಚ್.ಎಂ ಇವರನ್ನು ಸಿಂಡಿಕೇಟ್‌ನಿಂದ ಎರಡನೇ ಸದಸ್ಯರಾಗಿ ಸೇರಿಸಿ ಆದೇಶ ಹೊರಡಿಸಲು ಸಭೆಯು ತೀರ್ಮಾನಿಸಿತು. ಅದರಂತೆ, ಅದೇ ದಿನ ಆದೇಶ ಹೊರಡಿಸಲಾಯಿತು.

ದಿನಾಂಕ: 09 ಮತ್ತು 10 ಫೆಬ್ರುವರಿ 2026 ರ ಸಿಂಡಿಕೇಟ್ ಸಭೆಗಳ ಕಾರ್ಯವಿಧಾನದ ಬಗ್ಗೆ ಸಲ್ಲಿಸಿರುವ ಮನವಿ"

ಸಭೆಯಲ್ಲಿ 30 ವಿಷಯಸೂಚಿಗಳು ಮತ್ತು 250 ಪುಟಗಳ ದಾಖಲೆಗಳನ್ನು ಒದಗಿಸಲಾಗಿದೆ. ಇಷ್ಟು ವಿಷಯಗಳನ್ನು ಚರ್ಚಿಸಲು ಪೂರ್ವಸಿದ್ಧತೆ ಮತ್ತು ಸಮಯ ನಿರ್ವಹಣೆ ಅತೀ ಅಗತ್ಯ ಅದಕ್ಕಾಗಿ ದಾಖಲೆಗಳನ್ನು ಮುಂಚಿತವಾಗಿ ವಿತರಿಸಲು ಮತ್ತು ಸಭೆ ದಿನಾಂಕ: 09 ರಂದು ಮೂರು ಗಂಟೆಗಳ ವಿಳಂಬವಾಗಿದ್ದು ಮತ್ತು ದಿನಾಂಕ: 10 ರಂದು ಮಧ್ಯದಲ್ಲಿ ಬೋಧಕ Grievance ಪ್ರಸ್ತಾವನೆಗಳ ಕಾರಣದಿಂದ ಎರಡು ಗಂಟೆಗಳ ವ್ಯತ್ಯಯ. ಇದರಿಂದ, ಪ್ರಮುಖ ವಿಷಯಗಳ ಚರ್ಚೆಗೆ ಸಮಯ ಕಡಿಮೆಯಾಯಿತು. ಸಭೆ ಆರಂಭವಾಗಿದ್ದು ಕೂಡ 12.30 ನಿಮಿಷಕ್ಕೆ ಸದಸ್ಯರ ಅಭಿಪ್ರಾಯ ದಾಖಲಿಸಲು ಮಾತನಾಡದಂತೆ ನಿರ್ಬಂಧವಿತ್ತು.

**ಸದರಿ ಆಕ್ಷೇಣೆಗೆ ಅಧ್ಯಕ್ಷರ ಮತ್ತು ಸದಸ್ಯ ಕಾರ್ಯದರ್ಶಿಯವರ ದಾಖಲೆಗಳು/ನಡಾವಳಿ ಆಧಾರದ ಮಾಹಿತಿ:**

ಸಿಂಡಿಕೇಟ್ ವಿಶ್ವವಿದ್ಯಾಲಯದ ಅತ್ಯುನ್ನತ ಪ್ರಾಧಿಕಾರವಾಗಿದೆ. ಮಹತ್ವದ ಎಲ್ಲ ವಿಷಯಗಳನ್ನು ಸಿಂಡಿಕೇಟ್ ಗಮನಕ್ಕೆ ತರಬೇಕಾಗಿದ್ದು ಅದರಂತೆ ವಿಷಯಸೂಚಿಗಳನ್ನು ಸಿದ್ಧಪಡಿಸಲಾಗಿದೆ. ಆದಾಗ್ಯೂ ಸಮಯದ ಅಭಾವವನ್ನು ಪರಿಗಣಿಸಿ ಸಿಂಡಿಕೇಟ್ ಸಭೆಯನ್ನು ಎರಡನೇ ದಿನವು ಮುಂದುವರೆಸಲಾಗಿದೆ. ಶೂನ್ಯ ವೇಳೆಯಲ್ಲಿ ಸಾಕಷ್ಟು ಸಮಯವು ವ್ಯಯವಾಗಿರುವುದರಿಂದ ವಿಷಯಸೂಚಿಗಳು ನಿಗದಿತ ವೇಳೆಯಲ್ಲಿ ಚರ್ಚಿಸಿ ನಿರ್ಣಯಿಸಲು ಸಾಧ್ಯವಾಗಿರುವುದಿಲ್ಲ ಸಭೆಯ ಆರಂಭದಲ್ಲಿ ಬೋಧಕ ಸಿಬ್ಬಂದಿಗಳು ತಮ್ಮ ಅಹವಾಲುಗಳನ್ನು ಚರ್ಚಿಸಿ ಪರಿಹಾರ ನೀಡಬೇಕೆಂದು ಮಾನ್ಯ ಕುಲಪತಿಗಳಿಗೆ ಒತ್ತಾಯಿಸಿದ್ದರಿಂದ ಮೊದಲನೇ ದಿನ ಮಾತ್ರ ಸಭೆ 45 ನಿಮಿಷ ವಿಳಂಬವಾಗಿ ಆರಂಭವಾಗಿರುತ್ತದೆ.

ಎರಡನೇ ದಿನ ಮಧ್ಯಾಹ್ನ 12 ಗಂಟೆಗೆ ಸಭೆ ನಿಗದಿಪಡಿಸಿದರೂ ಕೆಲವು ಸದಸ್ಯರು ಆಗಮಿಸಲು ವಿಳಂಬವಾಗಿರುವುದರಿಂದ 12.30 ಕ್ಕೆ ಸಭೆ ಆರಂಭಿಸಲಾಗಿದೆ. ಸರ್ವ ಸದಸ್ಯರಿಗೂ ಪ್ರತಿ ವಿಷಯದದಲ್ಲಿ ಅಭಿಪ್ರಾಯವನ್ನು ಮಂಡಿಸಲು ಅವಕಾಶ ಕಲ್ಪಿಸಲಾಗಿದೆ.

**ಶ್ರೀ ರಫೀ ಭಂಡಾರಿ:-**

1. ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಬೋಧಕ, ಬೋಧಕೇತರ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳ ಸಮಸ್ಯೆಗಳನ್ನು ಪರಿಹರಿಸಲು "RCU Adalat" ಪ್ರಾರಂಭಿಸಲು ಸಲಹೆ ನೀಡಿದರು.
2. ಅಲ್ಪಸಂಖ್ಯಾತ ಸಮುದಾಯ (Minority Community (Mulsim/Jain/Christian/Sikh..etc) ಮಹಾವಿದ್ಯಾಲಯಗಳಿಗೆ ವಿಧಿಸಲಾಗುವ ಸಂಯೋಜನಾ ಶುಲ್ಕದಲ್ಲಿ ವಿನಾಯಿತಿ ನೀಡುವುದು.
3. ಮೌಲಾನಾ ಅಬ್ದುಲ್ ಕಲಾಂ ಆಜಾದ್ ಇವರ ಅಧ್ಯಯನ ಕೇಂದ್ರ ಪ್ರಾರಂಭಿಸುವುದು ಮತ್ತು ಸ್ಮಾರಕ ಭವನವನ್ನು ವಿಶ್ವವಿದ್ಯಾಲಯದ ಆವರಣದಲ್ಲಿ ತೆರೆಯುವುದು. ಜನ್ಮ ದಿನವನ್ನು ಆಯೋಜಿಸುವುದು.
4. PM-Usha ಯೋಜನೆ ವತಿಯಿಂದ ವಿಜಯಪುರದಲ್ಲಿ Tourism ಕುರಿತಾಗಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು.

**ಅಧ್ಯಕ್ಷರು ಮತ್ತು ಎಲ್ಲ ಸದಸ್ಯರು ಸಂಖ್ಯೆ 2 ನ್ನು ಹೊರತುಪಡಿಸಿ ಮೇಲಿನ ಅಂಶಗಳಿಗೆ ಸಹಮತಿ ವ್ಯಕ್ತಪಡಿಸಿ ಈ ಬಗ್ಗೆ ಹಂತ-ಹಂತವಾಗಿ ಕ್ರಮ ಕೈಗೊಳ್ಳಲು ನಿರ್ಣಯಿಸಲಾಯಿತು. ಮುಂದುವರೆದು, ಸಂಖ್ಯೆ 2 ಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವ ಅಲ್ಪಸಂಖ್ಯಾತ(Minority) ಮಹಾವಿದ್ಯಾಲಯಗಳ ಪಟ್ಟಿಯೊಂದಿಗೆ ಮುಂದಿನ ಸಭೆಗೆ ಮಂಡಿಸಲು ನಿರ್ಧರಿಸಲಾಯಿತು.**

**ಶ್ರೀ ವಿನೀತ ಜೋಶಿ:-**

ಸಿಂಡಿಕೇಟ್ ಸಭೆಯನ್ನು ಹಿಂದಿನ ಸಿಂಡಿಕೇಟ್ ಸಭೆಯ ನಂತರ 11 ದಿನ ವಿಳಂಬವಾಗಿ ಆಯೋಜಿಸಿದ್ದು ಕರ್ನಾಟಕ ವಿಶ್ವವಿದ್ಯಾಲಯದ ಕಾಯ್ದೆ-2000 ಕಲಂ 28(2) ರ ಅನ್ವಯ 56 ದಿನಗಳಲ್ಲಿ(8 ವಾರಗಳು) ಆಯೋಜಿಸಲು ನಿರ್ದಿಷ್ಟಪಡಿಸಿದ್ದು ಇದರ ಉಲ್ಲಂಘನೆಯಾಗಿರುವುದಾಗಿ ಮತ್ತು 28 ವಿಷಯಸೂಚಿಗಳು 148 ಪುಟಗಳು ಮತ್ತು ಅಂದಾಜು 400 ಪುಟಗಳ ಸಂಬಂದಿಸಿದ ದಾಖಲೆಗಳನ್ನು ಕನಿಷ್ಠ 7 ದಿನ ಮುಂಚಿತವಾಗಿ ಕಳುಹಿಸಿದ್ದಲ್ಲಿ ಸದಸ್ಯರಿಗೆ ವಿಷಯಗಳನ್ನು ಸಮಗ್ರವಾಗಿ ಅವಲೋಕಿಸಿ ಚರ್ಚಿಸಲು ಅವಕಾಶ ಕಲ್ಪಿಸಬೇಕಿದ್ದು ಅದಕ್ಕಾಗಿ ಸಿಂಡಿಕೇಟ್ ಸಭೆಯನ್ನು 1 ಗಂಟೆ ಮುಂದೂಡಿ ನಿರ್ವಹಿಸಬಹುದಾದ ವಿಷಯಸೂಚಿ ಸಿದ್ಧಪಡಿಸಲು ಅಥವಾ ಸಭೆಯನ್ನು ಮುಂದೂಡಲು ಕೋರಿ ಲಿಖಿತ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ.

**ಸದರಿ ಆಕ್ಷೇಣೆಗೆ ಅಧ್ಯಕ್ಷರ ಮತ್ತು ಸದಸ್ಯ ಕಾರ್ಯದರ್ಶಿಯವರ ದಾಖಲೆಗಳು/ನಡಾವಳಿ ಆಧಾರದ ಮಾಹಿತಿ:**

ಮಾನ್ಯ ಕುಲಪತಿಗಳು ಜಪಾನ ಪ್ರವಾಸದಲ್ಲಿ ಕೈಗೊಂಡಿದ್ದರಿಂದ ಹಾಗೂ ವಿವಿಧ ತುರ್ತು ಆಡಳಿತಾತ್ಮಕ ಕಾರ್ಯನಿಮಿತ್ಯ ಸಚಿವಾಲಯ ಮತ್ತು ಸರ್ಕಾರದ ವಿವಿಧ ಕಛೇರಿಗಳ ಕಾರ್ಯನಿಮಿತ್ಯ ಹಾಗೂ ಕೆಲವು ಸದಸ್ಯರ ಕೇಂದ್ರ ಸ್ಥಾನದಲ್ಲಿ ಇರದೇ ಇರುವುದರಿಂದ ಅವರ ಕೋರಿಕೆ ಮೇರೆಗೆ ನಿಗದಿತ ವೇಳೆಯಲ್ಲಿ ಸಭೆ ಆಯೋಜನೆಯಾಗಿರುವುದಿಲ್ಲ. ಕರ್ನಾಟಕ ವಿಶ್ವವಿದ್ಯಾಲಯದ ಕಾಯ್ದೆ-2000 ಕಲಂ 28(2) ರನ್ವಯ ವರ್ಷದಲ್ಲಿ ಕನಿಷ್ಠ 8 ಸಭೆಗಳನ್ನು ಆಯೋಜಿಸಬೇಕೆಂದು ನಿಯಮವಿದ್ದು 2025 ನೇ ಸಾಲಿನಲ್ಲಿ ಒಟ್ಟು 10 ಸಭೆ ಆಯೋಜಿಸಲಾಗಿದೆ. ಅದಾಗ್ಯೂ ಮುಂದಿನ ಸಭೆಗಳನ್ನು ಕಲಂ 28(2) ರನ್ವಯ ವಿಳಂಬವಿಲ್ಲದೇ ಆಯೋಜಿಸಲು ಕ್ರಮ ವಹಿಸಲಾಗುವುದು ಎಂದು ಸ್ಪಷ್ಟಪಡಿಸಲಾಯಿತು.

**ಡಾ. ಮಹಾಂತೇಶ ಕಂಬಾರ:**

ಸದಸ್ಯರಾದ ಶ್ರೀ ರಫೀ ಭಂಡಾರಿ ಇವರು ಇಡೀ ಕರ್ನಾಟಕದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪಡೆದ ಏಕೈಕ ಸಿಂಡಿಕೇಟ್ ಸದಸ್ಯರಾಗಿರುತ್ತಾರೆ. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ನಿಂದ ರಾಜಕೀಯ ಜೀವನ ಆರಂಭಿಸಿ ಜಿಲ್ಲಾಧ್ಯಕ್ಷರಾಗಿ, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾಗಿ ಕಾರ್ಯನಿರ್ವಹಿಸಿರುತ್ತಾರೆ ಮತ್ತು ವಿವಿಧ ಪ್ರಭಾವಿ ರಾಜಕೀಯ ವ್ಯಕ್ತಿಗಳೊಂದಿಗೆ ಉತ್ತಮ ಬಾಂದವ್ಯ/ಒಡನಾಟ ಹೊಂದಿರುತ್ತಾರೆ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪತ್ರಕರ್ತ ಹಾಗೂ ಸಿಂಡಿಕೇಟ್ ಸದಸ್ಯರಾದ ಶ್ರೀ ರಫೀ ಭಂಡಾರಿ ಇವರ ರಾಜಕೀಯ, ಪತ್ರಿಕಾ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಮಾಡಿರುವ ಜೀವಮಾನದ ಸಾಧನೆಗಾಗಿ, ಪತ್ರಕರ್ತ ಬಳಗ ಮತ್ತು ಆಪ್ತ ಮಿತ್ರರರು ಹಣ ಸಂಗ್ರಹಿಸಿ, ಇತ್ತೀಚಿಗೆ "ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ವತಿಯಿಂದ ಆಯೋಜಿಸಿದ ದತ್ತಿ ನಿಧಿ ಉಪನ್ಯಾಸ ಸ್ಥಾಪನೆಯ ಕಾರ್ಯಕ್ರಮದಲ್ಲಿ ಘೋಷಿಸಿರುವುದು ಮತ್ತು ಅವರಿಗೆ ಸನ್ಮಾನ ಮಾಡಿರುವುದನ್ನು ಮತ್ತು ಅದಕ್ಕೆ ಮಾನ್ಯ ಕುಲಪತಿಗಳು ಸಾಕ್ಷಿಯಾಗಿರುವುದನ್ನು ವಿಶ್ವವಿದ್ಯಾಲಯ ಮತ್ತು ಸಿಂಡಿಕೇಟ್ ಸಭೆ ಸದಸ್ಯರಿಗೆ ತಿಳಿಸಿ, ಅಭಿನಂದನೆ ಸಲ್ಲಿಸಿದರು. ಸರ್ವ ಸದಸ್ಯರು ಸರ್ವಾನುಮತದಿಂದ ಅಭಿನಂದನೆಗಳನ್ನು ಸಲ್ಲಿಸಿದರು.

2. ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ ಸ್ನಾತಕ ಬಿ.ಎ/ಬಿ.ಎಸ್ಸಿ ಕೋರ್ಸ್‌ಗಳಲ್ಲಿ ಮಾನವಶಾಸ್ತ್ರ ವಿಷಯವನ್ನು ಅಳವಡಿಸಲು ಮನವಿಯನ್ನು ಸಲ್ಲಿಸಿದ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲು ಸಭೆಯು ಅನುಮೋದನೆ ನೀಡಿತು.

**ತದನಂತರ ಕುಲಸಚಿವರು ಈ ಕೆಳಕಾಣಿಸಿದಂತೆ ವಿಷಯಸೂಚಿಗಳನ್ನು ಪ್ರಸ್ತಾಪಿಸಿದರು.**

| ಕ್ರ.ಸಂ | ಸಂಖ್ಯೆ | ಕಾರ್ಯಸೂಚಿ ವಿವರ ಹಾಗೂ ಕೈಗೊಂಡ ತೀರ್ಮಾನಗಳು |
|---|---|---|
| 01 | 2026/02/01 | ದಿನಾಂಕ: 30.09.2025 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆ ಹಾಗೂ ದಿನಾಂಕ: 24.11.2025 ಮತ್ತು 04.12.2025 ರಂದು ನಡೆದ ವಿಶೇಷ ಸಭೆಗಳ ಗೊತ್ತುವಳಿಗಳ ಅನುಪಾಲನಾ ವರದಿಯನ್ನು ದೃಢೀಕರಣಕ್ಕಾಗಿ ಸಭೆಗೆ ಮಂಡಿಸಲಾಯಿತು.<br><br>ದಿನಾಂಕ: 30.09.2025 ರ ವಿಷಯಸೂಚಿ ಸಂಖ್ಯೆ 12 ವಿದ್ಯಾರ್ಥಿಗಳ ವಸತಿನಿಲಯದ ಶುಲ್ಕಗಳನ್ನು ಪರಿಷ್ಕರಿಸಿರುವುದನ್ನು ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ಎರಡು ವಸತಿನಿಲಯಗಳಿಗೆ ಏಕರೂಪದ ಶುಲ್ಕ ವಿಧಿಸುವಂತೆ ಅದರಲ್ಲಿ ಪ್ರಥಮ ವರ್ಷದ ಸಾಮಾನ್ಯ ವರ್ಗದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ರೂ.9000/- ಮತ್ತು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ರೂ.7000/- ಹಾಗೂ ದ್ವಿತೀಯ ವರ್ಷಕ್ಕೆ ಸಾಮಾನ್ಯ ವರ್ಗದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ರೂ.7000/- ಮತ್ತು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ರೂ.5000/- ನಿಗದಿಪಡಿಸಲು ಸಭೆಯು ತೀರ್ಮಾನಿಸಿತು.<br><br>ದಿನಾಂಕ: 30.09.2025 ರ ಅಧ್ಯಕ್ಷ ಅಪ್ಪಣೆ ಮೇರೆಗೆ ವಿಷಯಸೂಚಿ ಸಂಖ್ಯೆ X ರಲ್ಲಿ 5 ಲಕ್ಷ ರೂಪಾಯಿದಲ್ಲಿ ಸಂಪ್ ಬದಲಾಗಿ 5 ಲಕ್ಷ ಲೀಟರ ನೀರಿನ ಸಂಪ ಎಂದು ಓದಿಕೊಳ್ಳುವುದು. |

| | | |
|---|---|---|
| | | ದಿನಾಂಕ: 30.09.2025 ರ ಅಧ್ಯಕ್ಷರ ಅಪ್ಪಣೆ ಮೇರೆಗೆ ವಿಷಯಸೂಚಿ ಸಂಖ್ಯೆ 16 ರಲ್ಲಿ ಶೈಕ್ಷಣಿಕ ಸಾಲು 2025-26 ಮಾತ್ರ ಎಂದು ನಮೂದಾಗಿದ್ದು 2025-26 ಹಾಗೂ 2026-27 ನಿಂದ ಎಂದು ನಮೂದಿಸಲು ಹಾಗೂ ರಿಪೀಟರ್ ಮಾತ್ರ ನಮೂದಾಗಿದ್ದು ರೆಗ್ಯೂಲರ್/ರಿಪೀಟರ್ ಎಂದು ಸೇರಿಸಲು ಸಭೆಯು ತೀರ್ಮಾನಿಸಿತು.<br><br>ದಿನಾಂಕ: 04.12.2025 ರಂದು ನಡೆದ ವಿಶೇಷ ಸಭೆಯ ವಿಷಯಸೂಚಿ ಸಂಖ್ಯೆ: 03 ರಲ್ಲಿ ರಫೀ ಭಂಡಾರಿ ಇವರು ಮಾತನಾಡಿ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ವಿಜಯಪುರ ಜಿಲ್ಲೆಯಲ್ಲಿ ಬರುವ ಶ್ರೀಮತಿ ಮೀನಾಕ್ಷಿ ಆರ್ ಕಲ್ಲೂರ ಬಿ.ಇಡಿ(ಎಸ್.ಎಂ.ಆರ್.ಕೆ) ಮಹಾವಿದ್ಯಾಲಯ, ವಿಜಯಪುರ ಹಾಗೂ ಶ್ರೀ ಮೋನಿಕಾ ಕನ್ನಿ ಶಿಕ್ಷಣ ಮಹಾವಿದ್ಯಾಲಯ, ವಿಜಯಪುರ ಈ ಎರಡು ಶಿಕ್ಷಣ ಮಹಾವಿದ್ಯಾಲಯಗಳಿಗೆ ಎರಡು ತಂಡವನ್ನು ರಚಿಸಿ Surprise Visit ನೀಡಿ ಅಭಿವೃದ್ಧಿ ಕುರಿತಾಗಿ ವರದಿಯನ್ನು ಮತ್ತೊಮ್ಮೆ ಸಲ್ಲಿಸಲು ತಿಳಿಸಲಾಗಿದೆ. ಆದರೆ ಈಗಾಗಲೇ ಸದರಿ ಮಹಾವಿದ್ಯಾಲಯಗಳಿಗೆ ಎರಡು ಬಾರಿ ಭೇಟಿ ನೀಡಿ ವರದಿಯನ್ನು ಸಲ್ಲಿಸಲಾಗಿದ್ದು ಸದರಿ ವರದಿಯನ್ವಯ ಕ್ರಮ ಜರುಗಿಸಲು ಸಲಹೆ ನೀಡಿದ ಹಿನ್ನೆಲೆಯಲ್ಲಿ ರಚಿಸಲಾದ ಎರಡು ತಂಡಗಳು ಮಹಾವಿದ್ಯಾಲಯಗಳಿಗೆ ಭೇಟಿ ನೀಡಬಹುದು ಅಥವಾ ಸದರಿ ತಂಡಗಳು ಈಗಾಗಲೇ ಸಲ್ಲಿಸಲಾದ ವರದಿಯನ್ನು ಮತ್ತೊಮ್ಮೆ ಪರಿಶೀಲಿಸಿ ಮಹಾವಿದ್ಯಾಲಯಗಳಿಗೆ ವಿಧಿಸಬೇಕಾದ ಶಿಸ್ತು ಕ್ರಮದ ಕುರಿತಾಗಿ ಅಂತಿಮ ವರದಿ ನೀಡಲು ಸಭೆಯು ತೀರ್ಮಾನಿಸಿತು.<br><br>ದಿನಾಂಕ: 04.12.2025 ರಂದು ನಡೆದ ವಿಶೇಷ ಸಭೆಯ ವಿಷಯಸೂಚಿ ಸಂಖ್ಯೆ: 11 ರಲ್ಲಿ ಕನ್ನಡ ಮತ್ತು ಇಂಗ್ಲೀಷ ವಿಭಾಗಗಳನ್ನು ಘಟಕ ಮಹಾವಿದ್ಯಾಲಯಕ್ಕೆ ಸ್ಥಳಾಂತರಿಸುವಲ್ಲಿ ಮರಾಠಿ ವಿಭಾಗವನ್ನು ಕೂಡ ಸೇರಿಸಿಕೊಂಡು ಕ್ರಮ ವಹಿಸಲು ಸಭೆಯು ತೀರ್ಮಾನಿಸಿತು.<br><br>ದಿನಾಂಕ: 04.12.2025 ರಂದು ನಡೆದ ವಿಶೇಷ ಸಭೆಯ ವಿಷಯಸೂಚಿ ಸಂಖ್ಯೆ: 18 ರಲ್ಲಿ ಪಠ್ಯಕ್ರಮ ಪರಿಶೀಲಿಸಲು ತಜ್ಞರ/ಪರಿಣಿತರ ಎಂಬಲ್ಲಿ ಆಯಾ ವಿಷಯ ತಜ್ಞರು ಎಂದು ಓದಿಕೊಳ್ಳಲು ಮತ್ತು ಅಭ್ಯಾಸ ಮಂಡಳಿಗಳ ಅಧ್ಯಕ್ಷರು ಅಂತಹ ವಿಷಯ ತಜ್ಞರ ಪಟ್ಟಿಯನ್ನು ಕುಲಸಚಿವರ ಕಾರ್ಯಾಲಯಕ್ಕೆ ಸಲ್ಲಿಸಲು ಸೂಚಿಸಲು ಸಭೆಯು ತೀರ್ಮಾನಿಸಿತು.<br><br>ದಿನಾಂಕ: 04.12.2025 ರಂದು ನಡೆದ ವಿಶೇಷ ಸಭೆಯ ವಿಷಯಸೂಚಿ ಸಂಖ್ಯೆ: 20 ರಲ್ಲಿ ವಿಭಾಗಗಳನ್ನು ಸದೃಢಗೊಳಿಸಲು ಮೆಂಟರ್ ಟೀಮುಗಳಿಗೆ ನಿವೃತ್ತ ಪ್ರಾಧ್ಯಾಪಕರು ಮತ್ತು ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿ ವಯೋನಿವೃತ್ತರಾದ ಎಂಬಲ್ಲಿ ವಿವಿಧ ಎಂಬುದರ ಬದಲಾಗಿ ಆಯಾಯ ವಿಷಯಗಳ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ನಿಪುಣ ವೃತ್ತಿಪರರನ್ನು ಗುರುತಿಸಿ ಪಟ್ಟಿಯನ್ನು ಆಯಾ ವಿಭಾಗಗಳ ಮುಖ್ಯಸ್ಥರು ಸಲ್ಲಿಸಲು ಎಂದು ಪರಿಷ್ಕರಿಸಲು ಸಭೆಯು ತೀರ್ಮಾನಿಸಿತು.<br><br>ದಿನಾಂಕ: 04.12.2025 ರಂದು ನಡೆದ ವಿಶೇಷ ಸಭೆಯ ವಿಷಯಸೂಚಿ ಸಂಖ್ಯೆ: IX ರಲ್ಲಿ ರಾಣಿ ಚನ್ನಮ್ಮ ಮೂರ್ತಿಯನ್ನು 21 ಅಡಿ ಎತ್ತರದ ಪಂಚಲೋಹದಲ್ಲಿ ಮತ್ತು ಅಂದಾಜು 20 ಅಡಿಗಳಷ್ಟು ವ್ಯವಸ್ಥಿತವಾದ ಸುಸಜ್ಜೀತ ಅಡಿಪಾಯಗಳ ಮೇಲೆ ನೂತನ ಆವರಣದಲ್ಲಿ ಹಾಗೂ ಮುಖ್ಯ ಆವರಣ ಭೂತರಾಮನಹಟ್ಟಿ ಮತ್ತು ಘಟಕ ಮಹಾವಿದ್ಯಾಲಯದಲ್ಲಿ ಸ್ಥಳ ಪರಿಶೀಲಿಸಿ ಮೂರ್ತಿ ಎತ್ತರದ ಕುರಿತು ಅಭಿಪ್ರಾಯ ಸಂಗ್ರಹಿಸಿ ಕ್ರಮವಹಿಸಲು ಹಾಗೂ ಸದಸ್ಯರಾದ ಡಾ. ಮಹಾಂತೇಶ ಕಂಬಾರ ಇವರ ಸಲಹೆ ಮೇರೆಗೆ ಕಿತ್ತೂರಿನ ವೃತ್ತದಲ್ಲಿ ಸ್ಥಾಪಿಸಿರುವ ಮೂರ್ತಿಯಂತೆ ಅಥವಾ ವಿಶ್ವವಿದ್ಯಾಲಯದ ಲಾಂಛನದಲ್ಲಿರುವಂತೆ ಪರಿಶೀಲಿಸಿ ಯಾವುದು ಹೆಚ್ಚುಯುಕ್ತವೋ ಅದರಂತೆ ಕ್ರಮವಹಿಸಲು ಸಭೆ ತೀರ್ಮಾನಿಸಿತು.<br><br>ದಿನಾಂಕ: 04.12.2025 ರಂದು ನಡೆದ ವಿಶೇಷ ಸಭೆಯ ವಿಷಯಸೂಚಿ ಸಂಖ್ಯೆ: 02 ರಲ್ಲಿ ಪ್ರೊ. ಕೆ.ಎಲ್ ಎನ್. ಮೂರ್ತಿ, ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸ್ನಾತಕೋತ್ತರ ಕೇಂದ್ರ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ವಿಜಯಪುರ ಇವರನ್ನು ಕರ್ನಾಟಕ ನಾಗರೀಕ ಸೇವಾ ನಿಯಮಗಳು(ವರ್ಗೀಕರಣ, |

| | | |
|---|---|---|
| | | ನಿಯಂತ್ರಣ ಮತ್ತು ಅಪೀಲು) ನಿಯಮಗಳು-1957 ರ ನಿಯಮ 8 ರಲ್ಲಿ ತಿಳಿಸಿದ ಕಂಡಿಕೆ (6) ರ "ಕಡ್ಡಾಯ ನಿವೃತ್ತಿ: ದಂಡನೆಯನ್ನು ನಿವೃತ್ತಿ ಸೌಲಭ್ಯದೊಂದಿಗೆ ವಿಧಿಸಲು ಸಭೆಯು ತೀರ್ಮಾನಿಸಿದೆ. ಮುಂದುವರೆದು, ಸದರಿ ಪ್ರಾಧ್ಯಾಪಕರು ದಿನಾಂಕ: 09.12.2025 ರಂದು ಅಮಾನತ್ತುಗೊಳಿಸಿರುವ ವಿಷಯಕ್ಕೆ ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಪೀಠದಿಂದ W.P. No: 109462/2025 ರನ್ವಯ "ಮಧ್ಯಂತರ ಆದೇಶ"ದ ಪ್ರತಿಯನ್ನು ಸಲ್ಲಿಸಿರುತ್ತಾರೆ. ಕಾರಣ, "ಕಡ್ಡಾಯ ನಿವೃತ್ತಿ" ತೀರ್ಮಾನವನ್ನು ಅನುಷ್ಠಾನಗೊಳಿಸದೇ ಕಾನೂನು ಅಭಿಪ್ರಾಯ ಪಡೆಯುವ ಕ್ರಮ ಪ್ರಕ್ರಿಯೆಯಲ್ಲಿರುತ್ತದೆ. ಈಗಾಗಲೇ ಪ್ರಾಧ್ಯಾಪಕರಿಗೆ ಜೀವಾನಾಧಾರ ಭತ್ಯೆ (ವೇತನದ ಶೇ. 50 ರಷ್ಟು) ಸಂದಾಯ ಮಾಡಲಾಗುತ್ತಿದೆ ಎಂದು ಕುಲಸಚಿವರು ಸಭೆಗೆ ಮಾಹಿತಿ ನೀಡಿ ಮುಂದಿನ ಮಾರ್ಗದರ್ಶನ ಕೋರಿದರು.<br>ಸದಸ್ಯರಾದ ಡಾ. ಮಹಾಂತೇಶ ಕಂಬಾರ ಮತ್ತು ಶ್ರೀ ರವೀಂದ್ರ ನಾಯ್ಕರ ಇವರು ಕಾನೂನು ರೀತಿ ಕ್ರಮ ವಹಿಸಲು ಸಲಹೆ ನೀಡಿದರು.<br>ಸದಸ್ಯರಾದ ಡಾ. ಕಾವೇರಿ.ಎಚ್.ಎಮ್ ಇವರು ಈಗಾಗಲೇ ವಿಶ್ವವಿದ್ಯಾಲಯದಲ್ಲಿ ರಚನೆಯಾದ "ಆಂತರಿಕ ದೂರು ನಿವಾರಣಾ ಸಮಿತಿ" ವರದಿಯಲ್ಲಿ ಆರೋಪವು ಸಾಬೀತಾದಾಗಿರುತ್ತದೆ ಮತ್ತು ಸಂತ್ರಸ್ಥೆಯು ಕೂಡ ತನ್ನ ಹೇಳಿಕೆಯನ್ನು ನೀಡಿರುತ್ತಾರೆ. ಪ್ರೊ. ಕೆ. ಎಲ್. ಎನ್. ಮೂರ್ತಿ ಇವರ ವೇತನವನ್ನು ತಡೆಹಿಡಿಯಲು ಸಲಹೆ ನೀಡಿದರು.<br>ಚರ್ಚಿಸಿದ ಸಭೆಯು, ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡದ ಇವರು ಹೊರಡಿಸಿರುವ "ಮಧ್ಯಂತರ ತಡೆಯಾಜ್ಞೆ ತೆರವುಗೊಳಿಸುವ ಅಗತ್ಯ ಕ್ರಮವನ್ನು ಕೈಗೊಳ್ಳಲು ಹಾಗೂ ನ್ಯಾಯಾಲಯದ ಆದೇಶವನ್ನು ಪಾಲಿಸಲು ತೀರ್ಮಾನಿಸಿತು.<br>ಮುಂದುವರೆದು, ದಿನಾಂಕ: 30.09.2025 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆ ಹಾಗೂ ದಿನಾಂಕ: 24.11.2025 ಮತ್ತು 04.12.2025 ರಂದು ನಡೆದ ವಿಶೇಷ ಸಭೆಗಳ ಗೊತ್ತುವಳಿಗಳ ಅನುಪಾಲನಾ ವರದಿಗಳನ್ನು ಸಭೆಯು ಪರಿಶೀಲಿಸಿ ದೃಢೀಕರಿಸಿತು. |
| 02 | 2026/02/02 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ವಿವಿಧ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅನುಮತಿ ನೀಡಿರುವುದಕ್ಕೆ ಸಿಂಡಿಕೇಟ ಸಭೆಯ ಅನುಸಮರ್ಥನೆಗೆ ಮಂಡಿಸಿರುವ ಕುರಿತು.. |
| | ತೀರ್ಮಾನ | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಈ ಕೆಳಕಾಣಿಸಿದ ಬೋಧಕ ಸಿಬ್ಬಂದಿಗಳಿಗೆ ವಿವಿಧ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ, ಸೇವಾ ಪ್ರಮಾಣ, ವಿಜಿಲೆನ್ಸ ಪತ್ರ ಹಾಗೂ ಅವುಗಳನ್ನು ಸಮೂಚಿತ ಮಾರ್ಗವಾಗಿ ಕಳುಹಿಸಲು ಅನುಮತಿ ನೀಡಿರುವುದಕ್ಕೆ ಸಿಂಡಿಕೇಟ್ ಸಭೆಯು ಅನುಸಮರ್ಥನೆ ನೀಡಿತು.** |

| Sl No | Name of the Teaching Staff | Details of permission to apply | Post applied/Subject |
|---|---|---|---|
| 1 | Prof. Basavaraj Padmashali Senior Professor, Department of Chemistry. | Central University of Tamil nadu, Thiruvarur-610 005, Tamil Nadu India | Vice-Chancellor |
| | | Central University of Jharkhand, Village- Cheri-ManatuP.O.- Kamre, P.S.- Kanke Ranchi-835 222,Jharkhand, India. | |
| | | Central University of Odisha, Sunabeda, NAD Post Office, Koraput - 763004 Odisha, India | |
| | | Bangalore North University, Thamaka, Kolar | |

| | | | |
|---|---|---|---|
| 2 | Prof. V. F. Nagannawar Senior Professor Department of English | Rajiv Gandhi University, Rono Hills- Doimukh District: Papumpare,PIN:791 112 AP | Vice-Chancellor |
| | | Central University of Tamil Nadu, Thiruvarur-610 005, Tamil Nadu India | |
| | | Shivaji University, Kolhapur, Maharastra | |
| 3 | Prof. NagaratnaParande Professor Department of English | The United States –India Education Foundation-USA | Fulbright-Nehru Fellowship-2026 |
| 4 | Dr. Fayazz Ahmed H Ilkal Assistant Professor Department of English | Central University of Karnataka, Kadakanchi, Alanda Road, Kalaburagi | Professor |
| | | | Associate Professor |
| 5 | Prof. N.Marutirao ProfessorDepartment of MBA | Central Universityof Kerala, Kerala. | Registrar |
| 6 | Prof. Shankargouda. C. Patil Senior Professor Department of MBA | Central Universityof Kerala, Kerala. | Registrar |
| 7 | Dr.ShobhaS Nayak Associate Professor Department of classical Kannada Studies | Central Universityof Kerala, Kerala. | Registrar |

| | | |
|---|---|---|
| 03 | 2026/02/03 | ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿಯಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುವ ಕು. ರಾಜೇಶ್ವರಿ ಬಸಾಪುರ ಇವರಿಗೆ ಪಾಸ್‌ಪೋರ್ಟ್ ನವೀಕರಣಕ್ಕಾಗಿ (Re Issue) ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಿರುವ ಕುರಿತು. |
| | ತೀರ್ಮಾನ | ಕು. ರಾಜೇಶ್ವರಿ ಬಸಾಪುರ, ದ್ವಿತೀಯ ದರ್ಜೆಸಹಾಯಕರು, ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿಯಲ್ಲಿ ಇವರಿಗೆ ಪಾಸ್‌ಪೋರ್ಟ್ ನವೀಕರಣಕ್ಕಾಗಿ (Re-Issue) ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ (NOC) ಪ್ರಮಾಣ ಪತ್ರವನ್ನು ನೀಡಲಾಗಿದೆ. ಸದರಿ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು. |
| 04 | 2026/02/04 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಅಧ್ಯಕ್ಷರನ್ನಾಗಿ ನೇಮಕ ಮಾಡಿದ ಆದೇಶಿಸಿದ್ದಕ್ಕೆ ಸಭೆ ಅನುಸಮರ್ಥನೆ ಕುರಿತು. |
| | ತೀರ್ಮಾನ | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಈ ಕೆಳಕಾಣಿಸಿದ ವಿವಿಧ ವಿಭಾಗಗಳಿಗೆ ಅಧ್ಯಕ್ಷರನ್ನು ನೇಮಕ ಮಾಡಿ ಆದೇಶಿಸಿಸಲಾಗಿದೆ. ಸದರಿ ನೇಮಕಾತಿ ಆದೇಶಗಳಿಗೆ ಸಭೆಯು ಅನುಸಮರ್ಥನೆ ನೀಡಿತು.** |

| ಅ ನಂ | ವಿಭಾಗದ | ಅಧ್ಯಕ್ಷರು |
|---|---|---|

| | | |
|---|---|---|
| 01 | ಆಡಳಿತ ಮತ್ತುವ್ಯವಹಾರ ನಿರ್ವಹಣಾ ವಿಭಾಗ | ಪ್ರೊ.ಎಸ್.ಸಿ.ಪಾಟೀಲ, ಹಿರಿಯ ಪ್ರಾಧ್ಯಾಪಕರು ಆಡಳಿತ ಮತ್ತು ವ್ಯವಹಾರ ನಿರ್ವಹಣಾವಿಭಾಗಕ್ಕೆ ದಿನಾಂಕ:20/01/2026 ರಿಂದ ಅನ್ವಯವಾಗುವಂತೆ ತಾತ್ಕಲಿಕವಾಗಿ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. |
| 02 | ವಾಣಿಜ್ಯಶಾಸ್ತ್ರವಿಭಾಗ | ಪ್ರೊ.ಎಸ್.ಬಿ.ನಾವಿ, ಪ್ರಾಧ್ಯಾಪಕರು ವಾಣಿಜ್ಯಶಾಸ್ತ್ರ ವಿಭಾಕ್ಕ ದಿನಾಂಕ:01/02/2026 ರಿಂದ ಅನ್ವಯವಾಗುವಂತೆ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. |
| 03 | ಇತಿಹಾಸ ವಿಭಾಗ | ಡಾ.ರಮೇಶ ಕಾಂಬಳೆ, ಸಹ ಪ್ರಾಧ್ಯಾಪಕರು ಇತಿಹಾಸ ವಿಭಾಗಕ್ಕೆ ದಿ:23/01/2026 ರಿಂದ ಅನ್ವಯವಾಗುವಂತೆ ಮುಖ್ಯಸ್ಥರ ನ್ನಾಗಿ ನೇಮಕ ಮಾಡಲಾಗಿದೆ. |
| 04 | ಇಂಗ್ಲೀಷ ವಿಭಾಗ | ಪ್ರೊ.ವಿಜಯ ಎಫ್. ನಾಗಣ್ಣವರ, ಹಿರಿಯ ಪ್ರಾಧ್ಯಾಪಕರು, ಇಂಗ್ಲೀಷ ವಿಭಾಗಕ್ಕೆ ದಿನಾಂಕ:21/12/2025 ರಿಂದ ಅನ್ವಯವಾಗುವಂತೆ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. |

ಡಾ. ಕಾವೇರಿ.ಎಚ್.ಎಂ:

ಪ್ರೊ. ಎಸ್. ಸಿ. ಪಾಟೀಲ್, ಹಿರಿಯ ಪ್ರಾಧ್ಯಾಪಕರು, ಇವರು ಈಗಾಗಲೇ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ ಮಹಾವಿದ್ಯಾಲಯದ ಪ್ರಾಂಶುಪಾಲರಾಗಿ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರಸ್ತುತ ಸದರಿ ಹಿರಿಯ ಪ್ರಾಧ್ಯಾಪಕರಿಗೆ ವಿಭಾಗದ ಅಧ್ಯಕ್ಷರ ಜವಾಬ್ದಾರಿಯನ್ನು ಕೂಡ ನೀಡಲಾಗಿದ್ದು, ವಿಭಾಗದ ಶೈಕ್ಷಣಿಕ ಹಿತದೃಷ್ಠಿಯಿಂದ ಪೂರ್ಣಕಾಲಿಕ ವಿಭಾಗದ ಅಧ್ಯಕ್ಷರನ್ನು ನೇಮಿಸುವುದು ಸೂಕ್ತ ಎಂದರು. ಪ್ರತಿಕ್ರಿಯಿಸಿದ ಕುಲಪತಿಗಳು, ಪ್ರೊ. ಎಸ್. ಸಿ. ಪಾಟೀಲ್, ಹಿರಿಯ ಪ್ರಾಧ್ಯಾಪಕರು ಇವರನ್ನು ತಾತ್ಕಾಲಿಕವಾಗಿ ಆಡಳಿತ ಮತ್ತು ವ್ಯವಹಾರ ನಿರ್ವಹಣಾ ವಿಭಾಗದ ಅಧ್ಯಕ್ಷರಾಗಿ ನೇಮಕ ಮಾಡಲಾಗಿದೆ. ವಿಶ್ವವಿದ್ಯಾಲಯದ ಆಡಳಿತ ಮತ್ತು ವ್ಯವಹಾರ ನಿರ್ವಹಣಾ ವಿಭಾಗದಲ್ಲಿ ಸಹ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಮಹಾಂತೇಶ ಕುರಿ ಮತ್ತು ಡಾ. ದೇವರಾಜು ಇವರುಗಳ ಜೇಷ್ಠತೆ ಕುರಿತಾಗಿ ಗೊಂದಲ ಉಂಟಾಗಿದ್ದು, ಇತ್ಯರ್ಥಪಡಿಸುವ ವಿಷಯ ಸಿಂಡಿಕೇಟ್‌ನಲ್ಲಿರುತ್ತದೆ. ಕಾರಣ, ಸಿಬ್ಬಂದಿಗಳ ಜೇಷ್ಠತಾ ಪ್ರಕ್ರಿಯೆ ಪೂರ್ಣಗೊಂಡ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

| | | |
|---|---|---|
| 05 | 2026/02/05 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಖಾಯಂ /ಗುತ್ತಿಗೆ/ ಹೊರಗುತ್ತಿಗೆ/ ಸಂಚಿತ ವೇತನ/ಟೆಂಡರ್ ಮಹಿಳಾ ಬೋಧಕೇತರ ಹಾಗೂ ಮಹಿಳಾ ಬೋಧಕ ಸಿಬ್ಬಂದಿಗಳಿಗೆ ಜನವರಿ |

| | | |
|---|---|---|
| | | 2025 ರಿಂದ ಅನ್ವಯಿಸುವಂತೆ ಋತುಚಕ್ರ ರಜಾ ಸೌಲಭ್ಯ ಕಲ್ಪಿಸಿ ಮಂಜೂರು ಮಾಡುವ ಕುರಿತು. |
| | ತೀರ್ಮಾನ | **ಕರ್ನಾಟಕ ರಾಜ್ಯದಲ್ಲಿ ಕಾರ್ಖಾನೆಗಳ ಕಾಯ್ದೆ 1948, ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ 1961, ತೋಟ ಕಾರ್ಮಿಕರ ಕಾಯ್ದೆ 1951, ಬೀಡಿ ಮತ್ತು ಸಿಗಾರ್ ಕಾರ್ಮಿಕರ (ಉದ್ಯೋಗ ಮತ್ತು ಷರತ್ತುಗಳು) ಕಾಯ್ದೆ 1966 ಹಾಗೂ ಮೋಟಾರು ಸಾರಿಗೆ ಕಾರ್ಮಿಕರ ಕಾಯ್ದೆ 1961ರಡಿ ನೋಂದಣಿಯಾಗಿರುವ ಎಲ್ಲಾ ಕೈಗಾರಿಕೆಗಳು ಹಾಗೂ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 18 ರಿಂದ 52 ವರ್ಷದ ವಯೋಮಿತಿಯ ಎಲ್ಲಾ ಖಾಯಂ ಗುತ್ತಿಗೆ/ಹೊರಗುತ್ತಿಗೆ ಮಹಿಳಾ ನೌಕರರಿಗೆ ಅವರ ಆರೋಗ್ಯ ಕಾರ್ಯದಕ್ಷತೆ ಮತ್ತು ಕಾರ್ಯಕ್ಷಮತೆ ಹೆಚ್ಚಿಸಿ ಅವರ ಮನೋಸ್ಥೈರ್ಯವನ್ನು ಹೆಚ್ಚಿಸುವ ಸದುದ್ದೇಶದಿಂದ ಅವರ ಋತುಚಕ್ರದ ಸಮಯದಲ್ಲಿ ಪ್ರತಿ ಮಾಸಿಕ ಒಂದು ದಿನದ ರಜೆಯಂತೆ ಕೆಲ ಷರತ್ತುಗಳನ್ವಯ ದಿನಾಂಕ 12-11-2025 ರಂದು ಹಾಗೂ ದಿನಾಂಕ 02-12-2025 ರಂದು ರಾಜ್ಯದ ಮಹಿಳಾ ಸರ್ಕಾರಿ ನೌಕರರಿಗೆ ವಾರ್ಷಿಕ 12 ದಿನಗಳ ವೇತನ ಸಹಿತ ರಜೆಯ ಸೌಲಭ್ಯವನ್ನು ಒದಗಿಸಿ ಆದೇಶಿಸಲಾಗಿದೆ.**<br>**ಆದ್ದರಿಂದ, ಸಿಂಡಿಕೇಟ್ ಸಭೆಯ ಅನುಮೋದನೆ ಕಾಯ್ದಿರಿಸಿ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಬೋಧಕ ಹಾಗೂ ಬೋಧಕೇತರ ಮಹಿಳಾ ಸಿಬ್ಬಂದಿಗಳಿಗೆ (ಖಾಯಂ/ಸಂಚಿತವೇತನ /ಗುತ್ತಿಗೆ/ಹೊರಗುತ್ತಿಗೆ/ಟೆಂಡರ್) ಕೆಲ ಷರತ್ತುಗಳನ್ವಯ, ಜನವರಿ-2026 ರಿಂದ ಅನ್ವಯಿಸುವಂತೆ ಪ್ರತಿ ತಿಂಗಳು ಒಂದು ದಿನದಂತೆ ವಾರ್ಷಿಕ 12 ದಿನಗಳ ವೇತನಸಹಿತ ಋತುಚಕ್ರ ರಜೆ ಸೌಲಭ್ಯವನ್ನು ಒದಗಿಸಿ ಆದೇಶಿಸಲಾಗಿದೆ. ಸದರಿ ವಿಷಯಕ್ಕೆ ಸಿಂಡಿಕೇಟ್ ಸಭೆಯು ಅನುಸಮರ್ಥನೆ ನೀಡಿತು.** |
| **ದಿನಾಂಕ: 10.02.2026 ರಂದು ಸಭೆಯನ್ನು ಮುಂದುವರೆಸಲಾಯಿತು. ಕುಲಸಚಿವರು ಎಲ್ಲ ಸದಸ್ಯರಿಗೆ ಸ್ವಾಗತಿಸಿ ಈ ಕೆಳಕಾಣಿಸಿದಂತೆ ವಿಷಯಸೂಚಿಗಳನ್ನು ಮುಂದುವರೆಸಿದರು.** | | |
| 06 | 2026/02/06 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಅಧ್ಯಾಪಕರುಗಳ ಸೇವಾ ಜ್ಯೇಷ್ಠತೆ (Seniority) ಪಟ್ಟಿಯನ್ನು ಅಂತಿಮಗೊಳಿಸುವ ಕುರಿತು ಸಲ್ಲಿಕೆಯಾಗಿರುವ ಹೇಳಿಕೆ/ಆಕ್ಷೇಪಣೆಗಳ ಪರಿಶೀಲನೆ ಮತ್ತು ನಿರ್ಧರಿಸುವ ಕುರಿತು. |
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ, ಅಧ್ಯಾಪಕರುಗಳ ಸೇವಾ ಜ್ಯೇಷ್ಠತೆ ಪಟ್ಟಿಯನ್ನು ನಿರ್ಧರಿಸುವುದಕ್ಕೆ ಸಂಬಂಧಿಸಿದಂತೆ, ಸಂಬಂಧಿಸಿದ ಅಧ್ಯಾಪಕರಿಗೆ ಮತ್ತು ಅಧ್ಯಾಪಕರ ಸಂಘದ ಅಧ್ಯಕ್ಷರಿಗೆ ಸುತ್ತೋಲೆ ಹೊರಡಿಸಿ, ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸಲು ದಿನಾಂಕ: 04-12-2025 ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ ಸೂಚಿಸಿದಂತೆ, ಸಂಬಂಧಿಸಿದ ಅಧ್ಯಾಪಕರುಗಳಾದ ಡಾ. ಮಹಾಂತೇಶ ಕುರಿ, ಸಹ ಪ್ರಾಧ್ಯಾಪಕರು, ಎಂ.ಬಿ.ಎ ವಿಭಾಗ, ಡಾ.ದೇವರಾಜು,ಸಹ ಪ್ರಾಧ್ಯಾಪಕರು, ಎಂ.ಬಿ.ಎ ವಿಭಾಗ, ಮತ್ತು ಡಾ. ಆದಿನಾಥ ಉಪಾಧ್ಯೆ, ಸಹ ಪ್ರಾಧ್ಯಾಪಕರು, ಗಣಿತಶಾಸ್ತ್ರ ವಿಭಾಗ, ಸಂ.ರಾ.ಪ್ರ.ಫ. ಮಹಾವಿದ್ಯಾಲಯ ಇವರುಗಳು ಕರ್ನಾಟಕ ಸರ್ಕಾರಿ ನೌಕರರ ಜ್ಯೇಷ್ಠತಾ ನಿಯಮಗಳು 1957 ರನ್ವಯ ಸೇವಾ ಜೇಷ್ಠತೆ ನಿರ್ಧರಿಸಲು ಆಕ್ಷೇಪಣೆ ಇಲ್ಲವೆಂದು ತಮ್ಮ ಪತ್ರದ ಮೂಲಕ ತಿಳಿಸಿದ್ದಾರೆ ಮತ್ತು ಡಾ. ಅರ್ಜುನ ಜಂಬಗಿ, ಸಹ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಸಂ.ರಾ.ಪ್ರ.ಫ. ಮಹಾವಿದ್ಯಾಲಯ ಇವರು ಪಟ್ನಾ ಹೈಕೋರ್ಟ್ ಆದೇಶ ಉಲ್ಲೇಖಿಸಿ, ಒಂದೇ ಹುದ್ದೆಯಲ್ಲಿ ಮೊದಲು ಪದೋನ್ನತಿ (CAS) ಹೊಂದಿದವರಿಗೆ ಸೇವಾ ಜ್ಯೇಷ್ಠತೆ** |

| | | |
|---|---|---|
| | | ನೀಡಬೇಕೆಂದು ಕೋರಿದ್ದಾರೆ ಹಾಗೂ ರಾಚವಿ, ಸ್ನಾತಕೋತ್ತರ ಅಧ್ಯಾಪಕರ ನೌಕರರ ಸಂಘವು ಸಿ.ಎ.ಎಸ್ ಬಡ್ತಿ ಪಡೆದವರ ಜೇಷ್ಠತೆಯ ವಿಷಯದಲ್ಲಿ 'ಯಥಾಸ್ಥಿತಿ' ಕಾಯ್ದುಕೊಳ್ಳಲು ತಿಳಿಸಿರುವರು.<br>ಹೀಗಾಗಿ 2018ರ ಯು.ಜಿ.ಸಿ. ಯ ನಿಯಮಾವಳಿ 16.3, ಮಾನ್ಯ ಕುಲಾಧಿಪತಿಗಳಿಂದ ದಿನಾಂಕ: 23-05-2022 ರಂದು ಅನುಮೋದಿಸಲ್ಪಟ್ಟಿರುವ ಪರಿನಿಯಮದ ನಿಯಮ-28 ಮತ್ತು ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಗಳು 1957 ನಿಯಮ 5.(1) ನಿಯಮಾವಳಿಗಳು, ಅಧ್ಯಾಪಕರುಗಳ ಹೇಳಿಕೆಗಳು ಮತ್ತು ರಾಚವಿ, ಸ್ನಾತಕೋತ್ತರ ಅಧ್ಯಾಪಕರ ನೌಕರರ ಸಂಘದ ಹೇಳಿಕೆಗಳನ್ನು ಪರಿಶೀಲಿಸಿ, ವಿಶ್ವವಿದ್ಯಾಲಯದ ಅಧ್ಯಾಪಕರುಗಳ ಅಂತಿಮ ಸೇವಾ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸುವ ಕುರಿತು ಚರ್ಚಿಸಿ ಸೂಕ್ತ ತೀರ್ಮಾನ ಕೈಗೊಳ್ಳಲು ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಮಂಡಿಸಲಾಯಿತು.<br>ಸದಸ್ಯರ ಅಭಿಪ್ರಾಯಗಳು:<br>ಡಾ. ಮಹಾಂತೇಶ ಕಂಬಾರ:<br>ಘನತೆವೆತ್ತ ರಾಜ್ಯಪಾಲರಿಂದ ಅನುಮೋದನೆಗೊಂಡ ಪರಿನಿಯಮದನ್ವಯ ಕ್ರಮ ವಹಿಸುವುದು.<br>ಡಾ. ಸುಷ್ಮಾ ಆರ್.<br>ಕೆ.ಎ.ಎಸ್. ಮತ್ತು ಐ.ಎ.ಎಸ್. ಅಧಿಕಾರಿಗಳಿಗೆ ನಿರ್ದಿಷ್ಠ ಅವಧಿಯ ಸೇವೆ ಪೂರ್ಣಗೊಂಡ ನಂತರ ಪದೋನ್ನತಿ ನೀಡಲಾಗುತ್ತದೆ. ಆದರೆ, ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳು Orientation Programme/Refresher Course/FDP/ ಹಾಗೂ ಪಿಎಚ್.ಡಿ. ಪದವಿಯನ್ನು ಪೂರ್ಣಗೊಳಿಸಿದ್ದಲ್ಲಿ ಮಾತ್ರ ಅವರಿಗೆ ಮುಂದಿನ ಅರ್ಹ ಪದೋನ್ನತಿ ನೀಡಲಾಗುತ್ತದೆ. ಕಾರಣ, ಪದೋನ್ನತಿ ಹೊಂದಿದ ಸಿಬ್ಬಂದಿಯೇ ಜೇಷ್ಠತೆ ಪಟ್ಟಿಯಲ್ಲಿ ಹಿರಿಯರಾಗಿರುತ್ತಾರೆ.<br>ಕುಲಸಚಿವರು(ಮೌಲ್ಯಮಾಪನ):<br>ಕೆಡರ್ ಬದಲಾವಣೆಯಾದಲ್ಲಿ ಜೇಷ್ಠತೆಯಲ್ಲಿ ಸೇವಾ ಹಿರಿತನ ಕೂಡ ಬದಲಾವಣೆಯಾಗುವುದು. (ಸಹಾಯಕ ಪ್ರಾಧ್ಯಾಪಕರಿಂದ ಸಹ ಪ್ರಾಧ್ಯಾಪಕರಿಗೆ ಪದೋನ್ನತಿ)<br>ಪ್ರೊ. ವ್ಹಿ. ಎಸ್. ಶಿಗೇಹಳ್ಳಿ:<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆಗೆ ಸೇರಿದ್ದು, ನಂತರ ರೀಡರ್ ಹುದ್ದೆಗೆ ಪದೋನ್ನತಿ ಹೊಂದಿದ ನಂತರ ನನ್ನ ಜೇಷ್ಠತಾ ಹಿರಿತನದಲ್ಲಿ ಮುಂಬಡ್ತಿಯನ್ನು ಹೊಂದಿರುತ್ತೇನೆ. ತಮ್ಮ ಗಣಿತಶಾಸ್ತ್ರ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದ ಡಾ. ವಿದ್ಯಾಸಾಗರ ಮೈಸೂರಮಠ, ಡಾ. ಮಹೇಶಕುಮಾರ್ ಎನ್., ಹಾಗೂ ಡಾ. ಸುನೀಲ್‌ಕುಮಾರ ಹೊಸಮನಿ ಇವರುಗಳು ಕ್ರಮವಾಗಿ 1, 2, 3 ಜೇಷ್ಠತಾ ಪಟ್ಟಿಯಲ್ಲಿ ಇದ್ದರು. ಆದರೆ, ಕ್ರಂ ಸಂಖ್ಯೆ 3ರ ಡಾ. ಸುನೀಲ್‌ಕುಮಾರ ಹೊಸಮನಿ ಇವರು ಪಿಎಚ್.ಡಿ. ಪದವಿ ಹಾಗೂ ಪದೋನ್ನತಿಗೆ ಅವಶ್ಯವಿರುವ ಅರ್ಹತೆಯನ್ನು ಪೂರ್ಣಗೊಳಿಸಿದ್ದರಿಂದ ಪದೋನ್ನತಿ |

| | | |
|---|---|---|
| | | ಹೊಂದಿ ಸಹ ಪ್ರಾಧ್ಯಾಪಕರಾಗಿರುತ್ತಾರೆ. ಪ್ರಸ್ತುತ ಜೇಷ್ಠತಾ ಪಟ್ಟಿಯಲ್ಲಿ ಹಿರಿಯರಾಗಿರುತ್ತಾರೆ.<br>ಚರ್ಚಿಸಿದ ಸಭೆಯು, ರಾಜ್ಯದ ಬೇರೆ ವಿಶ್ವವಿದ್ಯಾಲಯಗಳು ಅಧ್ಯಾಪಕರುಗಳ ಜೇಷ್ಠತೆ ಕುರಿತಾಗಿ ಅನುಸರಿಸುತ್ತಿರುವ ಕ್ರಮದ ಕುರಿತಾಗಿ ಮಾಹಿತಿ ಪಡೆಯುವುದು ಮತ್ತು ಕಾನೂನು ಅಭಿಪ್ರಾಯ ಪಡೆಯಲು ಸಭೆಯು ತೀರ್ಮಾನಿಸಿತು. |
| 07 | 2026/02/07 | ಡಾ.ವೈಭವ್ ದಿಲೀಪ್ ಪಟಾಕೆ, ತಾತ್ಕಾಲಿಕ ಅತಿಥಿ ಉಪನ್ಯಾಸಕರು, ಭೌತಶಾಸ್ತ್ರ ವಿಭಾಗ, ಇವರು ವೇತನವನ್ನು ಹೆಚ್ಚಿಸಲು ವಿನಂತಿಸಿರುವ ಬಗ್ಗೆ |
| | ತೀರ್ಮಾನ | ಭೌತಶಾಸ್ತ್ರ ವಿಭಾಗದಲ್ಲಿ ಪೂರ್ಣಕಾಲಿಕ ತಾತ್ಕಾಲಿಕ ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ.ವೈಭವ್ ದಿಲೀಪ್ ಪಟಾಕೆ, ಅವರು ಕಳೆದ 05 ವರ್ಷಗಳಿಂದ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.ಇವರು ಒಟ್ಟು 17 ವರ್ಷಗಳ ಬೋಧನಾ ಮತ್ತು ಸಂಶೋಧನಾ ಅನುಭವವನ್ನು ಹೊಂದಿದ್ದು ಶಿವಾಜಿ ವಿಶ್ವವಿದ್ಯಾಲಯದಿಂದ ಪಿ.ಎಚ್‌ಡಿ ಹಾಗೂ ಐ.ಐ.ಟಿ ಬಾಂಬೆಯಿಂದ ಪೋಸ್ಟ್ ಡಾಕ್ಟರಲ್ ಪದವಿಯನ್ನು ಪೂರ್ಣಗೊಳಿಸಿದ್ದಾರೆ.ಇವರು ತಮ್ಮ ಸುದೀರ್ಘ ಅನುಭವ ಮತ್ತು ಉನ್ನತ ವಿದ್ಯಾರ್ಹತೆಯನ್ನು ಪರಿಗಣಿಸಿ ಗೌರವಧನವನ್ನು ಪರಿಷ್ಕರಿಸಲು ವಿನಂತಿಸಿರುತ್ತಾರೆ.ಅದರಂತೆ ಪ್ರಸ್ತುತ ಸದರಿಯವರಿಗೆ ವಿಶ್ವವಿದ್ಯಾಲಯದ ಸ್ನಾತಕೋತ್ತರ ಅತಿಥಿ ಉಪನ್ಯಾಸಕರ ಗೌರವಧನದ ಮಾರ್ಗಸೂಚಿಗಳ ಪ್ರಕಾರ ಯುಜಿಸಿ ನಿಗದಿಪಡಿಸಿದ ವಿದ್ಯಾರ್ಹತೆ ತಕ್ಕಂತೆ ಗರಿಷ್ಠ ಮಿತಿ ಮಾಸಿಕ ರೂ.34,000/- ಗಳ ವೇತನ ನೀಡಲಾಗುತ್ತಿದೆ. ಅದರಂತೆ ಯು.ಜಿ.ಸಿ ಪರಿಷ್ಕೃತ ಮಾರ್ಗಸೂಚಿಗಳು (ದಿನಾಂಕ: 28-01-2019 ರ ಆದೇಶದಂತೆ) ಅತಿಥಿ ಉಪನ್ಯಾಸಕರ ವೇತನ ಪ್ರತಿ ಉಪನ್ಯಾಸಕ್ಕೆ ರೂ. 1,500/- ಅಥವಾ ಮಾಸಿಕ ಗರಿಷ್ಠ ಮಿತಿ ತಿಂಗಳಿಗೆ ಗರಿಷ್ಠ ರೂ.50,000/- ಗಳನ್ನು ನೀಡಲು ಅವಕಾಶವಿರುತ್ತದೆ. ಆದುದರಿಂದ, ಅಭ್ಯರ್ಥಿಯ ವಿಶೇಷ ಅರ್ಹತೆ ಮತ್ತು ಅನುಭವವನ್ನು ಪರಿಗಣಿಸಿ ಸದರಿಯವರ ಗೌರವಧನವನ್ನು ಪರಿಷ್ಕರಿಸುವಂತೆ ಸಲ್ಲಿಸಿರುವ ವಿನಂತಿಯನ್ನು ಮುಂದಿನ ಕ್ರಮಕ್ಕಾಗಿ ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಮಂಡಿಸಲಾಗಿದೆ.<br>ತಾತ್ಕಾಲಿಕ ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ.ವೈಭವ್ ದಿಲೀಪ್ ಪಟಾಕೆ, ಇವರ ಶೈಕ್ಷಣಿಕ ದಾಖಲಾತಿಗಳನ್ನು ಸಭೆಯು ಕೂಲಂಕುಷವಾಗಿ ಪರಿಶೀಲಿಸಿತು. ಮುಖ್ಯವಾಗಿ ಐ.ಐ.ಟಿ ಬಾಂಬೆಯಿಂದ ಪೋಸ್ಟ್ ಡಾಕ್ಟರಲ್ ಪದವಿಯನ್ನು ಪೂರ್ಣಗೊಳಿಸಿರುತ್ತಾರೆ. ಇದು ಪಿಎಚ್.ಡಿ. ಪದವಿಕ್ಕಿಂತ ಹೆಚ್ಚಿನ ವಿದ್ಯಾರ್ಹತೆಯಾಗಿದ್ದು, ವಿಶ್ವವಿದ್ಯಾಲಯದ ವಿದ್ಯಾರ್ಥಿಯಗಳಿಗೆ ಉತ್ತಮ ಮಟ್ಟದ ಶಿಕ್ಷಣ ಲಭಿಸಲು ಸಹಕಾರಿಯಾಗುವುದು. ಕಾರಣ, ಭೌತಶಾಸ್ತ್ರ ವಿಭಾಗದಲ್ಲಿ ಪೂರ್ಣಕಾಲಿಕ ತಾತ್ಕಾಲಿಕ ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ.ವೈಭವ್ ದಿಲೀಪ್ ಪಟಾಕೆ ಇವರಿಗೆ ಗರಿಷ್ಠ ಮಿತಿ ತಿಂಗಳಿಗೆ ರೂ.50,000/-ಗಳನ್ನು ವೇತನವನ್ನು ನಿಗದಿಪಡಿಸಲು ಸಭೆಯು ಅನುಮೋದನೆ ನೀಡಿತು.<br>ಮುಂದುವರೆದು, ಸದರಿ ತೀರ್ಮಾನವನ್ನು ಮಾದರಿಯಾಗಿ ಪರಿಗಣಿಸಿ ಭವಿಷ್ಯದಲ್ಲಿ ಪೋಸ್ಟ್ ಡಾಕ್ಟರಲ್ ಪದವಿಯನ್ನು ಪಡೆದ ಇತರೇ ಅತಿಥಿ ಉಪನ್ಯಾಸಕರು ಕೂಡ ತಮಗೆ ರೂ. 50,000/-ಗಳ ವೇತನವನ್ನು ನಿಗದಿಪಡಿಸಲು ವಿನಂತಿ ಸಲ್ಲಿಸುವ ಸಾಧ್ಯತೆ ಇರುವುದರಿಂದ "ರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ಪಡೆದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ" |

| | | | | |
|---|---|---|---|---|
| | | **ಪ್ರೋಸ್ಟ್ ಡಾಕ್ಟರಲ್ ಪದವಿಯನ್ನು ಪಡೆದವರಿಗೆ ಮಾತ್ರ ಗರಿಷ್ಠ ಮಿತಿ ವೇತನ ರೂ. 50,000/-ಗಳನ್ನು ನಿಗದಿಪಡಿಸಲು ಸಭೆಯು ಸೂಚಿಸಿತು.** | | |
| 08 | 2026/02/08 | ಪ್ರೊ ಎನ್. ಮಾರುತಿರಾವ, ಪ್ರಾಧ್ಯಾಪಕರು, ಆಡಳಿತ ಮತ್ತು ವ್ಯವಹಾರ ನಿರ್ವಹಣೆ ವಿಭಾಗ ಇವರ ವಿಭಾಗವಾರು ಸಂಗ್ರಹಿಸಿದ ಮಾಹಿತಿ ಕುರಿತು. | | |
| | ತೀರ್ಮಾನ | **ಪ್ರೊ ಎನ್. ಮಾರುತಿರಾವ, ಪ್ರಾಧ್ಯಾಪಕರು, ಆಡಳಿತ ಮತ್ತು ವ್ಯವಹಾರ ನಿರ್ವಹಣೆ ವಿಭಾಗ ಇವರ ಮೇಲಿರುವ ಆಪಾದನೆಗಳ ಕುರಿತು ಈ ಕೆಳಕಾಣಿಸಿದಂತೆ ಕುಲಸಚಿವರು ಸಭೆಗೆ ವಿವರಣೆ ನೀಡಿದರು.** | | |
| | | ಸಂ | ವಿಭಾಗವಾರು ವಿವರಣೆ | ಕ್ರಮಕೈಗೊಂಡಿರುವ ವಿವರಣೆ |
| | | 1 | ಎಂ.ಬಿ.ಎ 1 ನೇ ಸೆಮಿಸ್ಟರ್ ಮತ್ತು 3 ನೇ ಸೆಮಿಸ್ಟರ ಪರೀಕ್ಷೆಯ ಬಗ್ಗೆ ಕೆಲವು ಗಂಭೀರ ಆರೋಪಗಳನ್ನು ಮಾಡಿರುವ ಕುರಿತು | **A.ಅಮಾನತ್ತು ಮಾಡಿದ್ದು ದಿನಾಂಕ:11/06/2018 (ಕಛೇರಿ ಪತ್ರ ಸಂಖ್ಯೆ: RCU/DPAR/2018-19/1162 Dated; 11-06-2018)<br>B.ಅಮಾನತ್ತು ವಿಸ್ತರಿಸಿದ್ದು ದಿನಾಂಕ: 10/12/2018 (ರಾಚವಿ/ಬೆಳಗಾವಿ/ಕುಸಕಾ/ಸಿಆಸುವಿ/2018-19/4407 ದಿನಾಂಕ: 10-12-2018)<br>C. ಅಮಾನತ್ತು ಹಿಂಪಡೆದಿದ್ದು ದಿನಾಂಕ:04/10/2019 (ರಾಚವಿ/ಬೆಳಗಾವಿ/ಸಿಆಸುವಿ/2019-20/2750 ದಿನಾಂಕ: 04-10-2019)** |
| | | 2 | ದಿನಾಂಕ: 04-01-2022 ರನ್ವಯ ಅಮಾನತ್ತು ಅವಧಿಯ ವೇತನವನ್ನು ಮತ್ತು ವೇತನ ಬಡ್ತಿಗಳನ್ನು ಬಿಡುಗಡೆ ಮಾಡಬೇಕೆಂದು ವಿನಂತಿಸಿಕೊಂಡಿದ್ದು, | ಸದರಿ ಪತ್ರದ ಮೇಲೆ ಮಾನ್ಯ ಕುಲಪತಿಗಳು ಕೆ.ಸಿ.ಎಸ್.ಆರ್. ನಿಯಮಾವಳಿಯನ್ವಯ ಕಾನೂನು ಸಲಹೆ ಪಡೆಯುವಂತೆ ಷರಾ ಆದೇಶದ ಮೂಲಕ ಸೂಚಿಸಿದ್ದರನ್ವಯ, |
| | | 3 | ದಿನಾಂಕ: 27/01/2022 ರ ಪತ್ರದ ಮುಖಾಂತರ ಸದರಿಯವರ ವೇತನವನ್ನು ಮತ್ತು ವೇತನ ಬಡ್ತಿಗಳನ್ನು ಬಿಡುಗಡೆ ಮಾಡುವುದಕ್ಕೆ ಸಂಬಂಧಿಸಿದಂತೆ ಕಾನೂನು ಅಧಿಕಾರಿಯ ಅಭಿಪ್ರಾಯ ಕೋರಲಾಗಿತ್ತು | 1. ಶ್ರೀ ಪ್ರಭು ದಳವಾಯಿ, ಕಾನೂನು ಅಧಿಕಾರಿಗಳು ಇವರು ದಿನಾಂಕ. 17/02/2022 ರ ಪತ್ರದಲ್ಲಿ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಪ್ರೊ. ಎನ್. ಮಾರುತಿರಾವ, ಪ್ರಾಧ್ಯಾಪಕರು, ಆಡಳಿತ ಮತ್ತು ವ್ಯವಹಾರ ನಿರ್ವಹಣೆ ವಿಭಾಗ ಇವರ ವಿರುದ್ಧ ಆರೋಪಗಳಿಗೆ ಸಂಬಂಧಿಸಿದಂತೆ ವಿಚಾರಣೆ ನಡೆಸಲು ಸತ್ಯಶೋಧನಾ ಸಮಿತಿಯನ್ನು ರಚಿಸಲಾಗಿತ್ತು ಸದರಿ ಸಮಿತಿಯಲ್ಲಿ ನಾನು ಸದಸ್ಯ ಕಾರ್ಯದರ್ಶಿ ಯಾಗಿರುತ್ತೇನೆ, ಅಲ್ಲದೇ ಸದರಿ ಪ್ರಾಧ್ಯಾಪಕರ |

| | | | | |
|---|---|---|---|---|
| | | | | ಇಲಾಖಾ ವಿಚಾರಣೆಯ ಸಮಯದಲ್ಲಿಯೂ ಸಹಿತ ನಾನೂ ವಿಶ್ವವಿದ್ಯಾಲಯದ ಪರವಾಗಿ ಮಾನ್ಯರ ಆದೇಶದ ಮೇರೆಗೆ ಹಾಜರಿದ್ದೆನು, ಆದಕಾರಣ ನಾನು ಈ ಮೇಲಿನ ವಿಷಯದಲ್ಲಿ ಕಾನೂನು ಸಲಹೆ ನೀಡುವುದು ನೈಸರ್ಗಿಕ ನ್ಯಾಯವಾಗುವುದಿಲ್ಲವಾದ್ದರಿಂದ ಸದರಿ ವಿಷಯಕ್ಕೆಸಂಬಂಧಿಸಿದಂತೆ ಕಾನೂನು ಸಲಹೆ ನೀಡಲು ಕಾನೂನಾತ್ಮಕವಾಗಿ ಹೊರತಾಗಿರುತ್ತದೆ ಎಂಬ ವಿಷಯವನ್ನು ವಿನಯಪೂರ್ವಕವಾಗಿ ತಮ್ಮ ಗಮನಕ್ಕೆ ತರಬಯಸುತ್ತೇನೆ. |
| | | 4 | ಶ್ರೀ ಅನೂಪ ದೇಶಪಾಂಡೆ ಇವರಿಗೆ ದಿನಾಂಕ :05/03/2022 ಮತ್ತು 08/06/2022 ರ ಪತ್ರದ ಮೂಲಕ ಕಾನೂನು ಅಭಿಪ್ರಾಯ ನೀಡುವಂತೆ ಕೋರಲಾಗಿತ್ತು. | 1. ಪ್ರೊ. ಎನ್. ಮಾರುತಿರಾವ್ ಇವರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಆಡಳಿತ ಮತ್ತು ವ್ಯವಹಾರ ನಿರ್ವಹಣೆ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದು, ಇವರನ್ನು ದಿನಾಂಕ: 11-06-2018 ರ ಪತ್ರದ ಮೂಲಕ ಅಮಾನತ್ತು ಮಾಡಲಾಗಿತ್ತು.<br>2. ಸದರಿಯವರ ಅಮಾನತ್ತಿನ ಅವಧಿಯನ್ನು ದಿನಾಂಕ: 10-12-2018 ರ ಪತ್ರದ ಮೂಲಕ ವಿಸ್ತರಿಸಲಾಗಿತ್ತು<br>3. ಸದರಿಯವರ ಮೇಲಿನ ಇಲಾಖಾ ವಿಚಾರಣೆಯಲ್ಲಿ ಒಟ್ಟು ನಾಲ್ಕು ಆಪಾದನೆಗಳಲ್ಲಿ ಮೂರು ಆಪಾದನೆಗಳು ಸಿದ್ಧಗೊಂಡಿವೆ ಎಂದು ವಿಚಾರಣಾಧಿಕಾರಿಗಳು ವರದಿ ಸಲ್ಲಿಸಿರುತ್ತಾರೆ.<br>4. ದಿನಾಂಕ: 21-09-2019 ರಂದು ನಡೆದ ಸಿಂಡಿಕೇಟ ಸಭೆಯು ಸದರಿಯವರ ಅಮಾನತ್ತನ್ನು ಹಿಂಪಡೆದು ಅವರಿಗೆ ಎಚ್ಚರಿಕೆ ನೀಡಿ, ಮುಚ್ಚಳಿಕೆ ಪಡೆದು ಕೆಲಸಕ್ಕೆ ಹಾಜರಾಗುವಂತೆ ಸೂಚಿಸಲು ನಿರ್ಣಯ ಕೈಗೊಂಡಿತು.<br>5. ದಿನಾಂಕ: 04.10.2019 ರ ಪತ್ರದ ಮೂಲಕ ಅವರ ಅಮಾನತ್ತನ್ನು ಹಿಂಪಡೆಯಲಾಗಿತ್ತು.<br>6. ಸದರಿ ಪ್ರೊ. ಎನ್. ಮಾರುತಿರಾವ್ ಇವರು ತಡೆಹಿಡಿದಿರುವ ದಿನಾಂಕ: 11.06.2018 ರಿಂದ |

| | | | | |
|---|---|---|---|---|
| | | | | 03.10.2019 ರ ಅವಧಿಯ ವೇತನ ಬಡ್ತಿ ಮತ್ತು ವೇತನವನ್ನು ನೀಡುವಂತೆ ಕೋರಿ ವಿನಂತಿ ಸಲ್ಲಿಸಿರುತ್ತಾರೆ<br>ಮೇಲ್ಕಾಣಿಸಿದ ಘಟನಾವಳಿಗಳನ್ನು ಮತ್ತು ಉಲ್ಲೇಖ ದಪತ್ರಗಳನ್ನು ಅವಲೋಕಿಸಿದಾಗ ಈ ಕೆಳಕಂಡ ಸಂಗತಿಗಳು ನಮ್ಮ ಪರಿಶೀಲನೆಗೆ ಒಳಪಟ್ಟಿವೆ.<br><br>7. ಇಲಾಖಾ ವಿಚಾರಣೆಯಲ್ಲಿ ಒಟ್ಟು ಮೂರು ಆಪಾದನೆಗಳು ಸಿದ್ಧವಾದ ನಂತರ ದಿನಾಂಕ: 21.09.2019 ರಂದು ನಡೆದ ಸಿಂಡಿಕೇಟ್ ಸಭೆಯು ಸದರಿಯವರ ಅಮಾನತ್ತನ್ನು ಹಿಂಪಡೆದು ಅವರಿಗೆ ಎಚ್ಚರಿಕೆ ನೀಡಿ, ಮುಚ್ಚಳಿಕೆ ಪಡೆದು ಕೆಲಸಕ್ಕೆ ಹಾಜರಾಗುವಂತೆ ಸೂಚಿಸಲು ನಿರ್ಣಯ ಕೈಗೊಂಡಿತು. ಅದರಂತೆ ದಿನಾಂಕ: 04.10.2019 ರ ಅಮಾನತ್ತು ಹಿಂಪಡೆದ ಕಛೇರಿ ಆದೇಶದಲ್ಲಿ ಪ್ರೊ. ಎನ್. ಮಾರುತಿರಾವ್ ಇವರ ಅಮಾನತ್ತನ್ನು ಹಿಂಪಡೆದು ಸದರಿಯವರಿಗೆ ಕೂಡಲೇ ಕರ್ತವ್ಯಕ್ಕೆ ಹಾಜರಾಗುವಂತೆ ಸೂಚಿಸಲಾಗಿದೆ.<br>8. ಸಿಂಡಿಕೇಟ ಸಭೆಯ ನಿರ್ಣಯದಲ್ಲಿ ಇಲಾಖಾ ವಿಚಾರಣಾ ವರದಿಯ ಬಗ್ಗೆ ಯಾವುದೇ ಉಲ್ಲೇಖವಿರುವುದಿಲ್ಲವಾದರೂ ಸದರಿಯವರನ್ನು ಅವರ ಮೇಲಿನ ಇಲಾಖಾ ವಿಚಾರಣೆ ಮತ್ತು ಅಮಾನತ್ತು ಆದೇಶಗಳು ಒಂದೇ ವಿಷಯಕ್ಕೆ ಸಂಬಂಧಿಸಿದವುಗಳಾಗಿರುವುದನ್ನು ಗಮನಿಸಲಾಗಿದೆ. ಸಾಮಾನ್ಯವಾಗಿ ಅಮಾನತ್ತನ್ನು ಹಿಂಪಡೆಯುವಾಗ ಅಮಾನತ್ತಿನ ಅವಧಿಯನ್ನು ಹೇಗೆ ಪರಿಗಣಿಸಬೇಕು ಎಂಬುದರ ಬಗ್ಗೆ ಸ್ಪಷ್ಟ ನಿರ್ಣಯ/ಆದೇಶವಿರುವುದು ಅಗತ್ಯವಾಗಿರುತ್ತದೆ. ಅಮಾನತ್ತಿನ ಅವಧಿಯನ್ನು "ಅಮಾನತ್ತು" ಎಂದೇ |

| | | | | |
|---|---|---|---|---|
| | | | | ಪರಿಗಣಿಸಿ ಅಂತಹ ಅವಧಿಯ ವೇತನ ಅಥವಾ ಅಂತಹ ಅವಧಿಯ ವೇತನ ಬಡ್ತಿಗಳ ಬಗ್ಗೆ ಸ್ಪಷ್ಟವಾದ ನಿರ್ಣಯ/ಆದೇಶ ಹೊರಡಿಸಲಾಗಿರುತ್ತದೆ. ಅಂತಹ ಸ್ಪಷ್ಟ ನಿರ್ಣಯ/ಆದೇಶ ಇಲ್ಲದೇ ಅಮಾನತ್ತನ್ನು ಹಿಂಪಡೆದಲ್ಲಿ ಅದು ಅಮಾನತ್ತನ್ನು ಬೇಷರತ್ತಾಗಿ ಹಿಂಪಡೆದಂತೆಯೇ ಅರ್ಥವಾಗುತ್ತದೆ. ಸದರಿಯವರ ಮೇಲೆ ಮಾಡಲಾದ ಆಪಾದನೆಗಳು ಮರುಕಳಿಸದಂತೆ ಮುಚ್ಚಳಿಕೆ ಪತ್ರ ಪಡೆದು ಎಚ್ಚರಿಕೆ ನೀಡಿ ಅಮಾನತ್ತನ್ನು ಹಿಂಪಡೆಯಲು ಸಿಂಡಿಕೇಟ ಸಭೆಯ ತೀರ್ಮಾನಿಸಿದೆ ಎಂಬುದು ಗಮನಾರ್ಹ. ಇದರ ಹೊರತಾಗಿ ಅಮಾನತ್ತನ್ನು ಹಿಂಪಡೆಯಲು ಬೇರೆ ಯಾವುದೇ ಷರತ್ತುಗಳು ಇರುವುದಿಲ್ಲ. ಅಮಾನತ್ತಿನ ಅವಧಿಯನ್ನು ಹೇಗೆ ಪರಿಗಣಿಸಬೇಕು ಎಂಬುದರ ಬಗ್ಗೆ ಸ್ಪಷ್ಟವಾದ ನಿರ್ಣಯವಿರುವುದಿಲ್ಲ. ಕೇವಲ ಮುಚ್ಚಳಿಕೆ ಮತ್ತು ಎಚ್ಚರಿಕೆಗಳನಷ್ಟೇ ನೀಡಿ ಬೇಷರತ್ತಾಗಿ ಅಮಾನತ್ತನ್ನು ಹಿಂಪಡೆಯಲಾಗಿದೆ. ಒಮ್ಮೆ ಈ ಹಿಂದೆ ಮಾಡಿದ ಅಮಾನತ್ತಿನ ಆದೇಶವನ್ನು ಬೇಷರತ್ತಾಗಿ ಹಿಂಪಡೆದರೆ ಅಮಾನತ್ತಿನ ಆದೇಶ "ಇಲ್ಲ" ವೆಂದೇ ಪರಿಗಣಿಸಬೇಕಾಗುತ್ತದೆ. ಆದ್ದರಿಂದ ಸದರಿಯವರಿಗೆ 11.06.2018 ರಿಂದ 03.10.2019 ರ ವರೆಗೆ ತಡೆಹಿಡಿದಿರುವ ವೇತನ ಬಡ್ತಿ ಮತ್ತು ವೇತನವನ್ನು ಸಂದಾಯ ಮಾಡಬೇಕಾಗುತ್ತದೆ ಎಂದುತಿಳಿಸಿರುತ್ತಾರೆ. |
| | | 5 | ಸದರಿಯವರ ವೇತನಕ್ಕೆ ಸಂಬಂದಿಸಿದಂತೆ ಶ್ರೀ. ಡಿ. ಎಸ್. ಶಿಂಧೆ ಇವರಿಗೆ ದಿನಾಂಕ: 29/01/2025 ರ ಪತ್ರದ ಮೂಲಕ ಕಾನೂನು ಅಭಿಪ್ರಾಯ ನೀಡಲು ಕೋರಲಾಗಿತ್ತು. | ಅದರಂತೆ ಶ್ರೀ ಡಿ.ಎಸ್.ಶಿಂಧೆ ಇವರು ದಿನಾಂಕ:18/02/2025 ರ ಪತ್ರದಲ್ಲಿ ಅಮಾನತ್ತು ಆದೇಶವನ್ನು ಕರಾರುಗಳಿಗೆ ಒಳಪಟ್ಟು ಹಿಂಪಡೆದಿರುವುದರಿಂದ ಹಾಗೂ ಪ್ರೊ. ಎನ್.ಮಾರುತಿರಾವ ಅವರು ಅದನ್ನು ಒಪ್ಪಿಕೊಂಡು ಅದನ್ನು ಕಾರ್ಯರೂಪದಲ್ಲಿ ತರಲು ಮುಚ್ಚಳಿಕೆ ಪತ್ರವನ್ನು ಮೇಲೆ ಹೇಳಿದಂತೆ ಬರೆದು ಕೊಟ್ಟಿರುವುದು ಮತ್ತು ಮುಚ್ಚಳಿಕೆ ಪತ್ರವನ್ನು |

| | | | | |
|---|---|---|---|---|
| | | | | ಬರೆದು ಕೊಟ್ಟ ನಂತರ ಅಮಾನತ್ತಿನ ಆದೇಶವನ್ನು ಹಿಂಪಡೆದಿದ್ದರಿಂದ ಹಾಗೂ ಸದರಿಯವರು ವಿಜಯಪುರ ಸ್ನಾತಕೋತ್ತರ ಕೇದ್ರದ ವಾಣಿಜ್ಯಶಾಸ್ತ್ರ ವಿಭಾಗದ ಕರ್ತವ್ಯಕ್ಕೆ ಹಾಜರಾಗಿರುವುದರಿಂದ ಆ ಪ್ರಕ್ರಿಯೆ ಪೂರ್ಣಗೊಂಡಿದೆ. ಸದರಿಯವರು ಎರಡು ತೀರ್ಮಾನಗಳನ್ನು ಒಪ್ಪಿಕೊಂಡು ಅವುಗಳನ್ನು ಪ್ರಶ್ನೆ ಮಾಡದೇ ಲಿಖಿತ ಮುಚ್ಚಳಿಕೆ ಪತ್ರವನ್ನು ಬರೆದು ಕೊಟ್ಟು ಪುನಃ ಸೇವೆಗೆ ಹಾಜರಾಗಿದ್ದರಿಂದ ಸದರಿಯವರು ವಿಶ್ವವಿದ್ಯಾಲಯದವರು ಮಾಡಿರುವ ಆದೇಶವನ್ನು ಪ್ರಶ್ನೆ ಮಾಡಲುಬಾರದು ಕಾರಣ ವಿಶ್ವವಿದ್ಯಾಲಯದವರು ನಿರ್ದಿಷ್ಟವಾಗಿ ಸದರಿಯವರಿಗೆ ಅಮಾನತ್ತಿನ ಅವಧಿಯನ್ನು ಕರ್ತವ್ಯದ ಅವಧಿ ಅಂತ ತೀರ್ಮಾನಿಸಿಲ್ಲ ಕಾರಣ ಸದರಿಯವರಿಗೆ ಅಮಾನತ್ತಿನ ಅವಧಿಯ ಪೂರ್ತಿ ವೇತನ ಮತ್ತು ಭತ್ಯಗಳನ್ನು ಪಡೆಯಲು ಅನರ್ಹರಾಗಿರುತ್ತಾರೆ. ಕಾರಣ ಸದರಿಯವರು ಕೊಟ್ಟಂತ ಅರ್ಜಿಗೆ ಕಾನೂನು ಆಧಾರವಿಲ್ಲ ಅಂತ ಅಭಿಪ್ರಾಯಪಡಲಾಗಿದೆ.<br>ಆದ್ದರಿಂದ, ಶಿಸ್ತು ಪ್ರಾಧಿಕಾರಿರವರು ಅಮಾನತ್ತಿನ ಅವಧಿಯನ್ನು ಕರ್ತವ್ಯದ ಅವಧಿ ಅಂತ ಪರಿಗಣಿಸದೇ ಇರುವುದರಿಂದ ಸದರಿಯವರು ಅಮಾನತ್ತಿನ ಅವಧಿಯ ವೇತನ ಮತ್ತು ಬಡ್ತಿಯನ್ನು ಪಡೆಯಲು ಅರ್ಹರಲ್ಲ ಅಂತ ಅಭಿಪ್ರಾಯ ಎಂದು ಕಾನೂನು ಅಧಿಕಾರಿಗಳು ತಿಳಿಸಿರುತ್ತಾರೆ. ಇದರಂತೆ ಮಾನ್ಯ ಕುಲಪತಿಗಳು ವಿಶ್ರಾಂತ ನ್ಯಾಯವಾದಿಗಳ ಅಭಿಪ್ರಾಯ ಆಕರಿಸಿ ಹಿಂಬರಹ ನೀಡಲು ತೀಳಿಸಿರುವುದರಿಂದ ದಿನಾಂಕ:21/03/2025 ರಂದು ಪ್ರೊ.ಎನ್.ಮಾರುತಿರಾವ ಪ್ರಾಧ್ಯಾಪಕರು ಇವರಿಗೆ ಹಿಂಬರಹ ಪತ್ರವನ್ನು ನೀಡಲಾಗಿದೆ |
| | | 6 | 2018 ರ ವಾರ್ಷಿಕ ವೇತನ ಬಡ್ತಿ | ದಿನಾಂಕ:01/12/2018 ರ ವಾರ್ಷಿಕ ವೇತನ ಬಡ್ತಿಯನ್ನು ತಡೆಹಿಡಿಯಲಾಗಿದೆ. |

| | | | | |
|---|---|---|---|---|
| | | 7 | ಪ್ರೊ. ಎನ್ .ಮಾರುತಿ ರಾವ ವರ್ಗಾವಣೆ ಮಾಡಿ ಆದೇಶಿಸಿದ ಕುರಿತು | ಪ್ರೊ .ಎನ್. ಮಾರುತಿ ರಾವ ಇವರನ್ನು ಈ ಕಛೇರಿ ಆದೇಶ ಸಂಖ್ಯೆ: ರಾಚವಿಬೆ/ ಕುಸಕಾ/ಸಿಆಸುವಿ /2024-25/3249 ದಿನಾಂಕ:04/10/2024 ರಂದು ಆಡಳಿತ ಮತ್ತು ವ್ಯವಹಾರ ನಿರ್ವಹಣಾ ವಿಭಾಗದಿಂದ ವಾಣಿಜ್ಯ ಶಾಸ್ತ್ರ ವಿಭಾಗಕ್ಕೆ ವರ್ಗಾವಣೆ ಮಾಡಿ ಆದೇಶಿಸಲಾಗಿತ್ತು. |
| | | 8 | ಪ್ರೊ.ಎನ್.ಮಾರುತಿರಾವ ಇವರು ವರ್ಗಾವಣೆಗೆ ಸಂಬಂಧಿಸಿದಂತೆ **Writ Petition No:106080/2024** ರನ್ವಯ ಮಾನ್ಯ ಉಚ್ಛ ನ್ಯಾಯಾಲಯ ಧಾರವಾಡ ಪೀಠಕ್ಕೆ ಮೋರೆ ಹೋಗಿರುತ್ತಾರೆ. | ಸದರಿ ಪ್ರಕರಣವು ದಿನಾಂಕ:12/01/2026 ರಂದು ಮುಕ್ತಾಯಗೊಂಡಿರುತ್ತದೆ |
| | | 9 | ಶೈಕ್ಷಣಿಕ ಪ್ರವಾಸಕ್ಕೆ ಖರ್ಚಾದ ಹೆಚ್ಚುವರಿ ಹಣ ಸಂದಾಯ ಮಾಡಲು ವಿನಂತಿಸಿರುತ್ತಾರೆ. | ಪ್ರೊ.ಎನ್.ಮಾರುತಿರಾವ್ ,ಪ್ರಾಧ್ಯಾಪಕರು ಎಮ್.ಬಿ.ಎ. ವಿಭಾಗ ಇವರು ಶೃಕ್ಷಣಿಕ ಪ್ರವಾಸಕ್ಕೆ ಹೆಚ್ಚುವರಿ ಖರ್ಚಾದ ಮೊತ್ತವನ್ನು ಸ್ವತಃ ಭರಿಸಿರುವುದಾಗಿ, ಹಾಗೂ ಸದರಿ ಮೊತ್ತ ವಿಶ್ವವಿದ್ಯಾಲಯದಿಂದ ಮರುಸಂದಾಯವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಅಲ್ಲದೇ 2023 ರ ಶೈಕ್ಷಣಿಕ ಪ್ರವಾಸಕ್ಕೆ ಹೆಚ್ಚುವರಿ ಖರ್ಚಾದ ಮೊತ್ತವನ್ನು ಡಾ.ಮಹಾಂತೇಶ ಕುರಿ ಇವರು ಸ್ವತಃ ಭರಿಸಿರುತ್ತಾರೆ. ಸದರಿಯವರಿಗೆ ವಿಶ್ವವಿದ್ಯಾಲಯದಿಂದ ಮೊತ್ತ ಮರುಸಂದಾಯವಾಗಿದೆ ಎಂದು ತಿಳಿಸಿರುತ್ತಾರೆ. ಆದರೆ ಹಣಕಾಸು ವಿಭಾಗದಲ್ಲಿ ಪರಿಶೀಲಿಸಲಾಗಿ ಡಾ. ಮಹಾಂತೇಶ<br><br>ಕುರಿ ಇವರಿಗೆ ಹಣ ಸಂದಾಯವಾಗಿರುವುದಿಲ್ಲ. |
| | | 10 | 1. ದಿನಾಂಕ: 14.06.2024 ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಸ್ನಾತಕೋತ್ತರ ಆಡಳಿತ ನಿರ್ವಹಣಾ ಅಧ್ಯಯನ | ಪ್ರೊ.ಎನ್.ಮಾರುತಿರಾವ್, ಪ್ರಾಧ್ಯಾಪಕರು, ಎಮ್.ಬಿ.ಎ. ವಿಭಾಗ ಇವರನ್ನು ಸಂಶೋಧನಾ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸುವ ಜವಾಬ್ದಾರಿಯಿಂದ ಹೊರಗಿಡುವ ಕುರಿತು ಆಡಳಿತ ನಿರ್ವಹಣಾ ಅಧ್ಯಯನದ ಡಾಕ್ಟರಲ್ ಸಮಿತಿಯಲ್ಲಿ ನಿರ್ಣ |

| | | | | |
|---|---|---|---|---|
| | | | ವಿಭಾಗದ ಅಭ್ಯಾಸ ಮಂಡಳಿ ಅಧ್ಯಕ್ಷರಾದ ಪ್ರೊ.ಎನ್. ಮಾರುತಿರಾವ್, ಪ್ರಾಧ್ಯಾಪಕರು ಎಮ್.ಬಿ.ಎ. ವಿಭಾಗ ಇವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡಿರುವ 12 ಜನ ಸಂಶೋಧನಾರ್ಥಿಗಳ ಪಿ.ಹೆಚ್.ಡಿ. ನೋಂದಣಿ ರದ್ದುಪಡಿಸಲಾಗಿದೆ.<br>2. 2024-25 ಶೈಕ್ಷಣಿಕ ವರ್ಷದಿಂದ 5 ವರ್ಷಗಳವರೆಗೆ ಸಂಶೋಧನಾ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸುವ ಜವಾಬ್ದಾರಿಯಿಂದ ಹೊರಗಿಡಲು ಹಾಗೂ ಎಚ್ಚರಿಕೆ ಪತ್ರವನ್ನು ನೀಡಲು ದಿನಾಂಕ: 14.06.2024 ರಂದು ಜರುಗಿದ ಸಿಂಡಿಕೇಟ್ ಸಭೆಯು ತೀರ್ಮಾನಿಸಿರುತ್ತದೆ | ಯವನ್ನು ಕೈಗೊಳ್ಳಬೇಕಾಗಿದ್ದರಿಂದ ಸದರಿ ಆಡಳಿತ ನಿರ್ವಹಣಾ ಅಧ್ಯಯನ ವಿಭಾಗದ ಡಾಕ್ಟರಲ್ ಸಮಿತಿಗೆ ಪ್ರೊ. ಎನ್. ಮಾರುತಿರಾವ್, ಪ್ರಾಧ್ಯಾಪಕರು, ಎಮ್.ಬಿ.ಎ. ವಿಭಾಗ ಇವರು ಅಧ್ಯಕ್ಷರಾಗಿರುವದರಿಂದ ಅವರನ್ನು ಬದಲಾವಣೆ ಮಾಡಲಾಗಿರುತ್ತದೆ. ವಿಶ್ವವಿದ್ಯಾಲಯ ಕಾಯ್ದೆ 2000 ರ 33 ರ ಅನ್ವಯ ಅಭ್ಯಾಸ ಮಂಡಳಿಯ ಅಧ್ಯಕ್ಷರೆ ಡಾಕ್ಟರಲ್ ಸಮಿತಿಗೆ ಅಧ್ಯಕ್ಷರಾಗಿ ಇರುತ್ತಾರೆ. ಅದರಂತೆ ಸಿಂಡಿಕೇಟ್ ನಿರ್ಣಯವನ್ನು ಅನುಷ್ಠಾನಗೊಳಿಸಿ ಸ್ನಾತಕೋತ್ತರ ಆಡಳಿತ ನಿರ್ವಹಣಾ ಅಧ್ಯಯನ ವಿಭಾಗದ ಅಧ್ಯಕ್ಷರನ್ನು ಬದಲಾವಣೆ ಮಾಡಿ ದಿನಾಂಕ: 16.07.2024 ರಂದು ಪರಿಷ್ಕೃತ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.<br>ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ ಅಧಿನಿಯಮ 2000 ರ 44 ಮತ್ತು 31(2) (ii) ರ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪಿಎಚ್.ಡಿ ನಿಯಮಾವಳಿ ಸಂ: 13 ರ ಪ್ರಕಾರ ಸ್ನಾತಕೋತ್ತರ ಆಡಳಿತ ನಿರ್ವಹಣಾ ಅಧ್ಯಯನ ವಿಭಾಗದ ಪಿಎಚ್.ಡಿಗೆ ಸಂಬಂಧಿಸಿದಂತೆ ದಿನಾಂಕ: 16.07.2024 ರಂದು ಡಾಕ್ಟರಲ್ ಸಮಿತಿಯ ಪರಿಷ್ಕೃತ ಅಧಿಸೂಚನೆ ಹೊರಡಿಸಲಾಗಿರುತ್ತದೆ |
| | | 11 | ದಿನಾಂಕ: 14/06/2024 ರಂದು ನಡೆದ ಸಾಮಾನ್ಯ ಸಿಂಡಿಕೇಟ್ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದಂತೆ | ಪ್ರೊ.ಎನ್.ಮಾರುತಿರಾವ, ಪ್ರಾಧ್ಯಾಪಕರು, ಎ.ಬಿ.ಎವಿಭಾಗ ಇವರನ್ನು 2024-25 ಶೈಕ್ಷಣಿಕ ವರ್ಷದಿಂದ 05 ವರ್ಷಗಳವರೆಗೆ ಸಂಶೋಧನಾ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸುವ ಜವಾಬ್ದಾರಿಯಿಂದ ಹೊರಗಿಡಬೇಕೆಂದು ಸಭೆಯ ತೀರ್ಮಾನದಂತೆ ಅನುಷ್ಠನಗೊಳಿಸುವಂತೆ ಕ್ರಮ ಕೈಗೊಳ್ಳುವ ಡಾಕ್ಟರಲ್ ಸಮಿತಿ ಅಧ್ಯಕ್ಷರಿಗೆ |

| | | | | |
|---|---|---|---|---|
| | | | | ದಿನಾಂಕ:16/07/2024 ರಂದು ಕಛೇರಿ ಪತ್ರ ನೀಡಲಾಗಿದೆ(ಪ್ರತಿ ಲಗತ್ತಿಸಲಾಗಿದೆ) |
| | | | | ಡಾಕ್ಟರಲ್ ಸಮಿತಿ ಅಧ್ಯಕ್ಷರಿಂದ ಯಾವುದೇ ಉತ್ತರ ಬಂದಿರದ ಕಾರಣ ದಿನಾಂಕ:19/08/2024 ಮತ್ತು 12/09/2024 ರಂದು ನೆನಪೋಲೆಯನ್ನು ಕಳುಹಿಸಲಾಗಿದೆ ಈ ನೆನಪೋಲೆಗಳಿಗೆ ಸಹ ಯಾವುದೇ ಡಾಕ್ಟರಲ್ ಸಮಿತಿ ಅಧ್ಯಕ್ಷರು ಉತ್ತರಿಸಿರುವುದಿಲ್ಲ |
| | | 12 | ಡಾಕ್ಟರಲ್ ಸಮಿತಿ ಅಧ್ಯಕ್ಷರು ಸದರಿ ವಿಷಯದ ಕುರಿತು ಮತ್ತೊಮ್ಮ ತುರ್ತು ವರದಿ ನೀಡುವಂತೆ ದಿನಾಂಕ:13/11/2025 ರಂದು ತಿಳಿಸಲಾಗಿತ್ತು. | ದಿನಾಂಕ:18/02/2025 ರಂದು ಜರುಗಿದ ಡಾಕ್ಟರಲ್ ಸಮಿತಿ ಸಭೆಯ ಸಮಯದಲ್ಲಿ ಸಂಶೋಧನಾರ್ಥಿಗಳು ಇರಲಿಲ್ಲ ಏಕೆಂದರೆ ಡಾ.ಎನ್‌ಮಾರುತಿರಾವ ಇವರ ಮಾರ್ಗದರ್ಶನದಲ್ಲಿ ಇದ್ದ ಇಬ್ಬರು ಸಂಶೋಧನಾರ್ಥಿಗಳಿಗೆ ದಿನಾಂಕ:18/02/2025 ರಂದು ಜರುಗಿದ ಡಾಕ್ಟರಲ್ ಸಮಿತಿ ಸಭೆಯಲ್ಲಿ Summonsನ್ನು ನೀಡಲಾಗಿದೆ ಹಾಗಾಗಿ ವಿದ್ಯಾರ್ಥಿಗಳ ವರ್ಗಾವಣೆ ಪ್ರಕ್ರಿಯಯನ್ನು ಕೈಗೊಂಡಿರುವುದಿಲ್ಲ ಎಂದು ತಿಳಿಸಿರುತ್ತಾರೆ |
| | | 13 | ಪ್ರೊ.ಎನ್.ಮಾರುತಿರಾವ, ಪ್ರಾಧ್ಯಾಪಕರು, ಆಡಳಿತ ವ್ಯವಹಾರ ನಿರ್ವಹಣಾ ವಿಭಾಗ ಇವರನ್ನು ಸ್ಥಳೀಯ ಸ್ಥಾನಿಕ ವಿಚಾರಣಾ ಸಮಿತಿಗೆ ಪರಿಗಣಿಸದೇ ಇರುವ ಕುರಿತು ಸಲ್ಲಿಸಿರುವ ಆಕ್ಷೇಪಣೆ ಸಂಬಂಧ ಚರ್ಚೆಗಾಗಿ ವಿಷಯ ಮಂಡನೆ | ಈ ಹಿಂದೆ ಓರ್ವ ಸಿಂಡಿಕೇಟ್ ಸದಸ್ಯರು ಪ್ರೊ.ಎನ್.ಮಾರುತಿರಾವ, ಪ್ರಾಧ್ಯಾಪಕರು, ಆಡಳಿತ ವ್ಯವಹಾರ ನಿರ್ವಹಣಾ ವಿಭಾಗ ಇವರನ್ನು ಸ್ಥಳೀಯ ಸ್ಥಾನಿಕ ವಿಚಾರಣಾ ಸಮಿತಿಗೆ ಸೇರಿಸಲು ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ. |
| | | ಕಾರಣ, ಪ್ರೊ. ಮಾರುತಿರಾವ, ಪ್ರಾಧ್ಯಾಪಕರು, ಎಂ.ಬಿ.ಎ. ವಿಭಾಗ ಇವರಿಗೆ ಸಂಬಂಧಿಸಿದಂತೆ ಮೇಲಿನ ಅಂಶಗಳ ಹಿನ್ನಲೆಯಲ್ಲಿ ಮುಂದೆ ವಹಿಸಬಹುದಾದ ಕ್ರಮದ ಬಗ್ಗೆ ಕುಲಸಚಿವರು ಸಭೆಯ ಮಾರ್ಗದರ್ಶನ ಕೋರಿದರು.<br>**ಶ್ರೀ ರಫೀ ಭಂಡಾರಿ:**<br>ವಿಶ್ವವಿದ್ಯಾಲಯದ ಪರಿನಿಯಮ ಮತ್ತು ಕಾಯ್ದೆಯನ್ವಯ ಕ್ರಮವಹಿಸುವುದು ಒಂದು ವೇಳೆ ನಿಯಮಾವಳಿಗಳು ಉಲ್ಲಂಘನೆಯಾಗಿದ್ದರೇ ಶಿಸ್ತು ಕ್ರಮವಹಿಸುವುದು.<br>ದಾಖಲಾತಿಗಳನ್ನು ಪರಿಶೀಲಿಸಿ ಚರ್ಚಿಸಿದ ಸಭೆಯು ಈ ಕೆಳಕಾಣಿಸಿದಂತೆ **ತೀರ್ಮಾನಿಸಲಾಯಿತು.** | | |

| | | |
|---|---|---|
| | | 1. ಸದರಿಯವರ ಅಮಾನತ್ತಿನ ಅವಧಿಯ ವೇತನ ಮತ್ತು ವೇತನ ಬಡ್ತಿಯನ್ನು ಬಿಡುಗಡೆ ಮಾಡುವ ಬಗ್ಗೆ ಪಡೆದಿರುವ ಎರಡು ಕಾನೂನು ಅಭಿಪ್ರಾಯಗಳು ವಿಭಿನ್ನವಾಗಿರುವುದರಿಂದ ಪುನಃ ಕಾನೂನು ಅಭಿಪ್ರಾಯ ಪಡೆಯಲು ಸಭೆಯು ಸೂಚಿಸಿತು.<br>2. ಪ್ರೊ. ಮಾರುತಿರಾವ್, ಪ್ರಾಧ್ಯಾಪಕರು, ಎಂ.ಬಿ.ಎ. ವಿಭಾಗ ಇವರನ್ನು ವಾಣಿಜ್ಯಶಾಸ್ತ್ರ ವಿಭಾಗಕ್ಕೆ ವರ್ಗಾವಣೆ ಮಾಡಲಾದ ಆದೇಶವನ್ನು ಹಿಂಪಡೆಯಲು ತೀರ್ಮಾನಿಸಿತು.<br>3. ಶೈಕ್ಷಣಿಕ ಪ್ರವಾಸಕ್ಕೆ ವೆಚ್ಚವಾದ ಹೆಚ್ಚುವರಿ ಹಣ ಸಂದಾಯ ಮಾಡಲು ಸದರಿಯವರು ಸಲ್ಲಿಸಿರುವಂತೆ ಡಾ. ಮಹಾಂತೇಶ ಕುರಿ ಇವರ ವಿಷಯದಲ್ಲಿ ವಿಶ್ವವಿದ್ಯಾಲಯದಿಂದ ಕುಲಪತಿಗಳಿಂದ ಕಡತದಲ್ಲಿ ಅನುಮೋದನೆಯಾಗಿದ್ದರೂ ಹಣಕಾಸು ವಿಭಾಗದಿಂದ ಆಕ್ಷೇಪಣೆ ವ್ಯಕ್ತವಾಗಿ ಸದರಿಯವರಿಗೆ ಹಣ ಸಂದಾಯವಾಗಿರುವುದಿಲ್ಲ. ಇದನ್ನು ಖಾತ್ರಿಪಡಿಸಿಕೊಂಡು ಸಭೆಯು ಅದೇ ನಿಯಮವನ್ನು ಪ್ರೊ. ಮಾರುತಿ ರಾವ್ ಇವರಿಗೂ ಅನ್ವಯಿಸಿ ಮನವಿಯನ್ನು ತಿರಸ್ಕರಿಸಲು ಸಭೆಯು ಸೂಚಿಸಿತು.<br>4. ಸದರಿಯವರ ಪಿಎಚ್.ಡಿ. ಮಾರ್ಗದರ್ಶಕ ಹುದ್ದೆಯನ್ನು ರದ್ದುಪಡಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ, ಸದರಿಯವರ ಮಾರ್ಗದರ್ಶನದಲ್ಲಿ ಆರಂಭದಿಂದ ಇಲ್ಲಿವರೆಗೆ ನೊಂದಾಯಿಸಿಕೊಂಡ ಒಟ್ಟು ಸಂಶೋಧನಾರ್ಥಿಗಳ ಅಂಕಿ-ಅಂಶಗಳ ಮಾಹಿತಿಯನ್ನು ಮುಂದಿನ ಸಭೆಗೆ ಮಂಡಿಸಿದ ನಂತರ ಕ್ರಮ ಕೈಗೊಳ್ಳುವುದು.<br>5. ಕಾಲೇಜು ಅಭಿವೃದ್ಧಿ ಮಂಡಳಿಯು ಪ್ರತಿ ವರ್ಷ ನಿಯೋಜಿಸುವ ಸ್ಥಳೀಯ ತನಿಖಾ ಸಮಿತಿಯಲ್ಲಿ ಪ್ರೊ. ಮಾರುತಿರಾವ ಇವರನ್ನು ಪರಿಗಣಿಸಲು ಸಭೆಯು ತೀರ್ಮಾನಿಸಿತು.<br>6. ಪ್ರಾಜೆಕ್ಟ್ ಸಂಬಂಧಿತ Overhead Charges ಬಳಕೆಗೆ ಸಂಬಂಧಿಸಿ ವಿಶ್ವವಿದ್ಯಾಲಯದ ನಿಯಮಗಳಂತೆ ಕ್ರಮವಹಿಸುವುದು.<br>7. ಡಾಕ್ಟರಲ್ ಸಮಿತಿ ಅಧ್ಯಕ್ಷರು, ಅಭ್ಯಾಸ ಮಂಡಳಿ(ಸ್ನಾತಕ ಮತ್ತು ಸ್ನಾತಕೋತ್ತರ) ಇವುಗಳಿಗೆ ಸಂಬಂಧಿಸಿದಂತೆ ಮುಂದಿನ ಸಭೆಯಲ್ಲಿ ಚರ್ಚಿಸುವುದು. |
| 09 | 2026/02/09 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಖಾಯಂ ಕಛೇರಿ ಅಧೀಕ್ಷಕರ ಪರಿವೀಕ್ಷಣಾ ಅವಧಿಯನ್ನು ಘೋಷಣೆ ಮಾಡುವ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಕಛೇರಿ ಅಧೀಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ. ಸಂತೋಷಕುಮಾರ ಕಂಬಾಳಿಮಠ ಮತ್ತು ಶ್ರೀಮತಿ. ತುಳಸಾದೇವಿ ಕನ್ನಾಳ ಇವರು ರಾಚವಿಯ ನೇಮಕಾತಿ ಆದೇಶದಂತೆ ಕಛೇರಿ ಅಧೀಕ್ಷಕರ ಹುದ್ದೆಗೆ ನೇಮಕ ಹೊಂದಿ, ದಿನಾಂಕ: 02-11-2023 ರಂದು ಕರ್ತವ್ಯಕ್ಕೆ ಹಾಜರಾಗಿದ್ದು ಹಾಗೂ ಕರ್ನಾಟಕ ಲೋಕ ಸೇವಾ ಆಯೋಗವು ನಡೆಸಿರುವ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುತ್ತಾರೆ. ದಿನಾಂಕ:02-11-2025 ರಂದು ಸದರಿ ಸಿಬ್ಬಂದಿಗಳು ಎರಡು ವರ್ಷಗಳು ಪೂರ್ಣಗೊಳ್ಳುತ್ತವೆ. ಕಾರಣ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳನ್ವಯ ಪರಿವೀಕ್ಷಣಾ ಅವಧಿಯನ್ನು ಘೋಷಿಸುವ ವಿಷಯವನ್ನು ಸಭೆಗೆ ಮಂಡಿಸಲಾಯಿತು. |

| | | |
|---|---|---|
| | | ಸಭೆಯು ಚರ್ಚಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳನ್ವಯ ಶ್ರೀ. ಸಂತೋಷಕುಮಾರ ಕಂಬಾಳಿಮಠ ಇವರ ಪರಿವೀಕ್ಷಣಾ ಅವಧಿ ಘೋಷಿಸಲು ತೀರ್ಮಾನಿಸಿತು.<br>ಮುಂದುವರೆದು, ನೇಮಕಾತಿ ಸಂದರ್ಭದಲ್ಲಿದ್ದ ಹಿಂದಿನ ಕುಲಸಚಿವರಿಗೆ ಶ್ರೀಮತಿ. ತುಳಸಾದೇವಿ ಕನ್ನಾಳ ಇವರ ಸಂಬಂಧಿಕರಾಗಿ ನೇಮಕಾತಿ ಆದೇಶ ಹೊರಡಿಸಿರುವುದು ಮೌಖಿಕ ದೂರು ಸದಸ್ಯರ ಗಮನಕ್ಕೆ ಬಂದಿರುವುದರಿಂದ ಶ್ರೀಮತಿ. ತುಳಸಾದೇವಿ ಕನ್ನಾಳ ಇವರ ಪರಿವೀಕ್ಷಣಾ ಅವಧಿ ಘೋಷಣೆಯನ್ನು ಸಭೆಯು ಕಾಯ್ದಿರಿಸಲು ತೀರ್ಮಾನಿಸಿತು ಹಾಗೂ ನೇಮಕಾತಿಗೆ ಸಂಬಂಧಿಸಿದ ದಾಖಲೆಗಳನ್ನು ಮುಂಬರುವ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ಸೂಚಿಸಿತು. |
| **10** | 2026/02/10 | ಡಾ. ಎಂ.ಬಿ. ಛಲವಾದಿ, ಸಹಾಯಕ ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ವಿಭಾಗ ,ಇವರು ಸಹ ಪ್ರಾಧ್ಯಾಪಕ ಹಂತದ ಸಿ.ಎ.ಎಸ್ ಅಡಿ ವೃತ್ತಿ ಪದೋನ್ನತಿ ನಿರಾಕರಣೆಯ ವಿರುದ್ಧ ದೂರಿನ ಪ್ರತಿಗಳನ್ನು ಸಚಿವರಿಗೆ ಹಾಗೂ ಬಾಹ್ಯ ಪ್ರಾಧಿಕಾರಗಳಿಗೆ ಪತ್ರ ವ್ಯವಹಾರ ನಡೆಸಿರುವ ಬಗ್ಗೆ. |
| | ತೀರ್ಮಾನ | ಡಾ.ಎಂ.ಬಿ. ಛಲವಾದಿ, ಸಹಾಯಕ ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ವಿಭಾಗ, ಇವರು ಸಹ ಪ್ರಾಧ್ಯಾಪಕ ಹಂತದ ಸಿ.ಎ.ಎಸ್ ಅಡಿ ವೃತ್ತಿ ಪದೋನ್ನತಿ ನಿರಾಕರಣೆಯ ಬಗ್ಗೆ ದಿನಾಂಕ:16-01-2026 ರಂದು ವಿಶ್ವವಿದ್ಯಾಲಯಕ್ಕೆ ಪತ್ರವನ್ನು ಸಲ್ಲಿಸುತ್ತಾ, ಸದರಿ ಈ ಪತ್ರದ ಪ್ರತಿಗಳನ್ನು ಅವರು ವಿಶ್ವವಿದ್ಯಾಲಯದ ನಿಯಮಾವಳಿಗಳನ್ನು ಮೀರಿ ನೇರವಾಗಿ ಮಾನ್ಯ ರಾಜ್ಯಪಾಲರ ವಿಶೇಷ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ಮಾನ್ಯ ಸಮಾಜ ಕಲ್ಯಾಣ ಸಚಿವರು, ನಾಗರಿಕ ಹಕ್ಕು ಜಾರಿ ಘಟಕ ಮತ್ತು ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗಕ್ಕೆ ಹೀಗೆ ನೇರವಾಗಿ ಬಾಹ್ಯ ಪ್ರಾಧಿಕಾರಗಳಿಗೆ ಮತ್ತು ಸಚಿವರಿಗೆ ದೂರನ್ನು ನೀಡಿರುವುದು ಕಂಡು ಬಂದಿರುವದು.ಇದು ಕರ್ನಾಟಕ ರಾಜ್ಯ ನಾಗರಿಕ ಸೇವಾ (ನಡತೆ) ನಿಯಮಗಳು, 2021ರ ನಿಯಮ 29 ನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವ ವಿಷಯವನ್ನು ಕುಲಸಚಿವರು ಸಭೆಯ ಗಮನಕ್ಕೆ ತಂದರು.<br>ಸದಸ್ಯರಾದ ಶ್ರೀ ರವೀಂದ್ರ ನಾಯ್ಕರ ಇವರು ಡಾ. ಎಂ. ಬಿ. ಛಲವಾದಿ ಇವರಿಗೆ ಸಿ.ಎ.ಎಸ್. ಅಡಿ ವೃತಿ ಪದೋನ್ನತಿಯನ್ನು ಏಕೆ ನೀಡಿರುವುದಿಲ್ಲ ಎಂದು ಪ್ರಶ್ನಿಸಿದರು. ಪ್ರತಿಕ್ರಿಯಿಸಿದ ಮಾನ್ಯ ಕುಲಪತಿಗಳು, ಸಿ.ಎ.ಎಸ್. ಪದೋನ್ನತಿಗಾಗಿ ಯುಜಿಸಿ ನಿಯಮಾವಳಿಗಳನ್ವಯ ರಚಿಸಲಾದ ಆಯ್ಕೆ ಸಮಿತಿಯು Not Recommanded ಎಂದು ಶಿಫಾರಸ್ಸಿನ ನೀಡಿರುವ ಹಿನ್ನೆಲೆಯಲ್ಲಿ ಸದರಿಯವರಿಗೆ ಪದೋನ್ನತಿಯನ್ನು ನೀಡಿರುವುದಿಲ್ಲ ಎಂದರು.<br>ಮುಂದುವರೆದು, ಸಿ.ಎ.ಎಸ್. ಪದೋನ್ನತ್ತಿಗೆ ಸಂಬಂಧಿಸಿದ ಅಧಿಸೂಚನೆ ಹೊರಡಿಸುವುದು ಸದರಿ ಸಿಬ್ಬಂದಿಯವರಿಗೆ ಒಂದು ಅವಕಾಶ ನೀಡಿ, ಅರ್ಜಿ ಸಲ್ಲಿಸಿದ ನಂತರ ಯುಜಿಸಿ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲು ಸಭೆಯು ಸೂಚಿಸಿತು.<br>ಡಾ. ಎಂ.ಬಿ. ಛಲವಾದಿ ಇವರು ಕರ್ನಾಟಕ ರಾಜ್ಯ ನಾಗರಿಕ ಸೇವಾ (ನಡತೆ) ನಿಯಮಗಳು, 2021ರ ನಿಯಮ 29 ವನ್ನು ಉಲ್ಲಂಘಿಸಿರುವುದರಿಂದ ಎಚ್ಚರಿಕೆ ನೀಡಲು ಸಭೆಯು ತೀರ್ಮಾನಿಸಿತು. |

| | | |
|---|---|---|
| 11 | 2026/02/11 | ಆರ್‌ಸಿಯು-ಫೆಸ್ಮಾ (RCU-FESMA) ಕಂಪನಿಯ ಜಾರಿ, ನಿಯಮಾವಳಿಗಳು, ನೇಮಕಾತಿ ಮತ್ತು ಆರ್ಥಿಕ ವಿಷಯಗಳ ಕುರಿತು ಸಿಂಡಿಕೇಟ್ ಸಭೆಗೆ ಮಾಹಿತಿಗಾಗಿ ಒದಗಿಸುವ ಕುರಿತು. |
| | ತೀರ್ಮಾನ | ಸದಸ್ಯರಾದ ಡಾ. ಕಾವೇರಿ.ಎಚ್. ಎಂ. ಇವರು ಸೆಕ್ಷನ್ 8 ಆರ್‌ಸಿಯು-ಫೆಸ್ಮಾ (RCU-FESMA) ಕಂಪನಿಯನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವ ಸಲಹೆಗೆ ಒಪ್ಪಿಗೆ ನೀಡಲಾಗಿರುತ್ತದೆ ಹೊರತು By Law ಗೆ ಅಲ್ಲ. ಕಾರಣ, ಕಂಪನಿಗೆ ಸಂಬಂಧಿಸಿದ By Law ದೊಂದಿಗೆ ಮುಂದಿನ ಸಿಂಡಿಕೇಡ್ ಸಭೆಗೆ ಮರುಮಂಡಿಸಲು ತಿಳಿಸಿದರು.<br>ಸದಸ್ಯರಾದ ಡಾ. ಮಹಾಂತೇಶ ಕಂಬಾರ ಇವರು ಮರುಮಂಡಿಸಿ ಎಂಬ ಪದದ ಅರ್ಥವೇನು? ಈಗಾಗಲೇ ಹಿಂದಿನ ಸಿಂಡಿಕೇಟ್ ಸಭೆಯಂತೆ ಸೆಕ್ಷನ್ 8 ಕಂಪನಿಯನ್ನು ನೋಂದಾಯಿಸಿಕೊಳ್ಳಲಾಗಿದೆ(Registration) ಎಂದರು.<br>ಚರ್ಚಿಸಿದ ನಂತರ, ಸಭೆಯು ಆರ್‌ಸಿಯು-ಫೆಸ್ಮಾ(RCU-FESMA) ಕಂಪನಿಯ By Law ದೊಂದಿಗೆ ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ತೀರ್ಮಾನಿಸಲಾಯಿತು. |
| 12 | 2026/02/12 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಆವರಣಕ್ಕೆ ನಾಮಕರಣ ಮಾಡಲು ಮತ್ತು ಮೂಲ ಸೌಕರ್ಯಕ್ಕಾಗಿ ಕ್ರಮವಹಿಸುವ ಕುರಿತು. |
| | ತೀರ್ಮಾನ | ಹಿರೇಬಾಗೇವಾಡಿಯ ಮಲ್ಲಪ್ಪನ ಗುಡ್ಡದಲ್ಲಿ ನಿರ್ಮಾಣವಾಗಿರುವ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಮುಖ್ಯ ಆವರಣದಲ್ಲಿ ಮುಂದಿನ ಶೈಕ್ಷಣಿಕ ವರ್ಷದಿಂದ ವಿಜ್ಞಾನ ಅಧ್ಯಯನ ವಿಭಾಗಗಳು ಪ್ರಾರಂಭಿಸಲಾಗುತ್ತಿದ್ದು, ಸದರಿ ಆವರಣಕ್ಕೆ "ವಿಜ್ಞಾನ ಸಂಗಮ" ವೆಂದು ನಾಮಕರಣ ಮಾಡುವ ಕುರಿತಾಗಿ ಸಭೆಯಲ್ಲಿ ಚರ್ಚಿಸಲಾಯಿತು. ಸಭೆಯು "ವಿಜ್ಞಾನ ಸಂಗಮ" ಎಂದು ಹಿರೇಬಾಗೇವಾಡಿಯ ಆವರಣಕ್ಕೆ ನಾಮಕರಣ ಮಾಡಲು ಹಾಗೂ ಅಗತ್ಯ ಕ್ರಮ ಕೈಗೊಳ್ಳಲು ತೀರ್ಮಾನಿಸಿತು.<br>ಮತ್ತು ಈ ಕೆಳಕಾಣಿಸಿದ ಮೂಲ ಸೌಕರ್ಯಗಳನ್ನು ಪ್ರಾರಂಭಿಸಲು ಸಂಬಂಧಿಸಿದ ಇಲಾಖೆಗಳಿಗೆ ಪತ್ರ ಬರೆಯುವುದು ಹಾಗೂ ಕ್ರಮ ವಹಿಸಲು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು.<br>ಮೂಲ ಸೌಕರ್ಯಗಳು ಈ ಕೆಳಗಿನಂತೆ ಇರುತ್ತದೆ.<br>1. ಬೆಳಗಾವಿ ನಗರ ಕೇಂದ್ರ ಬಸ್ ನಿಲ್ದಾಣದಿಂದ ನೂತನ ಮುಖ್ಯ ಆವರಣಕ್ಕೆ ಬಸ್ ಸಂಪರ್ಕಕ್ಕಾಗಿ KSRTC ಕಛೇರಿಗೆ ಪತ್ರ ಬರೆಯುವುದು.<br>2. ವಿಶ್ವವಿದ್ಯಾಲಯ ಮತ್ತು ಸಿಬ್ಬಂದಿಗಳ ಹಣಕಾಸಿನ ವ್ಯವಹಾರಕ್ಕಾಗಿ ಬ್ಯಾಂಕ ಶಾಖೆ ಪ್ರಾರಂಭಿಸುವುದು ಹಾಗೂ ಈಗಿರುವ ರಾಷ್ಟೀಕೃತ ಬ್ಯಾಂಕಗೆ ಮೊದಲು ಆದ್ಯತೆ ನೀಡುವುದು.<br>3. ವಿಶ್ವವಿದ್ಯಾಲಯದ ಪತ್ರ ವ್ಯವಹಾರಕ್ಕಾಗಿ ಅಂಚೆ ಕಛೇರಿ ಪ್ರಾರಂಭಿಸುವುದು.<br>4. ವಿಶ್ವವಿದ್ಯಾಲಯಕ್ಕೆ ಭೇಟಿ ನೀಡುವ ಪಾಲಕರು, ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗಳಿಗೆ ಅಲ್ಪೋಪಹಾರ ಮತ್ತು ಚಹಾ ಅನುಕೂಲಕ್ಕಾಗಿ ಉಪಹಾರ ಗೃಹ (ಕ್ಯಾಂಟಿನ್) ಆರಂಭಿಸಲು ಕ್ರಮ ವಹಿಸುವುದು.<br>5. ವಿದ್ಯಾರ್ಥಿಗಳು ಮುದ್ರಣ ಪ್ರತಿ ಮತ್ತು ನಕಲು ಪ್ರತಿ ಪಡೆಯಲು ಝುರಾಕ್ಸ ಕೇಂದ್ರಗಳನ್ನು ಆರಂಭಿಸಲು ಕ್ರಮ ವಹಿಸುವುದು.<br>6. ಪೋಲೀಸ್ ಚೌಕಿಗಾಗಿ ಸಂಬಂಧಿಸಿದವರಿಗೆ ಪತ್ರ ಬರೆಯುವುದು.<br>ಸದಸ್ಯರಾದ ಡಾ. ಮಹಾಂತೇಶ ಕಂಬಾರ ಇವರು ಸಾರ್ವಜನಿಕ ಆರೋಗ್ಯ ಕೇಂದ್ರವನ್ನು |

| | | |
|---|---|---|
| | | **ಸ್ಥಾಪಿಸಲು ಸಲಹೆ ನೀಡಿದ ಹಿನ್ನೆಲೆಯಲ್ಲಿ, ಸ್ಥಳೀಯ ನಿವಾಸಿಗಳೊಂದಿಗೆ ಚರ್ಚಿಸಿ, ಆರೋಗ್ಯ ಇಲಾಖೆಗೆ ಅಗತ್ಯ ಪ್ರಸ್ತಾಪನೆಯನ್ನು ಸಲ್ಲಿಸಲು ಕ್ರಮವಹಿಸಲಾಗುವುದು ಎಂದು ಕುಲಸಚಿವರು ತಿಳಿಸಿದರು.** |
| 13 | 2026/02/13 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹೆಸರನ್ನು "ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ" ಎಂದು ಮರುನಾಮಕರಣ ಮಾಡಿರುವ ಕುರಿತು. |
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹೆಸರನ್ನು "ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ" ಎಂದು ಮರು ನಾಮಕರಣ ಮಾಡಿರುವ ವಿಧೇಯಕ ಕುರಿತು ಮಾನ್ಯ ರಾಜ್ಯಪಾಲರಿಗೆ ಕಳುಹಿಸಿದ ನಿವೇದನಾ ಟಿಪ್ಪಣಿ, ವಿಧೇಯಕಕ್ಕೆ ಮಾನ್ಯ ರಾಜ್ಯಪಾಲರು ಅಂಕಿತ ನೀಡಿರುತ್ತಾರೆ. ಆದರೆ, ವಿಶ್ವವಿದ್ಯಾಲಯದ ಹೆಸರು "ಕಿತ್ತೂರು ರಾಣಿಚೆನ್ನಮ್ಮ ವಿಶ್ವವಿದ್ಯಾನಿಲಯ" "Kitturu Ranichannamma University" ಎಂದು ರಾಜ್ಯ ಪತ್ರದಲ್ಲಿ ನಮೂದಾಗಿರುವುದರಿಂದ "ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ" ಎಂದು ತಿದ್ದುಪಡಿ ಮಾಡಲು ಕಡತವನ್ನು ಮಂಡಿಸಲಾಗಿದೆ. ಆದ್ದರಿಂದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹೆಸರನ್ನು "ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ" ಹಾಗೂ ಆಂಗ್ಲ ಭಾಷೆಯಲ್ಲಿ "Kitturu Rani Channamma University" ಎಂದು ರಾಜ್ಯಪತ್ರದಲ್ಲಿ ತಿದ್ದುಪಡಿ ಈಗಾಗಲೇ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ ಎಂಬ ಮಾಹಿತಿಯನ್ನು ಸಭೆಗೆ ನೀಡಲಾಯಿತು. ಚರ್ಚಿಸಿದ ಸಭೆಯು ರಾಜ್ಯಪತ್ರದಲ್ಲಿ ತಿದ್ದುಪಡಿ ನಂತರ ನಿಯಮಾನುಸಾರ ಮುಂದಿನ ಕ್ರಮ ವಹಿಸಲು ಸೂಚಿಸಿತು.**<br>**ಸದಸ್ಯರಾದ ಡಾ. ಮಹಾಂತೇಶ ಕಂಬಾರ ಇವರು "ಕಿತ್ತೂರು" ಪದವನ್ನು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹೆಸರಿಗೆ ಸೇರ್ಪಡಿಸುವುದು ಕಿತ್ತೂರು ಜನತೆಯ ಬಹುದಿನಗಳ ಬೇಡಿಕೆಯಾಗಿತ್ತು. ಈ ಕುರಿತಂತೆ ತಾವು ಈ ಹಿಂದೆ ಮನವಿಯನ್ನು ಕೂಡ ಸಲ್ಲಿಸಿದ್ದು, ಸದರಿ ಮನವಿಯನ್ನು ಪುರಸ್ಕರಿಸಿ ವಿಶ್ವವಿದ್ಯಾಲಯದ ವಿದ್ಯಾವಿಷಯಕ್ ಮತ್ತು ಸಿಂಡಿಕೇಟ್ ಸಭೆ ಅನುಮೋದನೆ ನೀಡಿ, ತದನಂತರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಸರ್ಕಾರವು ಕೂಡ ಸಕಾರಾತ್ಮಕವಾಗಿ ಸ್ಪಂದಿಸಿ "ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ" ಎಂದು ಮರುನಾಮಕರಣ ಮಾಡಿ ಆದೇಶಿಸಿರುತ್ತದೆ. ಕಾರಣ, ಕರ್ನಾಟಕ ಸರ್ಕಾರ, ವಿಶ್ವವಿದ್ಯಾಲಯದ ವಿದ್ಯಾವಿಷಯಕ್ ಮತ್ತು ಸಿಂಡಿಕೇಟ್ ಸಭೆ ಸದಸ್ಯರುಗಳಿಗೆ ಮತ್ತು ವಿಶ್ವವಿದ್ಯಾಲಯದ ಆಡಳಿತ ವರ್ಗಕ್ಕೆ ಕಿತ್ತೂರು ಜನತೆ ಪರವಾಗಿ ಧನ್ಯವಾದ ತಿಳಿಸಿದರು.** |
| 14 | 2026/02/14 | 2025-26ನೇ ಸಾಲಿನ ಹಣಕಾಸು ಸಮಿತಿ ಸಭೆಯ ನಡಾವಳಿಗಳಿಗೆ ಅನುಮೋದನೆ ನೀಡುವ ಕುರಿತು |
| | **ತೀರ್ಮಾನ** | **ಮುಂದೂಡಲಾಯಿತು.** |
| 15 | 2026/02/15 | 2025-26ನೇ ಸಾಲಿನ ಡಿಸೆಂಬರ್-ಜನವರಿನಲ್ಲಿ ಜರುಗಿದ ಪರೀಕ್ಷೆಗಳ MPLEC ನಕಲು ಪ್ರಕರಣ ಭಾಗಿಯಾದ ವಿದ್ಯಾರ್ಥಿಗಳ ವಿಚಾರಣಾ ಪ್ರಕ್ರಿಯೆ ಕೈಗೊಳ್ಳಲು ಸಭೆಯ ಅನುಮೋದನೆಗಾಗಿ ಮಂಡಿಸುವ ಕುರಿತು. |
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ 2025-26 ರ ಡಿಸೆಂಬರ್-ಜನವರಿನಲ್ಲಿ ಬೆಳಗಾವಿ, ವಿಜಯಪುರ ಮತ್ತು ಬಾಗಲಕೋಟ ಜಿಲ್ಲೆಗಳಲ್ಲಿ 1, 3 ಮತ್ತು 5 ನೇ ಸ್ನಾತಕ, ಸ್ನಾತಕೋತ್ತರ ರೆಗ್ಯೂಲರ ಮತ್ತು ರಿಪೀಟರ್ ಪರೀಕ್ಷೆಗಳು ಜರುಗಿದ್ದು, ಸದರಿ ಪರೀಕ್ಷೆಗಳಲ್ಲಿ ನಕಲು** |

| | | |
|---|---|---|
| | | **ಆರೋಪ ಹೊಂದಿರುವ ವಿದ್ಯಾರ್ಥಿಗಳ(557) ವಿಚಾರಣಾ ಪ್ರಕ್ರಿಯೆ ಕೈಗೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು.**<br>**ಸದಸ್ಯರಾದ ಶ್ರೀ ರಫೀ ಭಂಡಾರಿ ಇವರು 2025-26 ರ 1, 3 ಮತ್ತು 5 ನೇ ಸ್ನಾತಕ, ಸ್ನಾತಕೋತ್ತರ ರೆಗ್ಯೂಲರ ಮತ್ತು ರಿಪೀಟರ್ ಪರೀಕ್ಷೆಗಳನ್ನು ಪಾರದರ್ಶಕವಾಗಿ, ಅಚ್ಚುಕಟ್ಟಾಗಿ, ಹಾಗೂ ಯಶಸ್ವಿಯಾಗಿ ನಿರ್ವಹಿಸಿದ್ದಕ್ಕೆ ಶ್ಲಾಘನೆ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ, ಸಭೆಯು ಕುಲಸಚಿವರು(ಮೌಲ್ಯಮಾಪನ) ಮತ್ತು ಪರೀಕ್ಷಾ ವಿಭಾಗದ ಸಿಬ್ಬಂದಿಗಳಿಗೆ ಅಭಿನಂದನೆ ಸಲ್ಲಿಸಿತು.**<br>**ಸದಸ್ಯರಾದ ಶ್ರೀ ಆರ್.ಎಂ. ದೇವರೆಡ್ಡಿ ಇವರು Squad Committee ರಚಿಸುವ ಸಂದರ್ಭದಲ್ಲಿ ಅಧ್ಯಾಪಕರುಗಳ ಜೇಷ್ಠತೆಯನ್ನು ಪಾಲಿಸಲು ಸಲಹೆ ನೀsಡಿದರು.** |
| 16 | 2026/02/16 | 2026–27ನೇ ಶೈಕ್ಷಣಿಕ ಸಾಲಿನ ಸಂಯೋಜನೆಗಾಗಿ ವಿವಿಧ ಆಡಳಿತ ಮಂಡಳಿ / ಸಂಘ ಸಂಸ್ಥೆಗಳು / ಸರ್ಕಾರಿ ಮಹಾವಿದ್ಯಾಲಯಗಳು ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಗಳನ್ನು ಸಭೆಯ ಮುಂದೆ ಮಂಡಿಸಿ, ಸಂಯೋಜನಾ ಪ್ರಕ್ರಿಯೆಗಳಿಗೆ ಮಾನ್ಯ ಕುಲಪತಿಗಳು ಹಾಗೂ ಕುಲಸಚಿವರು ನೀಡಿರುವ ಅನುಮೋದನೆಗೆ ಅನುಸಮ್ಮತಿ ನೀಡಿರುವ ಕುರಿತು. |
| | ತೀರ್ಮಾನ | **2026-27 ಶೈಕ್ಷಣಿಕ ಸಾಲನ ಸಂಯೋಜನೆ ಪ್ರಕ್ರಿಯೆಗಳನ್ನು ಪ್ರಾರಂಭಿಸುವಂತೆ ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಆದೇಶದ ಮೂಲಕ ನಿರ್ದೇಶಿಸಿರುತ್ತಾರೆ. ಇದರನ್ವಯ, ವಿಶ್ವವಿದ್ಯಾಲಯವು ದಿನಾಂಕ: 11.11.2025ರಂದು ರಾಜ್ಯದ ದೈನಂದಿನ ದಿನಪತ್ರಿಕೆಗಳಾದ ಇಂಡಿಯನ್ ಎಕ್ಸ್ ಪ್ರೆಸ್ ಹಾಗೂ ವಿಜಯವಾಣಿ ಪತ್ರಿಕೆಗಳಲ್ಲಿ ಜಾಹೀರಾತಾನ್ನು ನೀಡಿ, ದಿನಾಂಕ: 10.11.2025 ರಿಂದ 25.11.2025 ರವರೆಗೆ ದಂಡ ರಹಿತವಾಗಿ ಹಾಗೂ 26.11.2025 ರಿಂದ 30.11.2025ರವರೆಗೆ ದಂಡ ಸಹಿತವಾಗಿ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿತ್ತು. ಇದರನ್ವಯ, ಈ ಕೆಳಕಂಡ ಮಹಾವಿದ್ಯಾಲಯಗಳು ವಿವಿಧ ತೆರನಾದ ಸಂಯೋಜನೆಗಳಿಗಾಗಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.** |

| ಕ್ರ. ಸಂ | ಜಿಲ್ಲೆ | 2026-27ನೇ ಸಾಲಿಗೆ ಮುಂದುವರಿಕೆ/ ವಿಸ್ತರಣೆಗಾಗಿ ಅರ್ಜಿ ಸಲ್ಲಿಸಿದ ಮಹಾವಿದ್ಯಾಲಯಗಳು | ಅರ್ಜಿ ಸಲ್ಲಿಸದೇ ಇರುವ ಮಹಾವಿದ್ಯಾಲಯಗಳು | | ಪ್ರಸ್ತುತ ಇರುವ ಸಂಯೋಜಿತಗೊಂಡಿರುವ ಒಟ್ಟು ಮಹಾವಿದ್ಯಾಲಯಗಳು | 2026-27ನೇ ಸಾಲಿಗೆ ಹೊಸದಾಗಿ ಪ್ರಾರಂಭಿಸಲು ಅರ್ಜಿ ಸಲ್ಲಿಸಿದ ಹೊಸ ಮಹಾವಿದ್ಯಾಲಯ |
|---|---|---|---|---|---|---|
| | | | ಸಂಪೂರ್ಣವಾಗಿ ಅರ್ಜಿ ಸಲ್ಲಿಸದೇ ಇರುವ ಮಹಾವಿದ್ಯಾಲಯಗಳು | ಸ್ವಾಯತ್ತ/ ಶಾಶ್ವತ ಸಂಯೋಜನೆ ಹೊಂದಿರುವ ಮಹಾವಿದ್ಯಾಲಯ | | |
| 1 | ಬೆಳಗಾವಿ | 192 | 25 | 10 | 227 | 6 |
| 2 | ವಿಜಯಪುರ | 129 | 11 | 5 | 145 | 4 |
| | ಒಟ್ಟು | 321 | 36 | 15 | 372 | 10 |

<table>
<tr><td></td><td></td><td>ಸದರಿ ಅರ್ಜಿಗಳು UUCMS Portalನ Affiliation Module ನಲ್ಲಿ ಲಭ್ಯವಿರುತ್ತದೆ. ಇವುಗಳನ್ನು ಪರಿಶೀಲಿಸಿ ಮೇಲ್ಕಾಣಿಸಿದ ಮಹಾವಿದ್ಯಾಲಯಗಳ ಮುಂದಿನ ಸಂಯೋಜನಾ ಪ್ರಕ್ರಿಯೆಯು ನಡೆದಿದ್ದು, ಸದರಿ ಸಂಯೋಜನಾ ಪ್ರಕ್ರಿಯೆಗೆ ಸಭೆಯು ಅನುಸಮರ್ಥನೆ ನೀಡಿತು.</td></tr>
<tr><td>17</td><td>2026/02/17</td><td>2026–27ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ಸಂಬಂಧಿಸಿದಂತೆ ಸ್ಥಳೀಯ ವಿಚಾರಣಾ ಸಮಿತಿಗಳು ಮಹಾವಿದ್ಯಾಲಯಗಳಿಗೆ ಭೇಟಿ ನೀಡಿ ಸಲ್ಲಿಸಿದ ವರದಿಗಳಿಗೆ ಅನುಮೋದನೆ ಕೋರಿರುವ ಕುರಿತು.</td></tr>
<tr><td></td><td>ತೀರ್ಮಾನ</td><td>2026-27ನೇ ಶೈಕ್ಷಣಿಕ ಸಾಲಿನ ಸಂಯೋಜನೆ ಪ್ರಕ್ರಿಯೆಗಳಾದ ಮುಂದುವರಿಕೆ/ವಿಸ್ತರಣೆ ಹಾಗೂ ಹೊಸ ಮಹಾವಿದ್ಯಾಲಯಗಳನ್ನು ಪ್ರಾರಂಭಿಸಲು ಸಂಘ-ಸಂಸ್ಥೆಗಳಿಂದ ಹಾಗೂ ಹೊಸ ಪ್ರಸ್ತಾವನೆಗಳ ಅನುಮೋದನೆಗಾಗಿ ಅರ್ಜಿಗಳ ಪರಿಶೀಲನೆಗಾಗಿ ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರ, ಪ್ರಕರಣ 60 ರ ಪ್ರಕಾರ, ಸಮಿತಿಯಲ್ಲಿ ಕನಿಷ್ಠ ಒಬ್ಬ ಸದಸ್ಯರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರಬೇಕೆಂಬ ನಿಯಮಾನುಸಾರ ಒಟ್ಟು 25 ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸಲಾಗಿತ್ತು ಸಮಿತಿಯ ವಿವರಗಳನ್ನು ಅನುಬಂಧ – 1 ರಲ್ಲಿ ಸಭೆಗೆ ಮಂಡಿಸಲಾಯಿತು.<br>ಸದರಿ ಸಮಿತಿಗಳು ಮಹಾವಿದ್ಯಾಲಯಗಳಿಗೆ ಮತ್ತು ಹೊಸ ಮಹಾವಿದ್ಯಾಲಯವನ್ನು ಪ್ರಾರಂಭಿಸಲು ಅರ್ಜಿ ಸಲ್ಲಿಸಿದ ಸಂಘ ಸಂಸ್ಥೆಗಳಿಗೆ ಭೇಟಿ ನೀಡಿ UUCMS ಪೋರ್ಟಲ್ ನಲ್ಲಿ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ಮಹಾವಿದ್ಯಾಲಯಗಳ ವಿವರ ಈ ಕೆಳಗಿನಂತಿವೆ:</td></tr>
<tr><td></td><td></td><td>
<table>
<tr><td>ಕ್ರ. ಸಂ</td><td>ಜಿಲ್ಲೆ</td><td>2026-27ನೇ ಸಾಲಿಗೆ ಮುಂದುವರಿಕೆ/ವಿಸ್ತರಣೆಗಾಗಿ ಅರ್ಜಿ ಸಲ್ಲಿಸಿದ ಮಹಾವಿದ್ಯಾಲಯಗಳು</td><td>2026-27ನೇ ಸಾಲಿಗೆ ಹೊಸದಾಗಿ ಪ್ರಾರಂಭಿಸಲು ಅರ್ಜಿ ಸಲ್ಲಿಸಿದ ಹೊಸ ಮಹಾವಿದ್ಯಾಲಯ</td><td>2026–27ನೇ ಶೈಕ್ಷಣಿಕ ಸಾಲಿನಲ್ಲಿ LIC ಸಮಿತಿಯು ಮಹಾವಿದ್ಯಾಲಯಗಳಿಗೆ ಭೇಟಿ ನೀಡಿ, UUCMS ಪೋರ್ಟಲ್ ನಲ್ಲಿ ವರದಿ ಸಲ್ಲಿಸಿದ ಒಟ್ಟು ಮಹಾವಿದ್ಯಾಲಯಗಳು.</td><td>ಮಹಾವಿದ್ಯಾಲಯ ಪರಿಶೀಲನೆಗಾಗಿ ರಚಿತವಾದ ಒಟ್ಟು ಸ್ಥಳೀಯ ವಿಚಾರಣಾ ಸಮಿತಿಗಳ ಸಂಖ್ಯೆ</td></tr>
<tr><td>1</td><td>ಬೆಳಗಾವಿ</td><td>192</td><td>6</td><td>198</td><td>15</td></tr>
<tr><td>2</td><td>ವಿಜಯಪುರ</td><td>129</td><td>4</td><td>133</td><td>10</td></tr>
<tr><td></td><td>ಒಟ್ಟು</td><td>321</td><td>10</td><td>331</td><td>25</td></tr>
</table>
</td></tr>
</table>

<table>
<tr><td></td><td></td><td>ಸ್ಥಳೀಯ ವಿಚಾರಣಾ ಸಮಿತಿಗಳು UUCMS ಪೋರ್ಟಲ್ ಮೂಲಕ ಸಲ್ಲಿಸಿರುವ ವರದಿಗಳ ದ್ವೀ ಪ್ರತಿಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದು ಸದರಿ ವರದಿಯು UUCMS ಪೋರ್ಟಲ್ Affiliation Module ನಲ್ಲಿ ಲಭ್ಯವಿರುತ್ತದೆ. ಕಾರಣ, ಸದರಿ ವರದಿಗಳನ್ನು ಪರಿಶೀಲಿಸಿ ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು.</td></tr>
<tr><td>18</td><td>2026/02/18</td><td>2026-27ನೇ ಶೈಕ್ಷಣಿಕ ಸಾಲಿನಲ್ಲಿ ವಿವಿಧ ರೀತಿಯ ಸಂಯೋಜನಾ ಅರ್ಜಿಗಳಾದ ಹೊಸ ಕಾಲೇಜು / ಹೊಸ ಕೋರ್ಸ್ / ಹೊಸ ಭಾಷಾ ಐಚ್ಛಿಕ ವಿಷಯ / ಶಾಶ್ವತ ಸಂಯೋಜನೆ / ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶ ಮಿತಿ ಹೆಚ್ಚಳ / ಸ್ಥಳಾಂತರ / ಹೆಸರು ಬದಲಾವಣೆ / ಸ್ಥಗಿತಗೊಳಿಸುವಿಕೆ ಕುರಿತ ಅರ್ಜಿಗಳನ್ನು ಸ್ಥಳೀಯ ಸ್ಥಾನಿಕ ವಿಚಾರಣಾ ಸಮಿತಿಯ ಶಿಫಾರಸ್ಸಿನನ್ವಯ ಅಂತಿಮ ಅನುಮೋದನೆಗಾಗಿ ಸರ್ಕಾರಕ್ಕೆ ಕಳುಹಿಸಿ ಕೊಡಲು ಸಭೆಯ ಅನುಮೋದನೆಯನ್ನು ಕೋರಿರುವ ಕುರಿತು.</td></tr>
<tr><td></td><td>ತೀರ್ಮಾನ</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದಲ್ಲಿ ಸಂಯೋಜಿತಗೊಂಡಿರುವ ಮಹಾವಿದ್ಯಾಲಯಗಳ ಮುಂದುವರಿಕೆ / ವಿಸ್ತರಣೆ / ಹೊಸ ಮಹಾವಿದ್ಯಾಲಯ / ಹೊಸ ಕೋರ್ಸ್ / ಹೊಸ ಭಾಷಾ ಐಚ್ಛಿಕ ವಿಷಯ / ಶಾಶ್ವತ ಸಂಯೋಜನೆ / ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶ ಮಿತಿ / ಸ್ಥಳಾಂತರ / ಹೆಸರು ಬದಲಾವಣೆ / ಸ್ಥಗಿತಗೊಳಿಸುವಿಕೆ ಕುರಿತಂತೆ, ಸ್ಥಳೀಯ ವಿಚಾರಣಾ ಸಮಿತಿಯು ನಮೂದಿಸಿರುವ ದತ್ತಾಂಶಗಳ ಆಧಾರದ ಮೇಲೆ UUCMS ಪೋರ್ಟಲ್‌ನಲ್ಲಿ ಸ್ವಯಂಚಾಲಿತವಾಗಿ ಸಂಯೋಜನಾ ಮಾನದಂಡಗಳನ್ನು ಆಧರಿಸಿ ಅಂಕಗಳನ್ನು ನೀಡಲಾಗುತ್ತದೆ.<br>ಸರ್ಕಾರದ ಆದೇಶದನ್ವಯ (ಇಡಿ 29 ಯುಎನ್‌ಇ 2021, ದಿನಾಂಕ: 12.02.2021) ಕೆಳಕಂಡಂತೆ ಕನಿಷ್ಠ ಸಂಯೋಜನಾ ಅಂಕಗಳನ್ನು ಹೊಂದಿರುವ ಪ್ರಸ್ತಾವನೆಗಳಿಗೆ ಹಾಗೂ ಶಿಫಾರಸ್ಸುಗೊಳ್ಳದ ಪ್ರಸ್ತಾವನೆಗಳಿಗೆ ಕಡ್ಡಾಯವಾಗಿ ಸರ್ಕಾರಕ್ಕೆ ಅಂತಿಮ ಅನುಮೋದನೆಗಾಗಿ UUCMS Portal ಮುಖಾಂತರ ಸಲ್ಲಿಸಬೇಕಾಗುತ್ತದೆ:</td></tr>
<tr><td></td><td></td><td>
<table>
<tr><th>ಕ್ರಮ ಸಂ</th><th>ನಿಗದಿಪಡಿಸಬಹುದಾದ ಸಂಯೋಜನೆಯ ರೀತಿ</th><th>ಅವಶ್ಯವಿರುವ ಕನಿಷ್ಠ ಸಂಯೋಜನಾ ಶೇಕಡ ಅಂಕಗಳು (%) ರಿಯಾಯಿತಿ ನಂತರ</th></tr>
<tr><td>1</td><td>ಹೊಸ ಸಂಯೋಜನೆಗಳು/ ಹೊಸ ಮಹಾವಿದ್ಯಾಲಯ</td><td>35</td></tr>
<tr><td>2</td><td>ಸಂಯೋಜನೆಯ ನವೀಕರಣ/ಮುಂದುವರಿಕೆ/ವಿಸ್ತರಣೆ</td><td>40</td></tr>
<tr><td>3</td><td>ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಳ</td><td>45</td></tr>
<tr><td>4</td><td>ಹೊಸ ಕೋರ್ಸುಗಳ/ಹೊಸ ಕಾಂಬೀನೇಷನ್‌ಗಳ ಮಂಜೂರಾತಿ</td><td>50</td></tr>
<tr><td>5</td><td>ಹೊಸ ಶಾಶ್ವತ ಸಂಯೋಜನೆಗಳು</td><td>55</td></tr>
<tr><td>6</td><td>ಶಾಶ್ವತ ಸಂಯೋಜನ ನವೀಕರಣ</td><td>65</td></tr>
</table>
ಮೇಲಿನ ಸಂಯೋಜನಾ ಅಂಕಗಳ ಅಧಾರದ ಮೇಲೆ, LIC ಸಮಿತಿಯು ಈ ಕೆಳಕಂಡಂತೆ ಹೊಸ ಪ್ರಸ್ತಾವನೆಗಳ ಅನುಮೋದನೆಗಾಗಿ ಶಿಫಾರಸ್ಸು ಮಾಡಲಾಗಿದೆ:</td></tr>
</table>

| ಕ್ರ. ಸಂ | ಸಂಯೋಜನೆಯ ವಿಧ | ಶಿಫಾರಸ್ಸುಗೊಂಡ ಒಟ್ಟು ಹೊಸ ಪ್ರಸ್ತಾವನೆಗಳು | | |
|---|---|---|---|---|
| | | ಬೆಳಗಾವಿ | ವಿಜಯ ಪುರ | ಒಟ್ಟು |
| 1 | ಹೊಸ ಮಹಾವಿದ್ಯಾಲಯ | 6 | 4 | 10 |
| 2 | ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಳ/ಕಡಿಮೆ | 11 | 11 | 22 |
| 3 | ಹೊಸ ಕೋರ್ಸುಗಳ/ಹೊಸ ಕಾಂಬೀನೇಷನ್‌ಗಳ ಮಂಜೂರಾತಿ | 19 | 16 | 35 |
| 4 | ಹೊಸ ಶಾಶ್ವತ ಸಂಯೋಜನೆಗಳು | 0 | 0 | 0 |
| 5 | ಶಾಶ್ವತ ಸಂಯೋಜನ ನವೀಕರಣ | 12 | 2 | 14 |
| 6 | ಸ್ಥಗಿತಕ್ಕಾಗಿ ಅರ್ಜಿ ಸಲ್ಲಿಸಿದ ಮಹಾವಿದ್ಯಾಲಯಗಳು | 7 | 2 | 9 |
| 7 | ಮಹಾವಿದ್ಯಾಲಯದ ಹೆಸರು ಬದಲಾವಣೆ/ ಅಡಳಿತ ಮಂಡಳಿಯ ಬದಲಾವಣೆ/ಸ್ಥಳ ಬದಲಾವಣೆಗಾಗಿ ಅರ್ಜಿ ಸಲ್ಲಿಸಿದ ಒಟ್ಟು ಮಹಾವಿದ್ಯಾಲಯಗಳು | 1 | 4 | 5 |
| | ಸರ್ಕಾರಕ್ಕೆ ಸಲ್ಲಿಸುತ್ತಿರುವ ಒಟ್ಟು ಪ್ರಸ್ತಾವನೆಗಳು | 56 | 39 | 95 |

**ಮೇಲಿನ ಕೋಷ್ಟಕದಲ್ಲಿ ನಮೂದಿಸಿರುವ ಹೊಸ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ, ಸ್ಥಳೀಯ ಸ್ಥಾನಿಕ ವಿಚಾರಣಾ ಸಮಿತಿಯಿಂದ ಶಿಫಾರಸ್ಸುಗೊಂಡ ಹಾಗೂ ಶಿಫಾರಸ್ಸುಗೊಳ್ಳದ ಪ್ರಸ್ತಾವನೆಗಳ ವಿವರಗಳನ್ನು ಅನುಬಂಧ-1ರಲ್ಲಿ ಸಭೆಗೆ ಮಂಡಿಸಲಾಯಿತು. ಮುಂದುವರೆದು, ಸಭೆಯು ಸದರಿ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಅಂತಿಮ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲು ತೀರ್ಮಾನಿಸಿತು.**

| | | |
|---|---|---|
| 19 | 2026/02/19 | 2026-27ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಪ್ರಕ್ರಿಯೆಗೆ ಸಂಬಂಧಿಸಿದಂತೆ ಸ್ಥಳೀಯ ವಿಚಾರಣಾ ಸಮಿತಿಯ ಅಧ್ಯಕ್ಷರು, ಸದಸ್ಯರು ಹಾಗೂ ಲಿಪಿಕ ಸಿಬ್ಬಂದಿಗಳಿಗೆ ನೀಡಬೇಕಾದ ಗೌರವಧನ / ದಿನಭತ್ಯೆ / ಪ್ರಯಾಣ ಭತ್ಯೆಗಳಿಗೆ ಮಾನ್ಯ ಕುಲಪತಿಗಳು ಹಾಗೂ ಕುಲಸಚಿವರು ನೀಡಿರುವ ಅನುಮೋದನೆಗೆ ಅನುಸಮರ್ಥನೆಗಾಗಿ ಸಲ್ಲಿಸುವ ಕುರಿತು. |
| | **ತೀರ್ಮಾನ** | **ಪ್ರತಿ ಶೈಕ್ಷಣಿಕ ಸಾಲಿನಲ್ಲಿ ಸಂಯೋಜನೆಗಾಗಿ ಅರ್ಜಿ ಸಲ್ಲಿಸುವ ಮಹಾವಿದ್ಯಾಲಯಗಳಿಗೆ ಪರಿಶೀಲನೆ ನಡೆಸಲು ರಚಿತವಾದ ಸ್ಥಳೀಯ ವಿಚಾರಣಾ ಸಮಿತಿ/ಸಂಶೋಧನಾ ಕೇಂದ್ರಗಳಿಗೆ ಭೇಟಿ ನೀಡುವ ಅಧ್ಯಕ್ಷರಿಗೆ, ಸದಸ್ಯರಿಗೆ ಮತ್ತು ಲಿಪಿಕ ಸಿಬ್ಬಂದಿಗಳಿಗೆ ಕೆ ಸಿ ಎಸ್ ಆರ್ ನಿಯಮಾವಳಿಗಳನುಸಾರ ದಿನ ಭತ್ಯೆ ಮತ್ತು ಪ್ರಯಾಣ ಭತ್ಯೆ ನೀಡುವುದರ ಜೊತೆಗೆ ಪ್ರತಿ ಮಹಾವಿದ್ಯಾಲಯಕ್ಕೆ ಈ ಕೆಳಕಂಡಂತೆ ಗೌರವಧನವನ್ನು ನಿಗದಿಪಡಿಸಲಾಗಿದೆ. ಸದರಿ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು.** |

| | | ಕ್ರ ಸಂ. | ಸ್ಥಳೀಯ ವಿಚಾರಣಾ ಸಮಿತಿ | ಪ್ರತಿ ಮಹಾವಿದ್ಯಾಲಯದ ಪರಿಶೀಲನೆಗಾಗಿ ನೀಡುವ ಗೌರವಧನ (ರೂ. ಗಳಲ್ಲಿ) |
|---|---|---|---|---|
| | | 1 | ಅಧ್ಯಕ್ಷರು | 700/- |
| | | 2 | ಸದಸ್ಯರು | 500/- |
| | | 3 | ಲಿಪಿಕ ಸಿಬ್ಬಂದಿ | 300/- |
| 2026/02/20 | ಡಾ. ಬಿ. ಆರ್. ಅಂಬೇಡ್ಕರ್ ಹರಿಜನ ಎಜ್ಯುಕೇಶನ್ ಸೊಸೈಟಿಯ ಶ್ರೀ ಸಾಯಿ ಅಂಜನ್ ರೂರಲ್ ಬಿ.ಬಿ. ಎ ಮತ್ತು ಬಿ.ಸಿ. ಎ ಮಹಾವಿದ್ಯಾಲಯ, ಬೆಳಗಾವಿ ಸದರಿ ಮಹಾವಿದ್ಯಾಲಯದ 2026–27ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಅರ್ಜಿ ಕುರಿತು. | | | |
| | ತೀರ್ಮಾನ | **ಡಾ. ಬಿ. ಆರ್. ಅಂಬೇಡ್ಕರ್ ಹರಿಜನ ಎಜ್ಯುಕೇಶನ್ ಸೊಸೈಟಿಯ ಶ್ರೀ ಸಾಯಿ ಅಂಜನ್ ರೂರಲ್ ಬಿ.ಬಿ. ಎ ಮತ್ತು ಬಿ.ಸಿ. ಎ ಮಹಾವಿದ್ಯಾಲಯ, ಬೆಳಗಾವಿ ಮಹಾವಿದ್ಯಾಲಯವು 2024–25ನೇ ಶೈಕ್ಷಣಿಕ ಸಾಲಿನಿಂದ ವಿಶ್ವವಿದ್ಯಾಲಯಕ್ಕೆ ಪಾವತಿಸಬೇಕಾದ ಸಂಯೋಜನಾ ಶುಲ್ಕ ಹಾಗೂ ಠೇವಣಿ ಮೊತ್ತವನ್ನು ಬಾಕಿ ಇಟ್ಟುಕೊಂಡಿರುತ್ತದೆ. ಈ ಕುರಿತು ಹಲವು ಬಾರಿ ಬಾಕಿ ಪಾವತಿ ಮಾಡುವಂತೆ ತಿಳಿಸಿದ್ದರೂ ಕೂಡ, ಸದರಿ ಮಹಾವಿದ್ಯಾಲಯದಿಂದ ಯಾವುದೇ ಪ್ರತ್ಯುತ್ತರ ಲಭ್ಯವಾಗಿರುವುದಿಲ್ಲ.**<br>**ಈ ಹಿನ್ನೆಲೆಯಲ್ಲಿ, ದಿನಾಂಕ: 07-07-2025ರಂದು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿದಾಗ ಸದರಿ ಮಹಾವಿದ್ಯಾಲಯದ ಪ್ರತಿನಿಧಿಗಳು ಖುದ್ದಾಗಿ ಹಾಜರಾಗಿ, ಅವರ ಕೋರಿಕೆಯಂತೆ ಒಟ್ಟು ಐದು (05) ತಿಂಗಳಲ್ಲಿ ಬಾಕಿ ಮೊತ್ತವನ್ನು ಪಾವತಿಸಲು ಅವಕಾಶ ನೀಡಲಾಗಿತ್ತು. ಇದಕ್ಕೆ ಪೂರಕವಾಗಿ, ದಿನಾಂಕ: 28-03-2025ರಂದು ಕಾಲೇಜು ಅಭಿವೃದ್ಧಿ ಪರಿಷತ್ತಿನಿಂದ ಪತ್ರವನ್ನು ನೀಡಲಾಗಿರುತ್ತದೆ. ಆದರೆ, ಇದುವರೆಗೆ ಸದರಿ ಮಹಾವಿದ್ಯಾಲಯದಿಂದ ಯಾವುದೇ ಬಾಕಿ ಮೊತ್ತವೂ ಪಾವತಿಯಾಗಿರುವುದಿಲ್ಲ. ಮುಂದುವರೆದು, ಸದರಿ ಮಹಾವಿದ್ಯಾಲಯವು 2026–27ನೇ ಶೈಕ್ಷಣಿಕ ಸಾಲಿಗೆ UUCMS ಪೋರ್ಟಲ್ ಮುಖಾಂತರ ಅರ್ಜಿಯನ್ನು ಸಲ್ಲಿಸಿ, ಸ್ಥಳೀಯ ಸ್ಥಾನಿಕ ವಿಚಾರಣಾ ಸಮಿತಿಯನ್ನು ಹಮ್ಮಿಕೊಳ್ಳಲು ಕೋರಿರುತ್ತಾರೆ. ಆದ್ದರಿಂದ, ಸದರಿ ಮಹಾವಿದ್ಯಾಲಯದ ದಾಖಲೆಯನ್ನು ಸ್ವೀಕರಿಸಿ ಮುಂದಿನ ಪ್ರಕ್ರಿಯೆಗಳಿಗೆ ಒಳಪಡಿಸಬೇಕೇ ಅಥವಾ ಬೇಡವೇ ಎಂಬುದರ ಕುರಿತು ಸೂಕ್ತ ನಿರ್ದೇಶನವನ್ನು ಕೋರಿ ಸಿಂಡಿಕೇಟ್ ಸಭೆಗೆ ವಿಷಯವನ್ನು ಮಂಡಿಸಲಾಗಿದೆ.**<br>**ಸಭೆಯು ಡಾ. ಬಿ. ಆರ್. ಅಂಬೇಡ್ಕರ್ ಹರಿಜನ ಎಜ್ಯುಕೇಶನ್ ಸೊಸೈಟಿಯ ಶ್ರೀ ಸಾಯಿ ಅಂಜನ್ ರೂರಲ್ ಬಿ.ಬಿ.ಎ ಮತ್ತು ಬಿ.ಸಿ.ಎ ಮಹಾವಿದ್ಯಾಲಯ, ಬೆಳಗಾವಿ ಮಹಾವಿದ್ಯಾಲಯಕ್ಕೆ ಕೊನೆಯ ಅವಕಾಶ ಕಲ್ಪಿಸಿ "ಕಾರಣ ಕೇಳಿ ನೋಟಿಸ್" ಜಾರಿ ಮಾಡಿ ಎರಡು ಕಂತುಗಳಲ್ಲಿ ಬಾಕಿ ಮೊತ್ತವನ್ನು ಪಾವತಿಸಲು ವಿಶ್ವವಿದ್ಯಾಲಯಕ್ಕೆ ಭರಿಸಲು ಸೂಚಿಸಲು ಸಭೆಯು ತೀರ್ಮಾನಿಸಿತು.** | | |
| 2026/02/21 | ಚೌಸನ್ ಶಿಕ್ಷಣ ಮಹಾವಿದ್ಯಾಲಯ, ಚಿಕ್ಕೋಡಿ ಮಹಾವಿದ್ಯಾಲಯ ಮಾಡಿರುವ ಅರೋಪಗಳಿಗೆ ಸ್ಪಷ್ಟನೆ ಹಾಗೂ ಸದರಿ ಮಹಾವಿದ್ಯಾಲಯದ ಕುರಿತು ಮುಂದಿನ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ನಿರ್ದೇಶನವನ್ನು ಕೋರಿ ಪ್ರಸ್ತಾವನೆ ಸಲ್ಲಿಸಲು ಅನುಮತಿಗಾಗಿ ವಿಷಯ ಮಂಡನೆ. | | | |

| | | |
|---|---|---|
| | ತೀರ್ಮಾನ | **ಚೌಸನ್ ಶಿಕ್ಷಣ ಮಹಾವಿದ್ಯಾಲಯ, ಚಿಕ್ಕೋಡಿ ಮಹಾವಿದ್ಯಾಲಯದ ಶಾಶ್ವತ ಸಂಯೋಜನೆಯ ಅವಧಿ 2024–25ನೇ ಶೈಕ್ಷಣಿಕ ಸಾಲಿಗೆ ಮುಕ್ತಾಯಗೊಂಡಿದ್ದು, ಅದರ ಮುಂದುವರಿಕೆಗೆ ನಿಯಮಾನುಸಾರ 2025-26ನೇ ಶೈಕ್ಷಣಿಕ ಸಾಲಿಗೆ UUCMS ಪೋರ್ಟಲ್ ಮೂಲಕ ಮಹಾವಿದ್ಯಾಲಯವು ನಿಗದಿತ ದಿನಾಂಕದೊಳಗೆ ಅರ್ಜಿ ಸಲ್ಲಿಸಿರುತ್ತದೆ.**<br>**ಸದರಿ ಮಹಾವಿದ್ಯಾಲಯದ ಶಾಶ್ವತ ಸಂಯೋಜನಾ ನವೀಕರಣದ ಪ್ರಸ್ತಾವನೆಯನ್ನು ಸ್ಥಳೀಯ ಪರಿಶೀಲನಾ ಸಮಿತಿಯ ಶಿಫಾರಸ್ಸಿನ ನಂತರ, ನಿಯಮಾನುಸಾರ ಸಿಂಡಿಕೇಟ್, ವಿದ್ಯಾವಿಷಯಕ ಪರಿಷತ್ತು ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಪಡೆದು, ಅಂತಿಮ ಅನುಮೋದನೆಗಾಗಿ ಸರ್ಕಾರಕ್ಕೆ ಅಗತ್ಯ ದಾಖಲೆಗಳೊಂದಿಗೆ ದಿನಾಂಕ: 03-03-2025ರಂದು ಕಳುಹಿಸಲಾಗಿತ್ತು.**<br>**ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ, ಸರ್ಕಾರವು ತನ್ನ ಅಂತಿಮ ಆದೇಶದಲ್ಲಿ (ಆದೇಶ ಸಂಖ್ಯೆ: ED 253 UAC 2025 ದಿನಾಂಕ: 27-10-2025) ಕಟ್ಟಡ, ಅಗ್ನಿ ಸುರಕ್ಷತಾ ಪ್ರಮಾಣ ಪತ್ರ ಹಾಗೂ NAAC ಮಾನ್ಯತೆಯ ಅವಧಿ ಮುಕ್ತಾಯಗೊಂಡಿರುವುದನ್ನು ಕಾರಣವಾಗಿ ಉಲ್ಲೇಖಿಸಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಅಧಿನಿಯಮ, 2000ರ ಪ್ರಕರಣ 62(3) ರಲ್ಲಿ ನೀಡಿರುವ ಪ್ರದತ್ತಾಧಿಕಾರವನ್ನು ಚಲಾಯಿಸಿ ಸದರಿ ಪ್ರಸ್ತಾವನೆಯನ್ನು ತಿರಸ್ಕರಿಸಿತ್ತು. ಮುಂದುವರೆದು, ಬಿ.ಇಡಿ. ವ್ಯಾಸಂಗ ಕ್ರಮಕ್ಕೆ 2025–26ನೇ ಶೈಕ್ಷಣಿಕ ಸಾಲಿಗೆ ತಾತ್ಕಾಲಿಕ ಸಂಯೋಜನೆ ನೀಡಲು ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಿತ್ತು. ಇದರನ್ವಯ, ವಿಶ್ವವಿದ್ಯಾಲಯವು ದಿನಾಂಕ: 2025–26ನೇ ಶೈಕ್ಷಣಿಕ ಸಾಲಿಗೆ ಬಿ.ಇಡಿ. ವ್ಯಾಸಂಗ ಕ್ರಮಕ್ಕೆ ತಾತ್ಕಾಲಿಕ ಸಂಯೋಜನೆಯ ಮುಂದುವರಿಕೆಗಾಗಿ ದಿನಾಂಕ: 12-11-2025 ರಂದು ಪ್ರವೇಶಮಿತಿ 100ರನ್ನು ನಿಗದಿಪಡಿಸಿ ಅಧಿಸೂಚನೆಯನ್ನು ಹೊರಡಿಸಿದೆ. ನಂತರ ಮತ್ತೊಮ್ಮೆ, ಮಹಾವಿದ್ಯಾಲಯದ ಕೋರಿಕೆ ಮೇರೆಗೆ ಶಾಶ್ವತ ಸಂಯೋಜನೆಯ ನವೀಕರಣದ ಪ್ರಸ್ತಾವನೆಯನ್ನು ಮರು ಪರಿಶೀಲನೆಗಾಗಿ ದಿನಾಂಕ: 28-11-2025ರಂದು ಸರ್ಕಾರಕ್ಕೆ ಕಳುಹಿಸಲಾಗಿತ್ತು. ಈ ಮಧ್ಯೆ, ಸದರಿ ಮಹಾವಿದ್ಯಾಲಯವು ಶಾಶ್ವತ ಸಂಯೋಜನಾ ನವೀಕರಣ ಆಗದೇ ಇರುವುದಕ್ಕೆ ಸಾಕಷ್ಟು ಆರೋಪಗಳನ್ನು ಮಾಡಿದ್ದು, ಅದಕ್ಕೆ ಸಂಬಂಧಿಸಿದಂತೆ ಸ್ಪಷ್ಟೀಕರಣವನ್ನು ವಿಶ್ವವಿದ್ಯಾಲಯವು ನೀಡಿಲಾಗಿದೆ. ಮುಂದುವರೆದು, ಸದರಿ ಸಂಸ್ಥೆಯು ಸಾಮಾನ್ಯ ವರ್ಗಕ್ಕೆ ಸೇರಿದ್ದರೂ ಕೂಡ ಪರಿಶಿಷ್ಟ ಜಾತಿಗೆ ಸೇರಿದ ಎಂದು ಹಾಗೂ ಜಾತಿಯ ಹೆಸರು ಬಳಸಿ ವಿಶ್ವವಿದ್ಯಾಲಯದ ವಿರುದ್ದ ನಿರಂತರವಾಗಿ ಗುರುತರ ಆರೋಪ ಮಾಡಲಾಗುತ್ತಿದೆ ಹಾಗೂ ಇದೇ ದಿಶೆಯಲ್ಲಿ ವಿಶ್ವವಿದ್ಯಾಲಯದ ಮೇಲೆ ಸಾಕಷ್ಟು ಬಾರಿ ನ್ಯಾಯಾಲಯ ಮೊರೆ ಹೋದ ಉದಾಹರಣೆಗಳಿವೆ.**<br><br>**ಮುಂದುವರೆದು, ಸದರಿ ಮಹಾವಿದ್ಯಾಲಯಕ್ಕೆ 2026-27ನೇ ಶೈಕ್ಷಣಿಕ ಸಾಲಿಗೆ ಅರ್ಜಿ ಸಲ್ಲಿಸಲು ಸೂಚಿಸಿದ್ದರೂ ಕೂಡ ಸದರಿ ಮಹಾವಿದ್ಯಾಲಯ ಅರ್ಜಿ ಸಲ್ಲಿಸಲು ನಿರಾಕರಿಸಿ ಇಮೇಲ್ ಮೂಲಕ ತಿಳಿಸಿರುತ್ತಾರೆ. ಒಂದು ವೇಳೆ ಮಹಾವಿದ್ಯಾಲಯವು 2026-27ನೇ ಶೈಕ್ಷಣಿಕ ಸಾಲಿನಲ್ಲಿ ಅರ್ಜಿ ಸಲ್ಲಿಸದೇ ಇದ್ದಲ್ಲಿ ಸದರಿ ಶೈಕ್ಷಣಿಕ ಸಾಲಿಗೆ ಪ್ರವೇಶಾತಿಯನ್ನು ಹೊಂದಲು UUCMS Portal ನಲ್ಲಿ ಅವಕಾಶವಿರುವುದಿಲ್ಲ.** |

| | | |
|---|---|---|
| | | ಈ ಹಿನ್ನಲೆಯಲ್ಲಿ ಸದರಿ ಮಹಾವಿದ್ಯಾಲಯದ ಕುರಿತು ಮುಂದಿನ ಕ್ರಮ ಕೈಗೊಳ್ಳಲು ಸೂಕ್ತ ನಿರ್ದೇಶನ ಕೋರಿ ಸಿಂಡಿಕೇಟ್ ಸಭೆಯ ಮಾರ್ಗದರ್ಶನ ಕೋರಲಾಯಿತು.<br>ಸಭೆಯು, ಚೌಸನ್ ಶಿಕ್ಷಣ ಮಹಾವಿದ್ಯಾಲಯ, ಚಿಕ್ಕೋಡಿ ಇವರಿಗೆ ಶಾಶ್ವತ ಸಂಯೋಜನೆ ಕುರಿತಾಗಿ ಮಾರ್ಗದರ್ಶನ ಕೋರಿ ಸರ್ಕಾರಕ್ಕೆ ಪತ್ರ ಬರೆಯಲು ತೀರ್ಮಾನಿಸಿತು. |
| **ಅಧ್ಯಕ್ಷರ ಅಪ್ಪಣೆ ಮೇರೆಗೆ ಇನ್ನಿತರ ವಿಷಯಗಳು** | | |
| I | 2026/02/I | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ Central Science Advanced Research Centre-CSARCನ Web Portalನ ಪ್ರದರ್ಶನ(Demo) ಮತ್ತು ಅನಾವರಣಗೊಳಿಸುವ ಕುರಿತು |
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ ಪಿ.ಎಂ.ಉಷಾ(ಮೇರು) ಯೋಜನೆಯ ಅನುದಾನದಲ್ಲಿ Advanced Research Equipment ಖರೀಸಲಾಗುತ್ತಿದ್ದು, ಸದರಿ ಕಾರ್ಯವು ಪ್ರಗತಿಯಲ್ಲಿದ್ದು, ಸದರಿ ಉಪಕರಣಗಳನ್ನು ವಿಶ್ವವಿದ್ಯಾಲಯಗಳು/ ಮಹಾವಿದ್ಯಾಲಯಗಳೂ/ ಕೈಗಾರಿಕೆಗಳು/ಸಂಘ ಸಂಸ್ಥೆಗಳು /ಸಂಶೋಧನಾ ಕೇಂದ್ರಗಳು/ಅಧ್ಯಾಪಕರುಗಳು/ಸಂಶೋಧನಾರ್ಥಿಗಳು ಹಾಗೂ ವಿದ್ಯಾರ್ಥಿಗಳು ಉಪಕರಣಗಳ ಸೇವೆಯನ್ನು ಪಡೆಯಲು ವಿಶ್ವವಿದ್ಯಾಲಯದಿಂದ ಅಭಿವೃದ್ಧಿಪಡಿಸಿರುವ ವೆಬ್‌ಪೋರ್ಟ್‌ಲ ಮೂಲಕ ಪಡೆಯಬಹುದಾಗಿದೆ. ಅದರ ಪ್ರದರ್ಶನ(Demo) ಮತ್ತು ಸಭೆಯಲ್ಲಿ ಅನಾವರಣಗೊಲಿಸಲಾಯಿತು. ಸದರಿ Central Science Advanced Research Centre-CSARC ನ Web Portal ನ ಕಾರ್ಯಕ್ಕೆ ಶ್ಲಾಘನೆ ವ್ಯಕ್ತಪಡಿಸಿ, ಸಭೆಯು ಅನುಮೋದನೆ ನೀಡಿತು.** |
| II | 2026/02/II | 2025-26ನೇ ಶೈಕ್ಷಣಿಕ ಸಾಲಿನಲ್ಲಿ ಶೇ. 50 ಕ್ಕಿಂತ ಕಡಿಮೆ ಮೌಲ್ಯಾಂಕ ಪಡೆದ ಮಹಾವಿದ್ಯಾಲಯಗಳ ಶೈಕ್ಷಣಿಕ ಹಾಗೂ ಮೂಲಭೂತ ಸೌಕರ್ಯಗಳ ವಾಸ್ತವ ಸ್ಥಿತಿ ವರದಿ ಪಡೆದುಕೊಳ್ಳಲು ಒಟ್ಟು 07 ವಿಶೇಷ ಸಮಿತಿಗಳನ್ನು ರಚನೆ ಮತ್ತು ವರದಿ ಕುರಿತು |
| | **ತೀರ್ಮಾನ** | **ಮುಂದೂಡಲಾಯಿತು.** |
| III | 2026/02/III | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಆವರಣದಲ್ಲಿರುವ ರಸ್ತೆಗಳಿಗೆ ಮತ್ತು ಸಭಾಂಗಣಳಿಗೆ ಕನ್ನಡದ ಖ್ಯಾತ ಸಾಹಿತಿಗಳು, ನದಿಗಳು ಕಲಾ ಪ್ರಕಾರಗಳ, ಸ್ವಾತಂತ್ರ್ಯ ಹೋರಾಟಗಾರರ ಹೆಸರು ಸೂಚಿಸುವ ಕುರಿತು |
| | **ತೀರ್ಮಾನ** | **ಮುಂದೂಡಲಾಯಿತು.** |
| IV | 2026/02/IV | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹಿರೇಬಾಗೇವಾಡಿಯ ಆವರಣದ ಪ್ರವೇಶದ್ವಾರ (ಬೆಂಡಿಗೇರಿ ಮಾರ್ಗ ಮತ್ತು ಎ.ಪಿ.ಎಂ.ಸಿ ಮಾರ್ಗ) ಕ್ಕೆ ಕಮಾನು ನಿರ್ಮಿಸುವ ಕುರಿತು. |
| | **ತೀರ್ಮಾನ** | **ಮುಂದೂಡಲಾಯಿತು.** |
| V | 2026/02/V | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹಿರೇಬಾಗೇವಾಡಿಯ ಆವರಣದಲ್ಲಿನ ಮುಖ್ಯ ಪ್ರವೇಶದ್ವಾತಕ್ಕೆ ಸಾಮಾನ್ಯ ರೀತಿಯಲ್ಲಿ ಕಮಾನು(Arch) ನಿರ್ಮಿಸುವ ಕುರಿತು |
| | **ತೀರ್ಮಾನ** | **ಮುಂದೂಡಲಾಯಿತು.** |

| | | |
|---|---|---|
| VI | 2026/02/VI | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹಿರೇಬಾಗೇವಾಡಿಯ ಆವರಣದಲ್ಲಿನ ಸ್ನಾತಕೋತ್ತರ ವಿಭಾಗಗಳಿಗೆ ಮತ್ತು ವಸತಿ ನಿಲಯಗಳೀಗೆ ಅವಶ್ಯವಿರುವ ಪೀಠೋಪಕರಣಗಳ ಖರೀದಿ ಕುರಿತು. |
| | **ತೀರ್ಮಾನ** | **ಮುಂದೂಡಲಾಯಿತು.** |
| VII | 2026/02/VII | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹಿರೇಬಾಗೇವಾಢಿಯ ಆವರಣಕ್ಕೆ ಸಂಬಂಧಪಟ್ಟ ವಿದ್ಯುತ್ತೀಕರಣ ಕುರಿತು. |
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹಿರೇಬಾಗೇವಾಡಿಯ ಆವರಣದಲ್ಲಿನ ಕಟ್ಟಡಗಳಿಗೆ ಅವಶ್ಯವಿರುವ ವಿದ್ಯುತ್ ಸಂಪರ್ಕ ಕಲ್ಪಿಸಲು ಅಂದಾಜು ಪತ್ರಿಕೆ ತಯಾರಿಸಿ ಕೆ.ಟಿ.ಪಿ.ಪಿ. ನಿಯಮಾನುಸಾರ ಅಗತ್ಯವಿರುವ ಎಲ್ಲ ಕ್ರಮ ಕೈಗೊಳ್ಳಲು ಸಭೆಯು ಅನುಮೋದನೆ ನೀಡಿತು ಹಾಗು ಕಾಮಗಾರಿಯು ಕೈಗೊಂಡ ನಂತರದ ಅವಧಿಯಲ್ಲಿ ವಿವರವಾದ ಮಾಹಿತಿಯನ್ನು ಸಿಂಡಿಕೇಟ್‌ಗೆ ಮಂಡಿಸಲು ಸಭೆಯು ತೀರ್ಮಾನಿಸಿತು.** |
| VIII | 2026/02/VIII | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹಿರೇಬಾಗೇವಾಡಿಯ ಆವರಣಕ್ಕೆ ಸಂಬಂಧಪಟ್ಟ ವಿದ್ಯುತ್ Load Sanction ಕುರಿತು |
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹೀರೇಬಾಗೇವಾಡಿಯ ಆವರಣದಲ್ಲಿ ಪ್ರಸ್ತುತ ತಾತ್ಕಾಲಿಕ ವಿದ್ಯುತ್ ಸಂಪರ್ಕವಿದ್ದು, ಈಗಾಗಲೇ ಕಟ್ಟಡ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿರುವುದರಿಂದ ಶೈಕ್ಷಣಿಕ ಮತ್ತು ಆಡಳಿತ ಕಛೇರಿಗಳನ್ನು ಪೂರ್ಣ ಪ್ರಮಾಣದಲ್ಲಿ ಸ್ಥಳಾಂತರಗೊಳ್ಳಲಿರುವುದರಿಂದ ಅವಶ್ಯವಿರುವ ಖಾಯಂ ವಿದ್ಯುತ್ ಸಂಪರ್ಕ ಪಡೆಯಲು Load Sanction ಗೆ ಸುಮಾರು 750KVA ಎಂದು ಅಂದಾಜಿಸಿದ್ದು ಅದರಂತೆ ಸರಿಯಾದ Load ಲೆಕ್ಕಾಚಾರ ಮಾಡಿ ಅಗತ್ಯವಿರುವ Load ಗೆ ಹೆಸ್ಕಾಂ ಇವರು ಸೂಚಿಸುವ ಮೊತ್ತ ಭರಿಸಲು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು.** |
| IX | 2026/02/IX | ಡಾ. ಹನುಮಂತಪ್ಪ ಸಂಜೀವಣ್ಣವರ ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗದ ಪಿಹೆಚ್.ಡಿ ಮಾರ್ಗದರ್ಶಕರ ಕರ್ತವ್ಯಕ್ಕೆ ಮರಳಿ ಹಾಜರಾಗುವ ಕುರಿತು. |
| | **ತೀರ್ಮಾನ** | **ದಿನಾಂಕ: 14-06-2024 ರಂದು ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯಲ್ಲಿ ಡಾ.ಹನುಮಂತಪ್ಪ ಸಂಜೀವಣ್ಣವರ, ಸಹಾಯಕ ಪ್ರಾಧ್ಯಾಪಕರು, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ ಇವರನ್ನು 5 ವರ್ಷದ ಅವಧಿಗೆ ಪಿಹೆಚ್.ಡಿ ಮಾರ್ಗದರ್ಶಕ ಕಾರ್ಯದಿಂದ ಹೊರಗಿಡಲು ತೀರ್ಮಾನಿಸಲಾಗಿತ್ತು. ದಿನಾಂಕ: 12.08.2025 ರ ಸಿಂಡಿಕೇಟ್ ನಿರ್ಣಯದಂತೆ 1 ವರ್ಷದ ಅವಧಿಗೆ ವಿಷಯವನ್ನು ಮುಂದೂಡಲು ನಿರ್ಣಯಿಸಲಾಗಿತ್ತು. ಸದರಿ ಅಧ್ಯಾಪಕರು ಮಾರ್ಗದರ್ಶಕರ ಕರ್ತವ್ಯಕ್ಕೆ ಮರಳಿ ಹಾಜರಾಗುವಂತೆ ಅವಕಾಶ ಕಲ್ಪಿಸಲು ಮನವಿ ಸಲ್ಲಿಸಿದ್ದು, ಸದರಿ ವಿಷಯಕ್ಕೆ ಸಭೆಯ ಮಾರ್ಗದರ್ಶನ ಕೋರಲಾಯಿತು.**<br>**ಚರ್ಚಿಸಿದ ಸಭೆಯು, ಮಾರ್ಗದರ್ಶನಕ್ಕೆ ಪ್ರೋತ್ಸಾಹ ಮತ್ತು ಸಂಶೋಧನಾ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಡಾ. ಹನುಮಂತಪ್ಪ ಸಂಜೀವಣ್ಣವರ, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ ಇನ್ನೊಂದು ಅವಕಾಶ ಕಲ್ಪಿಸಿ ಮಾರ್ಗದರ್ಶಕರ ಕರ್ತವ್ಯಕ್ಕೆ ಮುಂದುವರೆಯಲು ಸಭೆಯು ತೀರ್ಮಾನಿಸಿತು.** |

| | | |
|---|---|---|
| | | **ಮುಂದುವರೆದು, ಭವಿಷ್ಯದಲ್ಲಿ ಮಾರ್ಗದರ್ಶನದ ಕುರಿತು ಸಂಶೋಧನಾ ವಿದ್ಯಾರ್ಥಿಗಳಿಂದ ಆರೋಪಗಳು/ದೂರುಗಳು ದಾಖಲಾಗದಂತೆ ಮುತುವರ್ಜಿ ವಹಿಸಲು ಮುಚ್ಚಳಿಕೆ ಪತ್ರ ಬರೆದುಕೊಡುವ ಷರತ್ತನ್ನು ವಿಧಿಸಿತು.** |
| X | 2026/02/X | ವಿಶ್ವವಿದ್ಯಾಲಯದ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ, ಪರೀಕ್ಷಾ ಸಮಯದಲ್ಲಿ ಪ್ರಾಚಾರ್ಯರಿಗೆ ಸ್ಥಳೀಯ ಭತ್ಯೆ ನೀಡುವ ಬಗ್ಗೆ ನಿರ್ದೇಶನ ಕುರಿತು |
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ಕಾಲೇಜುಗಳ ಶಿಕ್ಷಕರ ಸಂಘದವರು ಸರ್ಕಾರದ ಏಕರೂಪದ ಶುಲ್ಕಗಳ ಸಮಿತಿಯ ಶಿಫಾರಸ್ಸು ಮಾಡಿದಂತೆ ಪ್ರಾಚಾರ್ಯರಿಗೆ ಸ್ಥಳೀಯ ಭತ್ಯೆಯನ್ನು ನೀಡುವಂತೆ ಕೋರಿರುತ್ತಾರೆ. ಒಂದು ವೇಳೆ ಸ್ಥಳೀಯ ಭತ್ಯೆಯನ್ನು ಪ್ರಾಚಾರ್ಯರುಗಳನ್ನು ಬೇರೆ ಪರೀಕ್ಷಾ ಕೇಂದ್ರಗಳಿಗೆ ನಿಯೋಜಿಸುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ. ಆದ್ದರಿಂದ, ಸಂಯೋಜಿತ ಮಹಾವಿದ್ಯಾಲಯಗಳ ಶಿಕ್ಷಕರ ಸಂಘದವರು ಸಲ್ಲಿಸಿರುವ ಮನವಿಗೆ ತೆಗೆದುಕೊಳ್ಳಬೇಕಾದ ಕ್ರಮದ ಕುರಿತಾಗಿ ಕುಲಸಚಿವರು(ಮೌಲ್ಯಮಾಪನ) ಸಭೆಯ ಮಾರ್ಗದರ್ಶನ ಕೋರಿದರು ಮತ್ತು ವಿವಿಧ ವಿಶ್ವವಿಶ್ವವಿದ್ಯಾಲಯಗಳು UGC ಮತ್ತು Non-UGC ಪ್ರಾಚಾರ್ಯರಿಗೆ ಸ್ಥಳೀಯ ಭತ್ಯೆ ನೀಡುತ್ತಿರುವ ಕುರಿತು ಸಭೆಯ ಗಮನಕ್ಕೆ ತಂದರು. ಈ ಹಿನ್ನೆಲೆಯಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿಯು Non-UGC ಪ್ರಾಚಾರ್ಯರಿಗೆ ನೀಡುವ ಸ್ಥಳೀಯ ಭತ್ಯೆಯನ್ನು UGC ಪ್ರಾಚಾರ್ಯರಿಗೆ ನೀಡುವಂತೆ ಸಭೆಯು ಸೂಚಿಸಿತು.** |
| XI | 2026/02/XI | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕೋತ್ತರ/ಸಂಶೋಧನಾ ವಿದ್ಯಾರ್ಥಿಗಳಿಗೆ ವಸತಿನಿಲಯದಲ್ಲಿ ಕೊಠಡಿ ಕಲ್ಪಿಸುವಂತೆ ಕೋರಿರುವ ಕುರಿತು. |
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡುತ್ತಿರುವ ಅರ್ಥಶಾಸ್ತ್ರ ವಿಭಾಗದ ಸತೀಶ ನಿಂಗಪ್ಪಾ ಸಾಗರ, ಸಂಶೋಧನಾ ವಿದ್ಯಾರ್ಥಿ(ಶುಲ್ಕ ಸಹಿತ) ಮತ್ತು ಗಣಿತಶಾಸ್ತ್ರ ವಿಭಾಗದ ಸುನಂದಾ ಬಿಸಾರವರಿ, ಸ್ನಾತಕೋತ್ತರ ವಿದ್ಯಾರ್ಥಿನಿ (ಶುಲ್ಕ ರಹಿತ) ಇವರುಗಳು ವಸತಿನಿಲಯಗಳಲ್ಲಿ ಅವಕಾಶ ಕಲ್ಪಸಿಕೊಡಬೇಕೆಂದು ವಿನಂತಿಸಿರುವ ಮನವಿಯನ್ನು ಸಭೆಗೆ ಪ್ರಸ್ತುತಪಡಿಸಲಾಯಿತು.**<br>**ಇವೆರಡು ವಿಶೇಷ ಪ್ರಕರಣಗಳೆಂದು ಪರಿಗಣಿಸಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಠಿಯಿಂದ ಸಭೆಯು ಅನುಮೋದನೆ ನೀಡಿತು.**<br>**ಮುಂದುವರೆದು, ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಉತ್ತೇಜನ ನೀಡುವ ದೃಷ್ಠಿಯಿಂದ ವಸತಿನಿಲಯದಲ್ಲಿ ಶೇ. 5 ರಷ್ಟು ಮೆರಿಟ್ ವಿದ್ಯಾರ್ಥಿಗಳಿಗೆ ಕೊಠಡಿ ಕಲ್ಪಿಸಲು ಸಭೆಯು ನಿರ್ಧರಿಸಿತು.** |
| XII | 2026/02/XII | ವಿಶ್ವವಿದ್ಯಾಲಯದ 2024-25 ನೇ ಸಾಲಿನ ವಾರ್ಷಿಕ ವರದಿಯನ್ನು ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಗೆ ಮಂಡಿಸುವ ಕುರಿತು. |
| | **ತೀರ್ಮಾನ** | **ಮುಂದೂಡಲಾಯಿತು.** |
| XIII | 2026/02/XIII | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ಯೋಜನೆ/ಅನುದಾನದಲ್ಲಿ ಕೈಗೊಳ್ಳುವ ಅಭಿವೃದ್ಧಿ ಕಾಮಗಾರಿಗಳ 3ನೇ ವ್ಯಕ್ತಿ ತಪಾಸನಾ ಕಾರ್ಯವನ್ನು ಕೈಗೊಳ್ಳುವ ಕುರಿತು. |
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ಯೋಜನೆ/ಅನುದಾನದಲ್ಲಿ ಕೈಗೊಳ್ಳುವ ಅಭಿವೃದ್ಧಿ ಕಾಮಗಾರಿಗಳ 3ನೇ ವ್ಯಕ್ತಿ ತಪಾಸಣಾ ಕಾರ್ಯವನ್ನು ಕೈಗೊಳ್ಳಲು ಈಗಾಗಲೇ** |

| | | |
|---|---|---|
| | | **ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯದಿಂದ ಹೊರಡಿಸಿದ ಆದೇಶದ ಕೋಷ್ಟಕದಲ್ಲಿ ನಿಗದಿಪಡಿಸಿದ ದರವನ್ನು ಸಮಾಲೋಚನೆ(Negotiable) ಮಾಡಿ ಇಂಜೀನಿಯರಿಂಗ್ ಹಾಗೂ ಪಾಲಿಟೆಕ್ನಿಕ್ ಮಹಾವಿದ್ಯಾಲಯಗಳಿಗೆ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲು ಸಭೆಯು ಅನುಮೋದನೆ ನೀಡಿತು.** |
| XIV | 2026/02/ XIV | ಅಂಕಪಟ್ಟಿಗಳು ಹಾಗೂ ಪದವಿ ಪ್ರಮಾಣ ಪತ್ರಗಳಿಗೆ ಸಂಬಂಧಿಸಿದ ದೂರಿನ ಬಗ್ಗೆ ಚರ್ಚೆ ಕುರಿತು. |
| | **ತೀರ್ಮಾನ** | **ಸದಸ್ಯರಾದ ಡಾ. ಕಾವೇರಿ.ಎಚ್.ಎಂ. ಇವರು ಲಿಖಿತವಾಗಿ ಮನವಿ ಸಲ್ಲಿಸಿದ ಹಿನ್ನಲೆಯಲ್ಲಿ ಈ ವಿಷಯವನ್ನು ಇಂದಿನ ಸಭೆಗೆ ಮಂಡಿಸಲಾಗಿದೆ. ಸಮಯದ ಅಭಾವ ಹಾಗೂ ವಿಷಯದ ಕುರಿತಾಗಿ ಇನ್ನು ಅಧ್ಯಯನ ನಡೆಸಲು ಕಾಲಾವಕಾಶ ಬೇಕು ಎಂದು ಡಾ. ಕಾವೇರಿ.ಎಚ್. ಎಂ ಮತ್ತು ಇತರೇ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಈ ವಿಷಯವನ್ನು ಸಭೆಯು ಮುಂದೂಡಿತು.** |
| XV | 2026/02/ XV | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳನ್ನು ವರ್ಗಾವಣೆ ಮಾಡಿರುವ ಕುರಿತು. |
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳ ಆಡಳಿತಾತ್ಮಕ ಹಿತದೃಷ್ಠಿಯಿಂದ ಬೋಧಕ ಸಿಬ್ಬಂದಿಗಳನ್ನು ಈ ಕೆಳಕಾಣಿಸಿದಂತೆ ವರ್ಗಾವಣೆ ಮಾಡಿ ದಿನಾಂಕ: 02.02.2026 ರಂದು ಆದೇಶಿಸಲಾಗಿದೆ. ಸದರಿ ವಿಷಯಕ್ಕೆ ಸಭೆಯ ಅನುಸಮರ್ಥನೆ ಕೋರಲಾಯಿತು.** |

| ಕ್ರ. ಸಂ. | ಹೆಸರು ಮತ್ತು ಹುದ್ದೆ | ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸ್ಥಳ | ವರ್ಗಾವಣೆ ಮಾಡಿರುವ ಸ್ಥಳ |
|---|---|---|---|
| 1 | ಪ್ರೊ. ಎಸ್. ಎಂ. ಗಂಗಾಧರಯ್ಯ<br>ಪ್ರಾಧ್ಯಾಪಕರು,<br>ಸ್ನಾತಕೋತ್ತರ ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ವಿಭಾಗ,<br>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ,<br>ಸ್ನಾತಕೋತ್ತರ ಕೇಂದ್ರ,, ವಿಜಯಪುರ | ಕನ್ನಡ ವಿಭಾಗ,<br>ರಾಣಿ ಚನ್ನಮ್ಮ ವಿಶ್ವವಿದ್ಯಾಲಯ,<br>ಸ್ನಾತಕೋತ್ತರ ಕೇಂದ್ರ, ವಿಜಯಪುರ | ಕನ್ನಡ ವಿಭಾಗ,<br>ಸ್ನಾತಕೋತ್ತರ ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ವಿಭಾಗ,<br>ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಮುಖ್ಯ ಆವರಣ, ಬೆಳಗಾವಿ |
| 2 | ಡಾ. ನಾಗರಾಜ ಪಿ.<br>ಸಹಾಯಕ ಪ್ರಾಧ್ಯಾಪಕರು,<br>ಸ್ನಾತಕೋತ್ತರ ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ವಿಭಾಗ,<br>ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ. | ಕನ್ನಡ ವಿಭಾಗ,<br>ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಮುಖ್ಯ ಆವರಣ, ಬೆಳಗಾವಿ | ಕನ್ನಡ ವಿಭಾಗ,<br>ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ |
| 3 | ಡಾ. ಮಧುಶ್ರೀ ಕಳ್ಳಿಮನಿ<br>ಸಹ ಪ್ರಾಧ್ಯಾಪಕರು,<br>ಸ್ನಾತಕೋತ್ತರ ಇಂಗ್ಲೀಷ್ ಅಧ್ಯಯನ ವಿಭಾಗ,<br>ರಾಣಿ ಚನ್ನಮ್ಮ ವಿಶ್ವವಿದ್ಯಾಲಯ,<br>ಬೆಳಗಾವಿ. | ಇಂಗ್ಲೀಷ್ ವಿಭಾಗ,<br>ರಾಣಿ ಚನ್ನಮ್ಮ ವಿಶ್ವವಿದ್ಯಾಲಯ,<br>ಮುಖ್ಯ ಆವರಣ,ಬೆಳಗಾವಿ | ಇಂಗ್ಲೀಷ್ ವಿಭಾಗ,<br>ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ ಜೊತೆಗೆ ಹೆಚ್ಚುವರಿಯಾಗಿ ನಿಲಯಪಾಲಕರು, |

| | | | | | |
|---|---|---|---|---|---|
| | | | | | ವಿದ್ಯಾರ್ಥಿನಿಯರ ವಸತಿನಿಲಯ,<br>ಶಿವಬಸವ ನಗರ, ಬೆಳಗಾವಿ.<br>ಕಾರ್ಯನಿರ್ವಹಿಸುವುದು |
| | | 4 | ಡಾ. ಫಯಾಜ ಇಳಕಲ್<br>ಸಹಾಯಕ ಪ್ರಾಧ್ಯಾಪಕರು,<br>ಸ್ನಾತಕೋತ್ತರ ಇಂಗ್ಲೀಷ್ ಅಧ್ಯಯನ ವಿಭಾಗ,<br>ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ. | ಇಂಗ್ಲೀಷ್ ವಿಭಾಗ,<br>ಸಂಗೊಳ್ಳಿ ರಾಯಣ್ಣ<br>ಪ್ರಥಮ ದರ್ಜೆ ಘಟಕ<br>ಮಹಾವಿದ್ಯಾಲಯ,<br>ಬೆಳಗಾವಿ | ಇಂಗ್ಲೀಷ್ ವಿಭಾಗ,<br>ರಾಣಿ ಚನ್ನಮ್ಮ ವಿಶ್ವವಿದ್ಯಾಲಯ,<br>ಮುಖ್ಯ ಆವರಣ, ಬೆಳಗಾವಿ. |
| | | 5 | ಡಾ. ದೇವತಾ ಗಸ್ತಿ<br>ಸಹಾಯಕ ಪ್ರಾಧ್ಯಾಪಕರು,<br>ಸ್ನಾತಕೋತ್ತರ ಸಮಾಜಕಾರ್ಯ ಅಧ್ಯಯನ<br>ವಿಭಾಗ,<br>ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ. | ಸ್ನಾತಕೋತ್ತರ<br>ಸಮಾಜಕಾರ್ಯ<br>ಅಧ್ಯಯನ ವಿಭಾಗ,<br>ರಾಣಿ ಚನ್ನಮ್ಮ<br>ವಿಶ್ವವಿದ್ಯಾಲಯ,<br>ಬೆಳಗಾವಿ. | ಪ್ರಸ್ತುತ ವಿಭಾಗದ ಬೋಧನಾ<br>ಕಾರ್ಯ ಚಟುವಟಿಕೆ ಜೊತೆಗೆ<br>ಹೆಚ್ಚುವರಿಯಾಗಿ<br>ಸಂಯೋಜಕರು, ಯುವ<br>ರೆಡಕ್ರಾಸ್<br>ರಾಣಿ ಚನ್ನಮ್ಮ ವಿಶ್ವವಿದ್ಯಾಲಯ,<br>ಬೆಳಗಾವಿ.<br>ಕಾರ್ಯನಿರ್ವಹಿಸುವುದು |

ಡಾ. ಕಾವೇರಿ.ಎಚ್.ಎಂ.:

ವಿಶ್ವವಿದ್ಯಾಲಯದ ಸ್ನಾತಕೋತ್ತರ ಇಂಗ್ಲೀಷ ವಿಭಾಗದ ಸಹ ಪ್ರಾಧ್ಯಾಪಕರನ್ನು ಘಟಕ ಮಹಾವಿದ್ಯಾಲಯಕ್ಕೆ ವರ್ಗಾಯಿಸಿ, ಮಹಾವಿದ್ಯಾಲಯದಿಂದ ಸಹಾಯಕ ಪ್ರಾಧ್ಯಾಪಕರನ್ನು ಮುಖ್ಯ ಆವರಣಕ್ಕೆ ವರ್ಗಾಯಿಸಲಾಗಿದೆ. ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳ ವಿದ್ಯಾರ್ಥಿಗಳಿಗೆ ಸಹ ಪ್ರಾಧ್ಯಾಪಕರ ಬೋಧನೆಯ ಜ್ಞಾನವು ಹೆಚ್ಚಿನ ಅವಶ್ಯಕತೆ ಇರುತ್ತದೆ. ಘಟಕ ಮಹಾವಿದ್ಯಾಲಯದ ಸ್ನಾತಕ ವಿಭಾಗಗಳ ವಿದ್ಯಾರ್ಥಿಗಳಿಗೆ ಸಹಾಯಕ ಪ್ರಾಧ್ಯಾಪಕರ ಬೋಧನೆ ಅವಶ್ಯವಿರುತ್ತದೆ. ಕಾರಣ, ಇಂಗ್ಲೀಷ ವಿಭಾಗಕ್ಕೆ ಸಂಬಂಧಿಸಿದ ಬೋಧಕ ಸಿಬ್ಬಂದಿಗಳ ವರ್ಗಾವಣೆಯನ್ನು ರದ್ದುಪಡಿಸಿ ಯತ್ತಾವಥಾಗಿ ಮುಂದುವರೆಸಲು ಸಲಹೆ ನೀಡಿದರು. ಮುಂದುವರೆದು, ಮುಖ್ಯ ಆವರಣದ ಇಂಗ್ಲೀಷ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ. ನಾಗರತ್ನಾ ಪರಾಂಡೆ, ಡಾ. ಕವಿತಾ ಕುಸುಗಲ್ ಮತ್ತು ಡಾ. ಮಧುಶ್ರೀ ಕಳ್ಳಿಮನಿ ಇವರು ಈಗಾಗಲೇ ಘಟಕ ಮಹಾವಿದ್ಯಾಲಯದಲ್ಲಿ ಕಾರ್ಯನಿರ್ವಹಿಸಿರುತ್ತಾರೆ ಮತ್ತು ಡಾ. ಪೂಜಾ ಹಲ್ಯಾಳ ಇವರು ಒಂದು ಬಾರಿಯೂ ಘಟಕ ಮಹಾವಿದ್ಯಾಲಯದಲ್ಲಿ ಕಾರ್ಯನಿರ್ವಹಿಸಿರುವುದಿಲ್ಲ. ಕಾರಣ, ವರ್ಗಾವಣೆ ಸಂದರ್ಭದಲ್ಲಿ Rotation Policy ಜಾರಿ ಮಾಡಿ ಸರದಿ ಆಧಾರದ ಮೇಲೆ ಬೋಧಕ ಸಿಬ್ಬಂದಿಗಳನ್ನು ವರ್ಗಾಯಿಸುವುದು ಸೂಕ್ತ. ವಿಶ್ವವಿದ್ಯಾಲಯದಲ್ಲಿ ನೇಮಕ ಹೊಂದಿ ಘಟಕ ಮಹಾವಿದ್ಯಾಲಯದ ಬೋಧನಾ ಕಾರ್ಯಕ್ಕೆ ನಿಯೋಜಿಸಲು ನಿಯಮಾವಳಿಗಳಲ್ಲಿ ಅವಕಾಶದ ಬಗ್ಗೆ ಮಾಹಿತಿ ಒದಗಿಸಲು ಕೋರಿದರು.

ಪ್ರತಿಕ್ರಿಯಿಸಿದ ಮಾನ್ಯ ಕುಲಪತಿಗಳು, ಆಡಳಿತ ಮತ್ತು ಶೈಕ್ಷಣಿಕ ಹಿತದೃಷ್ಟಿಯಿಂದ ಬೋಧಕ ಸಿಬ್ಬಂದಿಗಳನ್ನು ವರ್ಗಾವಣೆಗೊಳಿಸಲಾಗಿದೆ. ಎಲ್ಲ ಸಿಬ್ಬಂದಿಗಳ ನೇಮಕಾತಿ ಆದೇಶದಲ್ಲಿಯು ಷರತ್ತು ಕೂಡ ವಿಧಿಸಲಾಗಿದೆ. ಕಾರಣ, ಪ್ರಸ್ತುತ ಹೊರಡಿಸುವ ಆದೇಶವನ್ನು ಪಾಲಿಸಿ ಕರ್ತವ್ಯಕ್ಕೆ ಹಾಜರಾಗುವುದು ಮತ್ತು Rotation Policy ಕುರಿತಾಗಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದರು. ಅದರಂತೆ, ವರ್ಗಾವಣೆ ಆದೇಶಕ್ಕೆ ಸಭೆಯು ಅನುಸಮರ್ಥನೆ ನೀಡಿತು.

<table>
<tr><td colspan="2">2026/02/ XVI</td><td colspan="3">ಡಾ. ಕಾವೇರಿ.ಎಚ್.ಎಂ:<br>1. ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳು ಪ್ರಕಟಣೆಗೊಂಡಿರುವ(Publications) ಪಟ್ಟಿಯನ್ನು ಮುಂಬರುವ ಸಭೆಯಲ್ಲಿ ಮಾಹಿತಿ ನೀಡುವುದು.</td></tr>
<tr><td colspan="2">2026/02/ XVII</td><td colspan="3">ವಿಶ್ವವಿದ್ಯಾಲಯದಲ್ಲಿ ನೂತನ ಕಟ್ಟಡ ಕಾಮಗಾರಿಯ ಗುಣಮಟ್ಟದ ಬಗ್ಗೆ ಖಾತ್ರಿಪಡಿಸಿಕೊಳ್ಳಲು Health and Family Welfare ಇಲಾಖೆಯಿಂದ ನಿರ್ಮಾಣವಾಗುತ್ತಿರುವ ಕಟ್ಟಡಗಳ ಕಾಮಗಾರಿಯ ಗುಣಮಟ್ಟದ ಬಗ್ಗೆ ಭೇಟಿ ನೀಡಿ ಪರಿಶೀಲಿಸಿ ವರದಿ ನೀಡಲು ಈ ಕೆಳಕಾಣಿಸಿದಂತೆ ಸಮಿತಿ ರಚಿಸಲು ಸಭೆಯು ತೀರ್ಮಾನಿಸಲಾಯಿತು..</td></tr>
<tr><td colspan="2">ತೀರ್ಮಾನ</td><td>ಸಂ</td><td>ಹೆಸರು</td><td>ಪದನಾಮ</td></tr>
<tr><td></td><td colspan="2">01</td><td>ಶ್ರೀ ಶಿವಪುತ್ರ ಎಸ್. ಖಣಗಾವಿ,<br>ನಿವೃತ್ತ ಮುಖ್ಯ ಅಭಿಯಂತರರು, ಬೆಳಗಾವಿ</td><td>ಅಧ್ಯಕ್ಷರು</td></tr>
<tr><td></td><td colspan="2">02</td><td>ಶ್ರೀ ವಿನೀತ್ ಜೋಶಿ,<br>ಸಿಂಡಿಕೇಟ್ ಸದಸ್ಯರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.</td><td>ಸದಸ್ಯರು</td></tr>
<tr><td></td><td colspan="2">03</td><td>ಶ್ರೀ ಈರಣ್ಣ ಹಪ್ಪಳಿ<br>ಸಿಂಡಿಕೇಟ್ ಸದಸ್ಯರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.</td><td>ಸದಸ್ಯರು</td></tr>
<tr><td></td><td colspan="2">04</td><td>ಡಾ. ಮಹಾಂತೇಶ ಕಂಬಾರ<br>ಸಿಂಡಿಕೇಟ್ ಸದಸ್ಯರು,ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.</td><td>ಸದಸ್ಯರು</td></tr>
<tr><td></td><td colspan="2">05</td><td>ರಫೀ ಭಂಡಾರಿ,<br>ಸಿಂಡಿಕೇಟ್ ಸದಸ್ಯರು,ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.</td><td>ಸದಸ್ಯರು</td></tr>
<tr><td></td><td colspan="2"></td><td>ಡಾ. ಡಿ. ಕೆ. ಕಾಂಬಳೆ<br>ಉಪಕುಲಸಚಿವರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.</td><td>ಸದಸ್ಯ ಕಾರ್ಯದರ್ಶಿಗಳು</td></tr>
<tr><td colspan="2">2026/02/ XVIII</td><td colspan="3">ವಿಶ್ವವಿದ್ಯಾಲಯದ ಮರಾಠಿ ವಿಭಾಗದಲ್ಲಿ 04 ಬೋಧಕ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಆದರೆ ವಿಭಾಗದಲ್ಲಿ ಪ್ರವೇಶ ಸಂಖ್ಯೆ ಕ್ಷೀಣಿಸುತ್ತಿದೆ. ಕಾರಣ, ಮರಾಠಿ ವಿಭಾಗವನ್ನು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇಲ್ಲಿಗೆ ಸ್ಥಳಾಂತರಿಸುವ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಯಿತು.<br>ಸದಸ್ಯರಾದ ಡಾ. ಕಾವೇರಿ. ಎಚ್.ಎಂ. ಇವರು ವಿಭಾಗದಲ್ಲಿ ಹೊಸ ಸಂಶೋಧನೆಗಳಿಗೆ/ಅಧ್ಯಯನಗಳನ್ನು ನಡೆಸಲು ಆದ್ಯತೆ ನೀಡಿದರೇ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತದೆ ಎಂದರು.<br>ಪ್ರೊ. ವ್ಹಿ. ಎಸ್. ಶಿಗೇಹಳ್ಳಿ ಇವರು ಬೆಳಗಾವಿ ಗಡಿಭಾಗವಾಗಿದ್ದು ಮರಾಠಿ ವಿಷಯಕ್ಕೆ ಪ್ರಾಶಸ್ತ್ಯ ನೀಡುವುದು ಅವಶ್ಯವಿರುತ್ತದೆ ಎಂದರು.<br>ಚರ್ಚಿಸಿದ ಸಭೆಯು, ಮುಂದಿನ ಶೈಕ್ಷಣಿಕ ವರ್ಷದ ಅವಧಿವರೆಗೆ ವಿಭಾಗಗಳ ಪ್ರವೇಶಾತಿ ಸಂಖ್ಯೆಯಲ್ಲಿ ಸುಧಾರಣೆ ಕಾಣದೇ ಹೋದರೆ ಮರಾಠಿ ವಿಭಾಗವನ್ನು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡಕ್ಕೆ ವರ್ಗಾಯಿಸಲು ಸರ್ಕಾರಕ್ಕೆ ಪತ್ರ ಬರೆಯಲು ತೀರ್ಮಾನಿಸಿತು. ಈ ಕುರಿತಂತೆ ವಿಭಾಗಗಳ ಅಧ್ಯಾಪಕರು ಪ್ರವೇಶಾತಿ ಸಂಖ್ಯೆಯನ್ನು ಹೆಚ್ಚಿಸಲು ಸಕ್ರಿಯವಾಗಿ ಭಾಗವಹಿಸುವಂತೆ ಸಭೆಯು ಸೂಚಿಸಿತು.</td></tr>
<tr><td colspan="2">2026/02/ XIX</td><td colspan="3">ಸದಸ್ಯರಾದ ರಫೀ ಭಂಡಾರಿ ಇವರು ಪ್ರತಿ ವರ್ಷ ವಿಶ್ವವಿದ್ಯಾಲಯದ ಕಾಲೇಜು ಅಭಿವೃದ್ಧಿ ಮಂಡಳಿಯಿಂದ ನಿಯೋಜನೆಯಾಗುವ "ಸ್ಥಳೀಯ ತನಿಖಾ ಸಮಿತಿ" ಯ ಅಧ್ಯಕ್ಷರ ಮತ್ತು</td></tr>
</table>

| | | |
|---|---|---|
| | | ಸದಸ್ಯರುಗಳಿಗೆ ವಸತಿ ವೆಚ್ಚವನ್ನು ವಿಶ್ವವಿದ್ಯಾಲಯದಿಂದ ಭರಿಸಲು ಸಲಹೆ ನೀಡಿದರು. ಕಾರಣ, ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯು ಸೂಚಿಸಿತು. |
| | 2026/02/ XX | ಪ್ರೊ. ಅಶೋಕ ಡಿಸೋಜಾ, ಪ್ರಾಧ್ಯಾಪಕರು, ಸಮಾಜಕಾರ್ಯ ವಿಭಾಗ ಇವರನ್ನು ಡಾ. ಅಂಬೇಡ್ಕರ ಅಧ್ಯಯನ ಪೀಠ" ದ ಸಲಹಾ ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ಸದರಿ ಸಿಬ್ಬಂದಿಗೆ ಈಗಾಗಲೇ ಹೆಚ್ಚುವರಿ ಜವಾಬ್ದಾರಿಗಳನ್ನು ಕೂಡ ನೀಡಲಾಗಿದೆ. ಇದರಿಂದಾಗಿ ಪೀಠದ ಅಭಿವೃದ್ಧಿ ಕುಂಠಿತವಾಗಬಹುದೆ ಎಂದು ಸದಸ್ಯರುಗಳು ಅಭಿಪ್ರಾಯ ವ್ಯಕ್ತಪಡಿಸಿದ ಹಿನ್ನಲೆಯಲ್ಲಿ ಸದರಿ ಪ್ರಾಧ್ಯಾಪಕರಿಗೆ ವಹಿಸಿರುವ ಹೆಚ್ಚುವರಿ ಜವಾಬ್ದಾರಿಗಳಿಂದ ಮುಕ್ತಗೊಳಿಸಲು ಸಭೆಯು ತೀರ್ಮಾನಿಸಿತು. |
| | 2026/02/ XXI | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ಪೀಠಗಳ ಎಲ್ಲಾ ಸಲಹಾ ಸಮಿತಿಗಳು, ವಿವಿಧ ಸಮಿತಿಗಳಲ್ಲಿ ಸದಸ್ಯರಾಗಿರುವವರ ಅವಧಿ ಮುಕ್ತಾಯದ ನಂತರ/ಸದಸ್ಯತ್ವ ಕಾರಣಾಂತರದಿಂದ ಬದಲಾದ ಅವಧಿಯಲ್ಲಿ ಅಭಿನಂದನಾ ಪತ್ರಗಳನ್ನು ಸದರಿಯವರಿಗೆ ಕಳುಹಿಸಲು ಸಭೆ ತೀರ್ಮಾನಿಸಿತು. |

ಕೊನೆಯದಾಗಿ, ಎಲ್ಲ ಸದಸ್ಯರುಗಳಿಗೆ ವಂದನೆಯನ್ನು ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗೂ ಅಧ್ಯಕ್ಷರು

ಇವರಿಗೆ,

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ

ಪ್ರತಿ ಮಾಹಿತಿಗಾಗಿ : ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 04, ಭೂತರಾಮನಹಟ್ಟಿ, ಬೆಳಗಾವಿ – 591156
(ನ್ಯಾಕ್ ಮಾನ್ಯತೆ B+ ಗ್ರೇಡ್– 2021)PM-USHA (MERU)
RANI CHANNAMMA UNIVERSITY
Vidyasangama, National Highway – 04, Bhootaramanahatti, Belagavi – 591156
(NAAC Accredited with B+ Grade – 2021) PM-USHA (MERU)
E-mail: registrar@rcub.ac.in
ಕುಲಸಚಿವರ ಕಾರ್ಯಾಲಯ
Office of the Registrar
Website: www.rcub.ac.in
Phone No.: 0831-2565234

ಕ್ರ.ಸಂ.: ರಾಚವಿಬೆ/ಕುಸಕಾ/ಜಿಎಡಿ/ಸಿಂಡಿಕೇಟ್/2025-26/6340 ದಿನಾಂಕ: 26 FEB 2026

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ
ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ,

ಮಾನ್ಯರೆ,

ವಿಷಯ: ದಿನಾಂಕ: 09-02-2026 ರಂದು ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಯ ಪ್ರತಿಯನ್ನು ಕಳುಹಿಸುವ ಕುರಿತು.

ಉಲ್ಲೇಖ: ಸಿಂಡಿಕೇಟ್ ಸಭೆ ನಡೆದ ದಿನಾಂಕ : 09-02-2026

ದಿನಾಂಕ : 09-02-2026 ರಂದು ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯಲ್ಲಿ ಮಾಡಿರುವ ಚರ್ಚೆ ಮತ್ತು ಕೈಕೊಳ್ಳಲಾಗಿರುವ ನಿರ್ಣಯಗಳ ಪ್ರತಿಯನ್ನು ಈ ಮೂಲಕ ತಮ್ಮ ಅವಗಾಹನೆಗಾಗಿ ಮತ್ತು ಧೃಡೀಕರಣಕ್ಕಾಗಿ ಕಳಿಸುತ್ತಿದ್ದೇನೆ. ಇದರಲ್ಲಿರುವ ಯಾವುದೇ ವಿಷಯಗಳ ಬಗ್ಗೆ ತಮ್ಮ ಸಹಮತಿ ಇಲ್ಲದಿದ್ದಲ್ಲಿ ಲಿಖಿತವಾಗಿ ಅಗತ್ಯ ಟಿಪ್ಪಣಿಗಳೊಂದಿಗೆ ದಿನಾಂಕ : 02-03-2026ರ ಒಳಗೆ ವಿಶ್ವವಿದ್ಯಾಲಯಕ್ಕೆ ಇ-ಮೇಲ್ ಮುಖಾಂತರ ಸಲ್ಲಿಸಲು ಕೋರಿದೆ.

ಯಾವುದೇ ವಿಷಯದ ಅಸಹಮತಿಯ, ಲಿಖಿತ ಟಿಪ್ಪಣಿ ನಿಗಧಿತ ಸಮಯದಲ್ಲಿ ಸ್ವೀಕರಿಸದೇ ಇದ್ದಲ್ಲಿ, ಎಲ್ಲಾ ವಿಷಯಗಳಿಗೆ ತಮ್ಮ ಧೃಡೀಕರಣ ಇದೆಯೆಂದು ಭಾವಿಸಿ, ಮುಂದಿನ ಕ್ರಮ ಜರುಗಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

26/2

ಸಂತೋಷ ಕಾಮಗೌಡ ಕೆ.ಎ.ಎಸ್.
ಕುಲಸಚಿವರು